ಫೆಬ್ರವರಿ 2014 ₹ 15/-

# ಯುಗಶ್ರೀ

ತ್ರೈಮಾಸಿಕ



- ಶಾಂತಿಯ ಸಂದೇಶ – ಜಾಗತಿಕ ಐಕ್ಯ
- ಜಾಗತಿಕ ಶಾಂತಿಯ ವಿಷಮ ಪರಿಸ್ಥಿತಿ
- ಮಹಿಳೆ ಇಸ್ಲಾಮ್‌ನಲ್ಲಿ
- ಮುಸ್ಲಿಮ್ ಲೋಕ ಇಮಾಮ್ ಮಹ್‌ದಿಯ ಅನ್ವೇಷಣೆಯಲ್ಲಿ

"ಓ ಮನುಷ್ಯರೇ, ನಾವು ನಿಮ್ಮನ್ನು ಗಂಡು ಮತ್ತು ಹೆಣ್ಣಿನಿಂದ ಸೃಷ್ಟಿಸಿದೆವು. ನೀವು ಪರಸ್ಪರ ಗುರುತಿಸಲ್ಪಡಲಿಕ್ಕಾಗಿ ನಿಮ್ಮನ್ನು ಕುಲಗಳನ್ನಾಗಿಯೂ ಗೋತ್ರಗಳನ್ನಾಗಿಯೂ ಮಾಡಿರುವೆವು. ನಿಮ್ಮ ಪೈಕಿ ಹೆಚ್ಚು ಸಾತ್ವಿಕನಾರೋ ಖಂಡಿತವಾಗಿಯೂ ಆತನೇ ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ಗೌರವಾರ್ಹನು. ದಿಟವಾಗಿಯೂ ಅಲ್ಲಾಹನು ಸರ್ವಜ್ಞನೂ ಎಲ್ಲ ಅರಿತವನೂ ಆಗಿದ್ದಾನೆ." (ಪವಿತ್ರ ಖುರ್‌ಆನ್ 49:14)

# ಯುಗರಶ್ಮಿ

ವಿಷಯ ಸೂಚಿಕೆ


| ವಿಷಯ | ಪುಟ |
|---|---|
| ☆ ಐಕ್ಯದ ಪ್ರಧಾನ್ಯ | 1 |
| ☆ ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು | 2 |
| ☆ ಶಾಂತಿಯ ಸಂದೇಶ – ಜಾಗತಿಕ ಐಕ್ಯ | 3 |
| ☆ ಜಾಗತಿಕ ಶಾಂತಿಯ ವಿಷಮ ಪರಿಸ್ಥಿತಿ | 9 |
| ☆ ಮಹಿಳೆ ಇಸ್ಲಾಮ್‌ನಲ್ಲಿ | 15 |
| ☆ ಮುಸ್ಲಿಮ್ ಲೋಕ ಇಮಾಮ್ ಮಹ್‌ದಿಯ ಅನ್ವೇಷಣೆಯಲ್ಲಿ | 29 |
| ☆ ಪ್ರತಿಕ್ರಿಯೆ : * ಅಹ್ಮದೀ ಮುಸ್ಲಿಮರು ಶಾಂತಿ ಪ್ರಿಯರು | 31 |
| * ಧರ್ಮವೊಂದೇ ಎಂಬುದು ನಿಜಕ್ಕೂ ಭ್ರಮೆ * ಖಂಡನೀಯ ಹೇಳಿಕೆ | 32 |
| ☆ ಓದಿದ್ದು : * "ಅವರು ತಮ್ಮ ಪುಸ್ತಕಗಳನ್ನು ಓದಲು ಎಂದೂ ನಮಗೆ ಅನುಮತಿ ನೀಡಲಿಲ್ಲ" – ಫಾರೂಖ್ ಅಹ್ಮದ್ ಮೌದೂದಿ (ಅಬುಲ್ ಆಲಾ ಮೌದೂದಿಯ ಪುತ್ರ) | 33 |
| * ಪಾಸ್ಟರ್ ಟೆರ್ರಿ ಜೋನ್ಸ್ 9/11 ಆಕ್ರಮಣಕ್ಕೆ ಪ್ರತಿಕಾರವಾಗಿ ಪ್ರಮಾದವಶಾತ್ 2000 ಬೈಬಲ್ ಪ್ರತಿಗಳನ್ನು ಸುಟ್ಟರು | 34 |
| * ಯುದ್ಧಾಪರಾಧ : ಜಮಾತ್ ಮುಖಂಡನಿಗೆ ಗಲ್ಲು ಶಿಕ್ಷೆ * 344 'ಜನರ ಕೊಂದಿದ್ದ ಬಾಂಗ್ಲಾ ಮುಲ್ಲಾಗೆ ಗಲ್ಲು * 'ಭಾರತಕ್ಕೆ ಟಿಪ್ಪು ಸುಲ್ತಾನ್ ಕೊಡುಗೆ ಅಪಾರ' | 35 |
| * ಗರ್ಭದಲ್ಲಿನ ಮಗು ಮಾತು ಆಲಿಸುತ್ತೆ! * ಯುದ್ಧ ಪೀಡಿತ ಸಿರಿಯಾದಲ್ಲಿ 'ಸೆಕ್ಸ್ ಜೆಹಾದ್' ಹಾವಳಿ! * ಜೆಹಾದ್ ಪುಸ್ತಕ ಪ್ರಕಟ : ಪ್ರಕಾಶಕ ಬಂಧನ | 36 |
| * ಮುಸ್ಲಿಂ ಬ್ರದರ್‌ಹುಡ್ ಸಂಸ್ಥೆಗೆ ಸ್ಥಾನಮಾನ ಇಲ್ಲ * ಕ್ರಿಸ್ತ ಹುಟ್ಟಿದ್ದಾದರೂ ಎಂದು? * 2ನೇ ಸಲವೂ ಶಿಕ್ಷಕರು ಫೇಲ್ | 37 |
| ☆ ವಾರ್ತೆಗಳು : * ಅಹ್ಮದಿಯಾ ಬುಕ್ ಸ್ಟಾಲ್ * ಅಹ್ಮದಿಯಾ ಶಾಂತಿ ಸಮ್ಮೇಳನ | 38 |
| ☆ ನಿಧನ ವಾರ್ತೆಗಳು | 38 |
| ☆ ಸಂಪಾದಕರಿಗೆ ಪತ್ರ | 39 |
| ☆ ಅಹ್ಮದಿಯರಿಗೆ ಸುತ್ತೋಲೆ | 39 |
| ☆ ಲಾಹೋರಿನ ಹುತಾತ್ಮರು | 40 |


ಮುಖಪುಟ ಚಿತ್ರ : ಅಹ್ಮದಿಯಾ ಮಸ್ಜಿದ್ "ಬೈತುಲ್ ಫುತೂಹ್" – ಲಂಡನಿನ ಮೋರ್ಡನ್‌ನಲ್ಲಿರುವ ಪಶ್ಚಿಮ ಯುರೋಪಿನ ಅತಿ ದೊಡ್ಡ ಮಸೀದಿ ಸಂಕೀರ್ಣ.


ಬಿಡಿ ಪ್ರತಿ : ರೂ.15/-  ವಾರ್ಷಿಕ ಚಂದಾ : ರೂ.60/-  ಅಂಚೆ ಮೂಲಕ : ರೂ.70/-

ವಿಳಾಸ : 10 -23-1008/1, 1ನೇ ಮಹಡಿ, ಅನ್ಸಾರಿ ರಸ್ತೆ, ಬಂದರ್, ಮಂಗಳೂರು - 575 0 0 1

بِسۡمِ اللّٰہِ الرَّحۡمٰنِ الرَّحِیۡمِ

نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ

# ಯುಗರಶ್ಮಿ


ಫೆಬ್ರವರಿ 2014

ಆರಂಭ : 1975 | ಸಂಪುಟ : 30 | ತಬ್ಲೀಗ್ 1393 ಹಿಜರೀ ಶಮ್ಸೀ | ಸಂಚಿಕೆ : 3-4

ಸಂಪಾದಕ : ಮುಹಮ್ಮದ್ ಯೂಸುಫ್


## ಐಕ್ಯದ ಪ್ರಾಧಾನ್ಯ

ಯಾವುದೇ ರೀತಿಯಿಂದಲೂ ನಿವಾರಿಸಲು ಸಾಧ್ಯವಿಲ್ಲದ ವಿಪತ್ತುಗಳನ್ನೂ ಕಷ್ಟಗಳನ್ನೂ ಐಕ್ಯದಿಂದ ದೂರೀಕರಿಸಲು ಸಾಧ್ಯವೆಂಬುದು ಸ್ಪಷ್ಟ. ಐಕ್ಯದ ವರದಾನಗಳಿಂದ ತನ್ನನ್ನು ಬೇರ್ಪಡಿಸಲು ಯಾವನೇ ಬುದ್ಧಿವಂತನು ಸಿದ್ಧನಾಗಲಾರನು. ಹಿಂದೂ ಮತ್ತು ಮುಸ್ಲಿಮ್ ಈ ರಾಷ್ಟ್ರದ ಎರಡು ಸಮುದಾಯಗಳಾಗಿವೆ. ಇವುಗಳಲ್ಲಿ ಯಾವುದಾದರೂ ಒಂದು ಸಮುದಾಯವು ಯಾವಾಗಲಾದರೂ ಒಂದಾಗಿ ಇನ್ನೊಂದು ಸಮುದಾಯವನ್ನು – ಹಿಂದೂಗಳು ಒಟ್ಟುಗೂಡಿ ಮುಸ್ಲಿಮರನ್ನೋ ಅಥವಾ ಮುಸ್ಲಿಮರು ಒಟ್ಟು ಸೇರಿ ಹಿಂದೂಗಳನ್ನೋ – ಈ ರಾಷ್ಟ್ರದಿಂದ ಹೊರದಬ್ಬಲು ಆಲೋಚಿಸುವುದಾದರೆ, ಅದು ಅಸಂಭವನೀಯ ಹಾಗೂ ಭ್ರಮೆ ಮಾತ್ರವಾಗಿದೆ. ಬದಲಾಗಿ, ಈ ಎರಡೂ ಸಮುದಾಯಗಳನ್ನು ಒಟ್ಟುಗೂಡಿಸುವ ಬಂಧವು ಭೇದಿಸಲಾಗದಷ್ಟು ಶಕ್ತಯುತವಾಗಿದೆ. ಇವರಲ್ಲಿ ಒಂದು ಸಮುದಾಯಕ್ಕೆ ಏನಾದರೊಂದು ವಿಪತ್ತು ಸಂಭವಿಸಿದರೆ ಮತ್ತೊಂದು ಸಮುದಾಯಕ್ಕೆ ಸಹ ಅದರ ಬಾಧೆ ತಟ್ಟದಿರಲಿಕ್ಕಿಲ್ಲ. ಒಂದು ಸಮುದಾಯವು ಅಹಂಭಾವದಿಂದ ಮತ್ತೊಂದು ಸಮುದಾಯವನ್ನು ನಿಂದಿಸುವುದಾದರೆ ಅಥವಾ ಅವಹೇಳನವನ್ನುಂಟುಮಾಡುವುದಾದರೆ ಆ ಸಮುದಾಯವು ಸಹ ಅದೇ ರೀತಿಯ ನಿಂದನೆಗೂ ಅವಹೇಳನಕ್ಕೂ ಗುರಿಯಾಗುವುದು. ಒಂದು ಸಮುದಾಯವು ಇನ್ನೊಂದು ಸಮುದಾಯದೊಡನೆ ಅನುಕಂಪವನ್ನು ತೋರಿಸದಿದ್ದರೆ ಪರಸ್ಪರ ಅನುಕಂಪ ಲಭಿಸಲಾರದು. ಒಂದು ಸಮುದಾಯದ ಒಬ್ಬ ವ್ಯಕ್ತಿ ಇನ್ನೊಂದು ಸಮುದಾಯಕ್ಕೆ ನಾಶವನ್ನುಂಟುಮಾಡಲು ನೋಡುವನಾದರೆ, ತಾನು ಕುಳಿತಿರುವ ಮರದ ಕೊಂಬೆಯನ್ನು ತನ್ನ ಕೈಯಿಂದಲೇ ಕಡಿಯುವವನಂತಾಗುವನು. ದೇವಾನುಗ್ರಹದಿಂದ ನೀವೀಗ ವಿದ್ಯಾಸಂಪನ್ನರಾಗಿದ್ದೀರಿ. ಈ ಸಂದರ್ಭದಲ್ಲಿ ನೀವು ಎಲ್ಲ ವಿಧದ ಹಗೆ, ದ್ವೇಷಗಳನ್ನು ನಿಮ್ಮ ಹೃದಯಗಳಿಂದ ದೂರೀಕರಿಸಿ, ಪರಸ್ಪರ ಮೈತ್ರಿಯಿಂದಲೂ ಕ್ಷೇಮಾಕಾಂಕ್ಷೆಯಿಂದಲೂ ಮುನ್ನಡೆಯುವುದು ವಿವೇಕಯುತವಾಗಿದೆ. ನಿರ್ದಾಕ್ಷಿಣ್ಯವನ್ನು ಉಪೇಕ್ಷಿಸಿ ಅನುಕಂಪಭಾವವನ್ನು ಕೈಗೊಳ್ಳಬೇಕಾದ ಸಮಯವು ಸನ್ನಿಹಿತವಾಗಿದೆ. ಐಹಿಕ ಜೀವನ ಯಾತ್ರೆಯು ಕಠಿಣವಾದ ಬಿಸಿಲಿನಲ್ಲಿ ಮರುಭೂಮಿಯಲ್ಲಿ ಸಂಚರಿಸುವುದಕ್ಕೆ ತುಲ್ಯವಾಗಿದೆ. ಆದುದರಿಂದ ದುರ್ಗಮ ಪಥದ ಈ ಯಾತ್ರೆಯ ಬಿಸಿಲನ್ನು ತಣಿಸಲಿಕ್ಕೂ ಆಯಾಸದ ಉಪಶಮನಕ್ಕೂ ಮೈತ್ರಿಯೆಂಬ ಶೀತಲ ಜಲ ನಿಮಗೆ ಅತ್ಯಾವಶ್ಯಕವಾಗಿದೆ. (ಮೈತ್ರಿ ಸಂದೇಶ)

**–ಹಝ್ರತ್ ಮಿರ್ಝಾ ಗುಲಾಂ ಅಹ್ಮದ್**

ಅಹ್ಮದಿಯಾ ಸಂಘಟನೆಯ ಸ್ಥಾಪಕರು

# ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು

❖ ಐಹಿಕಾಡಂಬರಗಳನ್ನು ನೀನು ಕೈಬಿಡು. ಆಗ ಅಲ್ಲಾಹನು ನಿನ್ನನ್ನು ಮೆಚ್ಚುವನು. ಜನರ ಬಳಿ ಇರುವುದನ್ನು ನೀನು ಮೋಹಿಸಬಾರದು. ಆಗ ಜನರು ಸಹ ನಿನ್ನನ್ನು ಮೆಚ್ಚುವರು. (ಇಬ್ನು ಮಾಜಃ)

❖ ಪ್ರತಿಯೊಂದು ಸಮುದಾಯ ಒಂದೊಂದು ಪರೀಕ್ಷೆಗೆ ಗುರಿಯಾಗಿದೆ. ನನ್ನ ಜನತೆಗಿರುವ ಪರೀಕ್ಷೆ ಧನವಾಗಿದೆ. (ತಿರ್ಮಿದಿ)

❖ ಅಲ್ಲಾಹು ಪ್ರದಾನ ಮಾಡಿದುದರಲ್ಲಿ ಸಂತೃಪ್ತ ಮತ್ತು ಉಪಜೀವನಕ್ಕೆ ಮಾತ್ರ ಆಹಾರವುಳ್ಳ ಸತ್ಯ ವಿಶ್ವಾಸಿ ವಿಜಯಗಳಿಸಿದವನಾಗಿದ್ದಾನೆ. (ಮುಸ್ಲಿಂ)

❖ ಧನವನ್ನು ನೀನು ಕಟ್ಟಿ ಬಚ್ಚಿಡಬಾರದು. ಹಾಗೆ ಮಾಡಿದರೆ ಅಲ್ಲಾಹು ನಿನ್ನೊಡನೆ ಸಹ ಹಾಗೆಯೇ ಮಾಡುವನು. (ಮುತ್ತಫಿಕ್ ಅಲೈಹಿ)

❖ ಧನವು ಧರ್ಮಮಾಡಿದುದರಿಂದ ಕಮ್ಮಿಯಾಗಲಿಕ್ಕಿಲ್ಲ. ಕ್ಷಮೆ ನೀಡುವುದರಿಂದ ಪ್ರತಾಪ ಹೆಚ್ಚಾಗುತ್ತದೆ. ಅಲ್ಲಾಹನೊಡನೆ ವಿನಯ ತೋರಿಸುವವನನ್ನು ಅವನು ಮೇಲೆತ್ತುತ್ತಾನೆ. (ಮುಸ್ಲಿಂ)

❖ ಹೃದಯದಲ್ಲಿ ಒಂದು ಅಣುಮಾತ್ರವಾದರೂ ಅಹಂಭಾವವುಳ್ಳವನು ಸ್ವರ್ಗವನ್ನು ಪ್ರವೇಶಿಸಲಾರ. (ಮುಸ್ಲಿಂ)

❖ ಅಂತ್ಯ ದಿನದಂದು ಸತ್ಯ ವಿಶ್ವಾಸಿಯ ತ್ರಾಸಿನಲ್ಲಿ ಸತ್‌ಸ್ವಭಾವಕ್ಕಿಂತ ಭಾರ ತೂಗುವ ಬೇರೇನೂ ಇಲ್ಲ. ನಿಶ್ಚಯವಾಗಿಯೂ ನೀಚ ಮಾತನ್ನಾಡುವ ದುಸ್ವಭಾವಿಯೊಡನೆ ಅಲ್ಲಾಹನು ಕೋಪಿಸುವನು. (ತಿರ್ಮಿದಿ)

❖ ಒಬ್ಬ ಸತ್ಯವಿಶ್ವಾಸಿಗೆ ತನ್ನ ಸತ್‌ಸ್ವಭಾವದಿಂದ (ಸದಾ) ವ್ರತವನ್ನನುಷ್ಠಿಸುವವನ ಮತ್ತು ಪ್ರಾರ್ಥಿಸುವವನ ಪದವಿಗಳನ್ನು ಗಳಿಸಲು ಸಾಧ್ಯವಿದೆ. (ಅಬೂ ದಾವೂದ್)

❖ ನಿಶ್ಚಯವಾಗಿಯೂ ಅಲ್ಲಾಹನು ದಯೆಯುಳ್ಳವನೂ ಎಲ್ಲ ಕಾರ್ಯಗಳಲ್ಲಿ ದಯೆಯನ್ನು ಇಷ್ಟಪಡುವವನೂ ಆಗಿದ್ದಾನೆ. (ಬುಖಾರಿ, ಮುಸ್ಲಿಂ)

❖ ನೀವು ಸುಲಭ ಮಾರ್ಗವನ್ನು ಕೈಗೊಳ್ಳಿರಿ. ಪ್ರಯಾಸಕರವಾದುದನ್ನು ಕೈಬಿಡಿರಿ. ಅದೇ ಪ್ರಕಾರ ನೀವು ಸಂತೋಷದ ಮಾತುಗಳನ್ನಾಡಿರಿ; ಕೋಪಗೊಳಿಸಬೇಡಿರಿ. (ಬುಖಾರಿ, ಮುಸ್ಲಿಂ)

# ಶಾಂತಿಯ ಸಂದೇಶ - ಜಾಗತಿಕ ಐಕ್ಯ

**ಬೆಲ್ಜಿಯಮ್ ದೇಶದ ಬೆಸ್ರೆಲ್ಸ್‌ನ ಯುರೋಪಿಯನ್ ಪಾರ್ಲಿಮೆಂಟ್‌ನಲ್ಲಿ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸರ್ವೋನ್ನತ ನಾಯಕ, ಪಂಚಮ ಖಲೀಫರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು 4-12-2012ರಂದು ಮಾಡಿದ ಮುಖ್ಯ ಭಾಷಣ.**



ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಮ್-ಪರಮ ದಯಾವಂತನೂ ಕಾರುಣ್ಯ ನಿಧಿಯೂ ಆದ ಅಲ್ಲಾಹನ ನಾಮದಿಂದ (ಪ್ರಾರಂಭಿಸುತ್ತೇನೆ).

ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತುಹೂ - ಅಲ್ಲಾಹನ ಶಾಂತಿ ಮತ್ತು ಅನುಗ್ರಹಗಳು ನಿಮ್ಮ ಮೇಲಿರಲಿ.

ಈ ಸಮಾರಂಭವನ್ನು ಸಂಘಟಿಸಿ ಯುರೋಪಿಯನ್ ಪಾರ್ಲಿಮೆಂಟಿನಲ್ಲಿ ನಿಮ್ಮೊಂದಿಗೆ ಮಾತನಾಡಲು ನನಗೆ ಸಂದರ್ಭ ಒದಗಿಸಿ ಕೊಟ್ಟವರಿಗೆ ನಾನು ಮೊತ್ತ ಮೊದಲು ಕೃತಜ್ಞತೆ ಅರ್ಪಿಸುತ್ತೇನೆ. ಈ ಸಮಾರಂಭದಲ್ಲಿ ಭಾಗವಹಿಸಲು ಬಹಳ ಪ್ರಯತ್ನಪಟ್ಟು ಆಗಮಿಸಿದ ವಿವಿಧ ದೇಶಗಳ ಪ್ರತಿನಿಧಿಗಳಿಗೆ ಮತ್ತು ಇತರ ಅತಿಥಿಗಳಿಗೆ ಸಹ ನಾನು ಕೃತಜ್ಞನಾಗಿದ್ದೇನೆ.

ಅಹ್ಮದಿಯಾ ಮುಸ್ಲಿಮ್ ಜಮಾಅತ್ ಅಥವಾ ಸಂಘಟನೆ ಬಗ್ಗೆ ಚೆನ್ನಾಗಿ ತಿಳಿದುಕೊಂಡವರಿಗೆ ಮತ್ತು ಕೆಲವು ಅಹ್ಮದಿ ಮಿತ್ರರೊಂದಿಗೆ ಸಂಪರ್ಕ ಹೊಂದಿರುವ ಕಾರಣ ಸ್ವಲ್ಪ ಮಟ್ಟಿಗೆ ಈ ಸಂಘಟನೆಯ ಪರಿಚಯವಿರುವವರಿಗೆ, ನಾವು ಲೋಕದಲ್ಲಿ ಶಾಂತಿ ಮತ್ತು ಭದ್ರತೆ ಸ್ಥಾಪಿಸಲು ಪ್ರಯತ್ನ ಮಾಡುತ್ತಾ ಇರುವ ಸಮುದಾಯ ಎಂದು ತಿಳಿದಿದೆ. ಖಂಡಿತವಾಗಿಯೂ ನಾವು ಈ ಉದ್ದೇಶ ಲಕ್ಷ್ಯಗಳನ್ನು ಈಡೇರಿಸಲು ನಮ್ಮ ಸಂಪನ್ಮೂಲಗಳ ಮಿತಿಯೊಳಗೆ ಪರಿಪೂರ್ಣ ಪ್ರಯತ್ನ ಮಾಡುತ್ತಾ ಇದ್ದೇವೆ.

ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸರ್ವೋಚ್ಚ ನಾಯಕನ ನೆಲೆಯಲ್ಲಿ ನಾನು ಈ ವಿಷಯಗಳಿಗೆ ಸಂಬಂಧಿಸಿ ಸಂದರ್ಭ ದೊರೆತಾಗಲೆಲ್ಲಾ ಸದಾ ಮಾತನಾಡುತ್ತೇನೆ. ಶಾಂತಿ ಮತ್ತು ಪರಸ್ಪರ ಪ್ರೀತಿಯ ಬಗ್ಗೆ ನಾನು ಪ್ರಸ್ತಾಪಿಸುವುದು ಯಾವುದಾದರೂ ಹೊಸ ತತ್ವೋಪದೇಶಗಳನ್ನು ಅಹ್ಮದಿಯಾ ಸಂಘಟನೆ ರೂಪಿಸಿದ ಕಾರಣದಿಂದಲ್ಲ. ಅಹ್ಮದಿಯಾ ಜಮಾಅತಿನ ಸ್ಥಾಪಕರ ಆಗಮನದ ಮುಖ್ಯ ಉದ್ದೇಶಗಳಲ್ಲೊಂದು ಶಾಂತಿ ಮತ್ತು ಸೌಹಾರ್ದ ಸ್ಥಾಪಿಸುವುದಾಗಿದೆಯಾದರೂ ನಮ್ಮ ಎಲ್ಲಾ ಚಟುವಟಿಕೆಗಳು ವಾಸ್ತವಿಕವಾಗಿ ಹೊಂದಿಕೊಂಡಿರುವುದು ಹಝ್ರತ್ ಮುಹಮ್ಮದ್ ಪೈಗಂಬರರರಿಗೆ(ಸ) ಅಲ್ಲಾಹನಿಂದ ಅವತೀರ್ಣವಾದ ಉಪದೇಶಗಳನ್ನಾಗಿದೆ.

ಪವಿತ್ರ ಪೈಗಂಬರರ(ಸ) ಆಗಮನದ ನಂತರ ದಾಟಿಹೋದ 1400 ವರ್ಷಗಳಲ್ಲಿ ಅವರು ಉಪದೇಶಿಸಿದ ಪರಿಶುದ್ಧ ತತ್ವಗಳನ್ನು ದುರದೃಷ್ಟಕರವಾಗಿ ಮುಸ್ಲಿಮರಲ್ಲಿ ಬಹುತೇಕ ಜನರು ದೀರ್ಘಕಾಲದಿಂದ ಮರೆತು ಬಿಟ್ಟಿರುವರು. ಆದುದರಿಂದ ನೈಜ ಇಸ್ಲಾಮ್ ಧರ್ಮವನ್ನು ಪುನಶ್ಚೇತನಗೊಳಿಸಲು ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಅವರನ್ನು ಅಲ್ಲಾಹನು ಹಝ್ರತ್ ಪೈಗಂಬರರ(ಸ) ಭವಿಷ್ಯವಾಣಿ ಪ್ರಕಾರ ಕಳುಹಿಸಿರುವನು. ಲೋಕದಲ್ಲಿ ಶಾಂತಿ ಮತ್ತು ಸೌಹಾರ್ದ ಸ್ಥಾಪನೆ ಬಗ್ಗೆ ಇಸ್ಲಾಮಿನ ಉಪದೇಶಗಳನ್ನು ನಾನು ಪ್ರತಿಪಾದಿಸುವಾಗ ನಾನು ಪ್ರಸ್ತಾವಿಕವಾಗಿ ಹೇಳಿದ ಈ ಮಾತುಗಳನ್ನು ನೆನಪಿನಲ್ಲಿಡಬೇಕೆಂದು ಕೋರುತ್ತೇನೆ.

ಶಾಂತಿ ಮತ್ತು ಸುರಕ್ಷೆ ವಿವಿಧ ಆಯಾಮಗಳನ್ನು ಹೊಂದಿವೆ. ಪ್ರತಿಯೊಂದು ಅಂಶವು ಮುಖ್ಯವಾಗಿದ್ದು ವಿವಿಧ ಅಂಶಗಳ ಪರಸ್ಪರ ಜೋಡಣೆ ಸಹ ಅತ್ಯಂತ ಮುಖ್ಯವಾಗಿದೆ. ಉದಾಹರಣೆಗೆ, ಸಮಾಜದಲ್ಲಿ ಶಾಂತಿ, ಸೌಹಾರ್ದ ಸ್ಥಾಪನೆಗೆ ಅಸ್ತಿಭಾರವಾಗಿರುವುದು ಕುಟುಂಬದೊಳಗೆ ಶಾಂತಿ ಮತ್ತು ಸೌಹಾರ್ದವಾಗಿದೆ. ಮನೆಯೊಳಗಿರುವ ಕುಟುಂಬದ ಪರಿಸ್ಥಿತಿ ಮನೆಗೆ ಮಾತ್ರ ಸೀಮಿತವಾಗಿರುವುದಿಲ್ಲ. ಮನೆಯೊಳಗಿನ ಅಶಾಂತಿ ಆ ಮನೆಯಿರುವ ಪ್ರದೇಶದ ಶಾಂತಿಯನ್ನು ಕೆಡಿಸುತ್ತದೆ.

ವಿವಿಧ ಮನೆಗಳಲ್ಲಿ ತಲೆದೋರುವ ಅಶಾಂತಿ ಪಟ್ಟಣ ಅಥವಾ ನಗರವನ್ನು ಬಾಧಿಸುತ್ತದೆ. ಒಂದು ಮನೆಯಲ್ಲಿ ಜಗಳ ಉಂಟಾದರೆ ಅದರಿಂದ ಅದರ ಸುತ್ತಮುತ್ತಲೂ ಕೆಟ್ಟ ಪ್ರಭಾವ ಉಂಟಾಗುತ್ತದೆ. ಇದು ಹೆಚ್ಚಾಗಿ ಪಟ್ಟಣವನ್ನೂ ನಗರವನ್ನೂ ಅಶಾಂತಿಗೀಡು ಮಾಡುತ್ತದೆ. ಇದೇ ರೀತಿ ಪಟ್ಟಣಗಳಲ್ಲಿ ಮತ್ತು ನಗರಗಳಲ್ಲಿ ತಲೆದೋರುವ ಶಾಂತಿಭಂಗ ದೇಶವನ್ನು ಬಾಧಿಸುತ್ತದೆ. ದೇಶಗಳಲ್ಲಿ ತಲೆದೋರುವ ಅಶಾಂತಿ ಆ ಪ್ರದೇಶದ ಅಥವಾ ಲೋಕದ ಶಾಂತಿ ಮತ್ತು ಸೌಹಾರ್ದವನ್ನು ಬಾಧಿಸುತ್ತದೆ. ಅದುದರಿಂದ ಶಾಂತಿಯ ಬಗ್ಗೆ ಒಂದು ಅಂಶವನ್ನು ವಿವರಿಸುವುದಾದರೆ ಆ ವಿವರಣೆ ಸೀಮಿತವಾಗಿರದೆ ವಿಶಾಲವಾಗುತ್ತಾ ಹೋಗುವುದು. ಇದೇ ರೀತಿ ಎಲ್ಲಿಯಾದರೂ ಶಾಂತಿಗೆ ಭಂಗವುಂಟಾದರೆ, ಶಾಂತಿ ಸ್ಥಾಪಿಸಲು ವಿವಿಧ ಮಾರ್ಗಗಳನ್ನು ಅನುಸರಿಸಬೇಕಾಗುತ್ತದೆ. ಶಾಂತಿ ಭಂಗವುಂಟಾಗಲು ಕಾರಣವೇನೆಂದು ಪರಿಶೀಲಿಸಿ, ಸೂಕ್ತವಾದ ಪರಿಹಾರ ಮಾರ್ಗಗಳನ್ನು ನಿರ್ದೇಶಿಸಬೇಕಾಗುತ್ತದೆ. ಇವೆಲ್ಲ ವಿಷಯಗಳನ್ನು ಪರಾಂಬರಿಸುವಾಗ ಈ ವಿಷಯದ ಬಗ್ಗೆ ಸವಿಸ್ತಾರವಾಗಿ ಪ್ರಸ್ತಾಪಿಸಲು ಈಗ ಲಭ್ಯವಿರುವ ಸಮಯಕ್ಕಿಂತ ಹೆಚ್ಚು ಸಮಯ ಬೇಕಾಗುತ್ತದೆ. ಹೀಗಿದರೂ ಈ ವಿಷಯಕ್ಕೆ ಸಂಬಂಧಿಸಿದ ಇಸ್ಲಾಮಿನ ನೈಜ ತತ್ವಗಳ ಕೆಲ ಅಂಶಗಳ ಬಗ್ಗೆ ವಿವರಿಸಲು ಪ್ರಯತ್ನಿಸುವೆನು.

ಆಧುನಿಕ ಲೋಕದಲ್ಲಿ ಇಸ್ಲಾಮಿನ ವಿರುದ್ಧ ಅನೇಕ ಆಕ್ಷೇಪಗಳನ್ನು ಮಾಡಲಾಗುತ್ತಿದೆ. ಇಂದಿನ ಕಾಲದಲ್ಲಿ ಲೋಕದಲ್ಲಿ ಸಂಭವಿಸುತ್ತಿರುವ ಅಸ್ತವ್ಯಸ್ತತೆಗೆ ಮತ್ತು ಸಂಘರ್ಷಗಳಿಗೆ ಇಸ್ಲಾಮ್ ಕಾರಣವೆಂದು ನಿಂದಿಸಲಾಗುತ್ತಿದೆ. ಇಸ್ಲಾಮ್ ಎಂಬ ಶಬ್ದದ ಅರ್ಥ ಶಾಂತಿ ಮತ್ತು ಸುರಕ್ಷೆ ಎಂದಾಗಿದ್ದರೂ ಇಂತಹ ದೋಷಾರೋಪಗಳನ್ನು ಮಾಡಲಾಗುತ್ತಿದೆ.

ಶಾಂತಿಯನ್ನು ಸ್ಥಾಪಿಸುವುದು ಹೇಗೆ ಎನ್ನುವುದರ ಬಗ್ಗೆ ಇಸ್ಲಾಮ್ ಸ್ಪಷ್ಟ ಮಾರ್ಗದರ್ಶನಗಳನ್ನು ಮತ್ತು ಅದಕೋಸ್ಕರ ಕೆಲವು ಆಜ್ಞೆಗಳನ್ನು ನೀಡಿದೆ. ಇಸ್ಲಾಮಿನ ನೈಜ ಮತ್ತು ಶಾಂತಿ ಪ್ರತಿಪಾದಕ ಉಪದೇಶಗಳನ್ನು ವಿವರಿಸುವ ಮೊದಲು ನಾನು ಲೋಕದ ಇಂದಿನ ಸ್ಥಿತಿಯ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸುವೆನು. ನಿಮಗೆ ಈ ವಿಷಯಗಳ ಬಗ್ಗೆ ಚೆನ್ನಾಗಿ ತಿಳಿದಿರಬಹುದೆಂದು ನಾನು ನಂಬುತ್ತೇನೆ. ಆದರೆ ನಾನು ಶಾಂತಿ ಮತ್ತು ಸೌಹಾರ್ದದ ಬಗ್ಗೆ ಇಸ್ಲಾಮಿನ ಉಪದೇಶಗಳನ್ನು ವಿವರಿಸುವಾಗ ನೀವು ಈ ವಿಷಯಗಳನ್ನು ಗಮನದಲ್ಲಿರಿಸಲಿಕ್ಕೋಸ್ಕರ ಅವುಗಳ ಬಗ್ಗೆ ಹೇಳುತ್ತಿರುವೆನು. ನಮಗೆಲ್ಲರಿಗೂ ತಿಳಿದಿದೆ ಮತ್ತು ನಾವು ಅಂಗೀಕರಿಸುತ್ತೇವೆ– ಇಂದಿನ ಕಾಲದಲ್ಲಿ ಲೋಕವು ಒಂದು ಜಾಗತಿಕ ಗ್ರಾಮವಾಗಿದೆ ಎಂದು. ವಿವಿಧ ದೇಶಗಳಲ್ಲಿರುವ ಎಲ್ಲರೂ ಪರಸ್ಪರ ಸಂಬಂಧ ಸ್ಥಾಪಿಸಿದ್ದಾರೆ. ಆಧುನಿಕ ಸಂಚಾರ ವ್ಯವಸ್ಥೆ ಮೂಲಕ, ಸಂಪರ್ಕ ಮಾಧ್ಯಮಗಳ ಮೂಲಕ, ಇಂಟರ್‌ನೆಟ್ ಮೂಲಕ ಮತ್ತು ಇತರ ಅನೇಕ ಮಾಧ್ಯಮಗಳ ಮೂಲಕ. ಈ ಕಾರಣಗಳಿಂದ ಲೋಕದ ವಿವಿಧ ದೇಶಗಳೂ, ಜನಾಂಗಗಳೂ ಮೊದಲಿಗಿಂತ ಹೆಚ್ಚು ನಿಕಟ ಸಂಬಂಧ ಹೊಂದಿರುತ್ತವೆ. ಲೋಕದ ಪ್ರಧಾನ ದೇಶಗಳಲ್ಲಿ ವಿವಿಧ ಬುಡಕಟ್ಟಿನ, ವಿವಿಧ ಧರ್ಮಗಳ, ವಿವಿಧ ಜನಾಂಗಗಳ ಜನರು ಒಟ್ಟಿಗೆ ಜೀವಿಸುತ್ತಿರುವುದಾಗಿ ನಾವು ಕಾಣುತ್ತೇವೆ. ಅನೇಕ ದೇಶಗಳಲ್ಲಿ ವಿದೇಶಿ ವಲಸೆಗಾರರು ವಾಸಿಸುತ್ತಿದ್ದಾರೆ. ವಿದೇಶಿ ವಲಸೆಗಾರರು ಎಷ್ಟು ಚೆನ್ನಾಗಿ ನೆಲೆಸಿದ್ದಾರೆಂದರೆ ಅವರನ್ನು ಹೊರಗೆ ಕಳುಹಿಸಲು ಈಗ ಸರಕಾರಗಳಿಗೆ ಮತ್ತು ಸ್ಥಳೀಯ ಜನರಿಗೆ ಅಸಾಧ್ಯವೇ ಆಗಿದೆ. ವಲಸೆಯನ್ನು ತಡೆಗಟ್ಟಲು ಪ್ರಯತ್ನ ಮಾಡಲಾಗುತ್ತಿದೆಯಾದರೂ ಮತ್ತು ಕೆಲವು ನಿಬಂಧನೆಗಳನ್ನು ಹೇರಲಾಗಿದ್ದರೂ, ವಿವಿಧ ರೀತಿಗಳಲ್ಲಿ ಒಂದು ದೇಶದ ನಾಗರಿಕ ಇನ್ನೊಂದು ದೇಶಕ್ಕೆ ಪ್ರವೇಶಿಸಲು ಶಕ್ತನಾಗುತ್ತಿದ್ದಾನೆ. ನಿಯಮ ವಿರುದ್ಧ ವಲಸೆಯಲ್ಲದೆ, ಅಂತರ‍್ರಾಷ್ಟ್ರೀಯ ನಿಯಮಗಳು ವಲಸೆ ಹೋಗಲು ಬಲಾತ್ಕರಿಸಲ್ಪಟ್ಟ ಜನರಿಗೆ ಅವರು ನೈಜ ಕಾರಣಗಳಿಂದ ನಿರ್ಬಂಧಿಸಲ್ಪಟ್ಟಿದ್ದರೆ ಸಹಾಯಕವಾಗಿವೆ. ಕೆಲವು ದೇಶಗಳಲ್ಲಿ ವಲಸೆಗಾರರ ಸಂಖ್ಯೆ ಅಧಿಕವಾಗಿದ್ದರೆ ವಲಸೆಗಾರರ ಮತ್ತು ಅಲ್ಲಿನ ಮೂಲ ನಿವಾಸಿಗಳ ಬಗ್ಗೆ ಆತಂಕ ಭರಿತ ಪರಿಸ್ಥಿತಿ ತಲೆದೋರುತ್ತದೆ. ಇದರ ಹೊಣೆಗಾರಿಕೆ ವಲಸೆಗಾರರು ಮತ್ತು ಸ್ಥಳೀಯ ಜನರು– ಈ ಎರಡು ಗುಂಪುಗಳ ಮೇಲಿದೆ. ಒಂದು ಕಡೆ, ವಲಸೆಗಾರರು ಸ್ಥಳೀಯ ಜನರೊಂದಿಗೆ ಸ್ವಲ್ಪ ಮಟ್ಟಿಗಾದರೂ ಹೊಂದಿಕೊಂಡು ಜೀವಿಸಲು ಪ್ರಯತ್ನಿಸುವುದಿಲ್ಲ ಮತ್ತು ಸ್ಥಳೀಯ ಜನರನ್ನು ಉದ್ರೇಕಗೊಳ್ಳುವಂತೆ ಮಾಡುತ್ತಾರೆ. ಇನ್ನೊಂದು ಕಡೆ, ಸ್ಥಳೀಯ ಜನರು ಸಹನೆಯನ್ನು ಮತ್ತು ವಿಶಾಲ ಮನೋಭಾವನೆಯನ್ನು ಪ್ರಕಟಿಸುವುದಿಲ್ಲ. ಕ್ರಮೇಣ ಪರಸ್ಪರ ದ್ವೇಷ ವರ್ಧಿಸಿ ಅಪಾಯಕಾರಿ ಮಟ್ಟವನ್ನು ತಲುಪುತ್ತದೆ. ಪಶ್ಚಿಮದ ದೇಶಗಳಲ್ಲಿ ಸ್ಥಳೀಯ ಜನರ ದ್ವೇಷವು, ಹೆಚ್ಚಾಗಿ ಇಸ್ಲಾಮಿನ ವಿರುದ್ಧವಾಗಿರುತ್ತದೆ. ಇದಕ್ಕೆ ಕಾರಣ ಕೆಲವು ಮುಸ್ಲಿಮರ ಮತ್ತು ಮುಖ್ಯವಾಗಿ ವಲಸೆ ಬಂದವರ ಋಣಾತ್ಮಕ ಮನೋಭಾವವಾಗಿದೆ. ಕೋಪ ಮತ್ತು ಅದಕ್ಕೆದುರಾಗಿರುವ ಪ್ರತಿಕ್ರಿಯೆ ಚಿಕ್ಕಮಟ್ಟದಲ್ಲಿರದೆ ಅತ್ಯಂತ ಉಗ್ರ ಸ್ಥಿತಿಯನ್ನು ತಲುಪುತ್ತದೆ. ಇದೇ ಕಾರಣದಿಂದ ಪಾಶ್ಚಿಮಾತ್ಯ ದೇಶಗಳ ನಾಯಕರು ಈ ಸಮಸ್ಯೆಗಳ ಬಗ್ಗೆ ಆಗಾಗ ಪ್ರಸ್ತಾಪಿಸುತ್ತಾ ಇರುತ್ತಾರೆ. ಆದುದರಿಂದ ನಾವು ಕಾಣುವುದು ಏನೆಂದರೆ ಜರ್ಮನಿಯ ಚಾನ್ಸಿಲರ್, ಮುಸ್ಲಿಮರು ಜರ್ಮನಿಯ ಭಾಗವಾಗಿದ್ದಾರೆ ಎಂದು ಹೇಳುವಾಗ ಯುನೈಟೆಡ್ ಕಿಂಗ್‌ಡಮ್‌ನ ಪ್ರಧಾನಮಂತ್ರಿ, ಮುಸ್ಲಿಮರು ಸ್ಥಳೀಯ ನಿವಾಸಿಗಳೊಂದಿಗೆ ಹೊಂದಿಕೊಂಡು ಜೀವಿಸಬೇಕೆಂದು ಹೇಳುತ್ತಾರೆ. ಕೆಲವು ದೇಶಗಳ ನಾಯಕರು ಮುಸ್ಲಿಮರಿಗೆ ಮುನ್ನೆಚ್ಚರಿಕೆ ಕೂಡ ನೀಡಿದ್ದಾರೆ. ಆಂತರಿಕ ಕಲಹಗಳು ಮಿತಿಮೀರಿ ಹೋಗಿಲ್ಲವಾದರೂ, ಅದರ ಬಗ್ಗೆ ಕಾಳಜಿ ಹೊಂದಬೇಕಾಗಿದೆ. ಈ ಸಮಸ್ಯೆಗಳು ನೇರವಾಗಿ ಶಾಂತಿಭಂಗಕ್ಕೆ ಹೇತುವಾಗಬಲ್ಲದು. ಇಂತಹ ಸಂಘರ್ಷಗಳ ದುಷ್ಪರಿಣಾಮಗಳು ಪಶ್ಚಿಮ ದೇಶಗಳಿಗೆ ಸೀಮಿತವಾಗದೆ ಅದು ಲೋಕವನ್ನು ಬಾಧಿಸುವುದು. ವಿಶಿಷ್ಟವಾಗಿ ಮುಸ್ಲಿಮ್ ದೇಶಗಳನ್ನು ಇದರ ಫಲ ಸ್ವರೂಪವಾಗಿ ಪಾಶ್ಚಿಮಾತ್ಯ ಮತ್ತು ಪೌರತ್ಯ ಲೋಕಗಳ ಮಧ್ಯೆ ಇರುವ ಸಂಬಂಧಗಳು ತೀವ್ರವಾಗಿ ಕೆಟ್ಟು ಹೋಗುವುವು. ಆದುದರಿಂದ ಈ ಪರಿಸ್ಥಿತಿಯನ್ನು ಸುಧಾರಿಸಲು ಮತ್ತು ಶಾಂತಿಯನ್ನು ಸ್ಥಾಪಿಸಲು ಎಲ್ಲ ಗುಂಪುಗಳ ಜನರು ಒಟ್ಟಿಗೆ ಪ್ರಯತ್ನಿಸಬೇಕು. ಸರಕಾರಗಳು ಧೋರಣೆಗಳನ್ನು ರೂಪಿಸಿ ವಿವಿಧ ಗುಂಪುಗಳ ಜನರ ಪರಸ್ಪರ ಗೌರವಿಸುವಂತೆ ಮಾಡುವ ಮತ್ತು ವಿವಿಧ ಗುಂಪುಗಳ ಜನರ ಗೌರವವನ್ನು ರಕ್ಷಿಸುವ ನಿಯಮಗಳನ್ನು ಜಾರಿಗೊಳಿಸಿ ಅನ್ಯರ ಭಾವನೆಗಳನ್ನು ನೋಯಿಸುವ ಅಥವಾ ಹಾನಿಗೊಳಿಸುವ ಚಟುವಟಿಕೆಗಳನ್ನು ನಿಯಮಬಾಹಿರವೂ ಶಿಕ್ಷಾರ್ಹವೂ ಆಗಿದೆ ಎಂದು ಘೋಷಿಸಬೇಕು.

ವಲಸೆ ಬಂದ ಜನರು ಸ್ಥಳೀಯ ಜನರೊಂದಿಗೆ ಹೊಂದಿಕೊಂಡು ಹೋಗಲು ಪ್ರಯತ್ನಿಸಬೇಕು ಮತ್ತು ಸ್ಥಳೀಯ ಜನರು ವಿಶಾಲ ಹೃದಯುರೂ ಸಹನೆದೋರುವವರು ಆಗಬೇಕು. ಕೆಲವು ನಿಯಂತ್ರಣಗಳನ್ನು ಮುಸ್ಲಿಮರ ಮೇಲೆ ಹೇರುವುದರಿಂದ ಶಾಂತಿ ಸ್ಥಾಪಿತವಾಗದು. ಏಕೆಂದರೆ ಅವುಗಳು ಮಾತ್ರ ಜನರ ಮನೋಭಾವನೆ ಮತ್ತು ಅಭಿಪ್ರಾಯಗಳನ್ನು ಬದಲಾಯಿಸುವಂತೆ ಮಾಡಲು ಸಾಧ್ಯವಾಗದು. ಇದು ವಿಶಿಷ್ಟವಾಗಿ ಮುಸ್ಲಿಮರಿಗೆ ಸಂಬಂಧಿಸಿ ಹೇಳಿದುದಲ್ಲ. ಒಬ್ಬ ಮನುಷ್ಯನನ್ನು ಅವನು ನಂಬುವ ಧರ್ಮದ ಕಾರಣ ಬಲಾತ್ಕಾರಪಡಿಸಿದರೆ ಅದರಿಂದ ಉಂಟಾಗುವ ಋಣಾತ್ಮಕ ಪ್ರತಿಕ್ರಿಯೆಗಳಿಂದ ಶಾಂತಿ ಭಂಗವಾಗುವುದು. ನಾನು ಇದರ ಮೊದಲು ಹೇಳಿದ ಹಾಗೆ ಕೆಲವು ದೇಶಗಳಲ್ಲಿ ಸ್ಥಳೀಯ ಜನರು ಮತ್ತು ಮುಸ್ಲಿಮ್ ವಲಸೆಗಾರರ ಮಧ್ಯೆ ಘರ್ಷಣೆ ವರ್ಧಿಸುತ್ತಾ ಇದೆ. ಎರಡು ಪಕ್ಷಗಳ ಜನರು ಸಹನೆಗೆಡುತ್ತಿದ್ದಾರೆ ಮತ್ತು ಪರಸ್ಪರ ಅರಿತುಕೊಳ್ಳಲು ನಿರಾಸಕ್ತರಾಗಿದ್ದಾರೆ ಎನ್ನುವುದು ತೋರುತ್ತಾ ಇದೆ. ಯುರೋಪಿನ ನಾಯಕರು ಈ ವಾಸ್ತವಿಕತೆಯನ್ನು ಮನವರಿಕೆ ಮಾಡಿಕೊಳ್ಳಬೇಕು ಮತ್ತು ವಿವಿಧ ಧರ್ಮದ ಜನರು ಪರಸ್ಪರ ಗೌರವಿಸುವ ಮನೋಭಾವವನ್ನು ಹೊಂದುವಂತೆ ಮಾಡುವ ಹೊಣೆಗಾರಿಕೆ ತಮ್ಮದಾಗಿದೆ ಎಂದು ತಿಳಿದುಕೊಳ್ಳಬೇಕು. ಯುರೋಪಿನ ಎಲ್ಲ ದೇಶಗಳೊಳಗೆ ಹಾಗೂ ಯುರೋಪಿಯನ್ ಮತ್ತು ಮುಸ್ಲಿಮ್ ದೇಶಗಳ ಮಧ್ಯೆ ಸೌಹಾರ್ದದ ಪರಿಸ್ಥಿತಿ ಉಂಟಾಗಬೇಕಾದುದು ಜಾಗತಿಕ ಶಾಂತಿಯು ಭಂಗವಾಗದಿರಲು ಅವಶ್ಯಕವಾಗಿದೆ.

ನಾನು ನಂಬುವುದೇನೆಂದರೆ, ಈ ಸಂಘರ್ಷಗಳಿಗೆ ಕಾರಣ ಧಾರ್ಮಿಕ ನಂಬಿಕೆಗಳು ಹಾಗೂ ಪಾಶ್ಚಿಮಾತ್ಯ ಮತ್ತು ಮುಸ್ಲಿಮ್ ಜನಾಂಗಗಳ ವ್ಯತ್ಯಾಸಗಳು ಮಾತ್ರವಲ್ಲ. ವಾಸ್ತವಿಕವಾಗಿ ಈ ಸಂಘರ್ಷಗಳ ಮುಖ್ಯ ಕಾರಣ ಜಾಗತಿಕ ಆರ್ಥಿಕ ಬಿಕ್ಕಟ್ಟಾಗಿದೆ. ಆರ್ಥಿಕ ಹಿನ್ನಡೆ ಅಥವಾ ಸಾಲದ ದೌರ್ಬಲ್ಯದ ಪ್ರಶ್ನೆ ಇಲ್ಲದ ಸಂದರ್ಭದಲ್ಲಿ ವಲಸೆಗಾರರ ಆಗಮನದ ಬಗ್ಗೆ ಯಾರೂ ಲಕ್ಷ್ಯ ನೀಡುತ್ತಿರಲಿಲ್ಲ. ಮುಸ್ಲಿಮರು, ಮುಸ್ಲಿಮೇತರರು ಅಥವಾ ಆಫ್ರಿಕನರು  ವಲಸೆ ಬಂದ ಬಗ್ಗೆ ಆಕ್ಷೇಪಿಸುತ್ತಿರಲಿಲ್ಲ. ಆದರೆ ಈಗ ಆ ಪರಿಸ್ಥಿತಿ ಬದಲಾಗಿದೆ. ಅದರ ಕಾರಣ ಈಗಿನ ಸ್ಥಿತಿ ಸಂಭವಿಸಿದೆ. ಯುರೋಪಿಯನ್ ದೇಶಗಳ ಪರಸ್ಪರ ಸಂಬಂಧ ಸಹ ಬಿಗಡಾಯಿಸಿದೆ. ಕೆಲವು ಯುರೋಪಿಯನ್ ದೇಶಗಳ ಜನರು ಬೇರೆ ಕೆಲವು ಯುರೋಪಿಯನ್ ದೇಶಗಳ ಜನರ ವಿರುದ್ಧ ಕೋಪ ಮತ್ತ ಅಸಂತೃಪ್ತಿಯನ್ನು ದಿನಂಪ್ರತಿ ಪ್ರಕಟಿಸುತ್ತಾ ಇರುವುದು ಹೆಚ್ಚಾಗುತ್ತಾ ಇದೆ. ಇಂತಹ ನಿರಾಶಾದಾಯಕ ಸ್ಥಿತಿ ಎಲ್ಲಾ ಕಡೆಗಳಲ್ಲೂ ಕಾಣಿಸುತ್ತಾ ಇದೆ.

ಯುರೋಪಿಯನ್ ದೇಶಗಳು ಯುರೋಪಿಯನ್ ಯೂನಿಯನ್ ಎಂಬ ಒಕ್ಕೂಟ ಸ್ಥಾಪಿಸಿದ್ದು ಬಹಳ ದೊಡ್ಡ ಯಶಸ್ಸಾಗಿದೆ. ಆ ಮೂಲಕ ಯುರೋಪ್ ಖಂಡವು ಐಕ್ಯತೆ ಸ್ಥಾಪಿಸಿದೆ. ಯುರೋಪಿಯನ್ ದೇಶದ ಎಲ್ಲ ಜನರು ಈ ಐಕ್ಯತೆಯನ್ನು ಸಂರಕ್ಷಿಸಲು ಪರಿಶ್ರಮ ಮಾಡುವವರಾಗಬೇಕು ಮತ್ತು ಪರಸ್ಪರ ಹಕ್ಕುಗಳನ್ನು ಗೌರವಿಸಬೇಕು. ಜನಸಾಮಾನ್ಯರ ಭಯಗಳನ್ನು ಮತ್ತು ಚಿಂತೆಗಳನ್ನು ನಿವಾರಿಸಬೇಕು. ಪರಸ್ಪರ ಸಮಾಜಗಳನ್ನು ರಕ್ಷಿಸಲು ಒಬ್ಬರಿನ್ನೊಬ್ಬರ ನ್ಯಾಯಬದ್ಧ ಬೇಡಿಕೆಗಳನ್ನು ಈಡೇರಿಸಬೇಕು. ಪ್ರತಿಯೊಂದು ದೇಶದ ಜನರು ನ್ಯಾಯಬದ್ಧ ಮತ್ತು ಉತ್ತಮವಾದ ಬೇಡಿಕೆಗಳನ್ನು ಮಾತ್ರ ಸರಕಾರಗಳ ಮುಂದಿರಿಸಬೇಕು.

ಯುರೋಪಿನ ಶಕ್ತಿ ಅದರ ಐಕ್ಯತೆಯಲ್ಲಿ ಮತ್ತು ಒಗ್ಗೂಡಿ ಇರುವುದರಲ್ಲಿ ಅಡಕವಾಗಿದೆ ಎಂದು ನೆನಪಿಡಿರಿ. ಇಂತಹ ಐಕ್ಯತೆ ಯುರೋಪಿನಲ್ಲಿರುವ ನಿಮಗೆ ಪ್ರಯೋಜನಕರವಾಗುವುದಲ್ಲದೆ ಜಾಗತಿಕ ಮಟ್ಟದಲ್ಲಿ ಸಹ ಯುರೋಪ್ ಖಂಡ ತನ್ನ ಶಕ್ತಿ ಮತ್ತು ಪ್ರಭಾವವನ್ನು ಕಾಪಾಡಲು ಸಹಾಯಕವಾಗುವುದು. ವಾಸ್ತವಿಕವಾಗಿ ಇಸ್ಲಾಮಿಕ ದೃಷ್ಟಿಕೋನದಿಂದ ಹೇಳುವುದಾದರೆ, ನಾವು ಜಾಗತಿಕ ಐಕ್ಯಕ್ಕೋಸ್ಕರ ಕಠಿಣ ಪರಿಶ್ರಮ ಮಾಡಬೇಕು. ನಾಣ್ಯ, ನೋಟುಗಳಿಗೆ ಸಂಬಂಧಿಸಿ ಜಾಗತಿಕ ಐಕ್ಯತೆ ಇರಬೇಕು. ಸ್ವತಂತ್ರ ವ್ಯಾಪಾರದ ಬಗ್ಗೆ ಜಗತ್ತು ಐಕ್ಯಮತ್ಯ ಹೊಂದಬೇಕು. ಸಂಚಾರ ಸ್ವಾತಂತ್ರ್ಯ ಮತ್ತು ವಲಸೆಹೋಗುವ ಬಗ್ಗೆ ಒಮ್ಮತದಿಂದ ಪ್ರಾಯೋಗಿಕ ಧೋರಣೆಗಳನ್ನು ರೂಪಿಸಬೇಕು. ಆ ಮೂಲಕ ಲೋಕದಲ್ಲಿ ಐಕ್ಯತೆ ಸ್ಥಾಪಿಸವಾಗಬೇಕು. ಮುಖ್ಯವಾಗಿ ದೇಶಗಳು ಪರಸ್ಪರ ಸಹಕಾರ ಮನೋಭಾವದಿಂದ ವರ್ತಿಸಬೇಕು. ಇದರಿಂದ ಪರಸ್ಪರ ಭಿನ್ನಾಭಿಪ್ರಾಯಗಳು ಹೋಗಲಾಡಿಸಲ್ಪಡುವುವು. ಈ ಕ್ರಮಗಳನ್ನು ಕೈಗೊಳ್ಳುವುದಾದರೆ ಈಗಿರುವ ಸಂಘರ್ಷಗಳು ಕೊನೆಗೊಳ್ಳುವುದಾಗಿ ಕಾಣಿಸಿಕೊಳ್ಳುವುದು. ಶಾಂತಿ ಮತ್ತು ಪರಸ್ಪರ ಗೌರವ ಆದರ ಬದಲಾಗಿ ಸ್ಥಾಪಿತವಾಗುವುವು. ಆದರೆ ಇದಕ್ಕೋಸ್ಕರ ಸತ್ಯಸಂಧವಾದ ನ್ಯಾಯ ಪಾಲನೆಯನ್ನು ಅನುಷ್ಠಾನಿಸುವ ಹೊಣೆಗಾರಿಕೆಯನ್ನು ಪ್ರತಿಯೊಂದು ದೇಶ ಮನವರಿಕೆ ಮಾಡಿಕೊಳ್ಳುವುದು ಅವಶ್ಯಕವಾಗಿದೆ. ಬಹಳ ಖೇದ ಪೂರ್ವಕವಾಗಿ ನಾನು ಹೇಳಲು ಬಯಸುವುದೇನೆಂದರೆ ನಾನು ಹೇಳುವುದು ಇಸ್ಲಾಮಿನ ತತ್ವೋಪದೇಶಗಳಿಗೆ ಅನುಸಾರವಾಗಿದ್ದರೂ ಮುಸ್ಲಿಮ್ ದೇಶಗಳು ಪರಸ್ಪರ ಐಕ್ಯತೆಯಿಂದ ವರ್ತಿಸಲು ವಿಫಲವಾಗಿವೆ. ಮುಸ್ಲಿಮ್ ದೇಶಗಳು ಪರಸ್ಪರ ಸಹಕರಿಸಲು ಮತ್ತು ಐಕ್ಯತೆಯಿಂದ ಇರಲು ಸಾಧ್ಯವಾಗುವುದಾದರೆ, ಅವು ನಿರಂತರವಾಗಿ ಪಶ್ಚಿಮದ ದೇಶಗಳ ಸಹಾಯವನ್ನು ತಮ್ಮ ಆಂತರಿಕ ತೊಂದರೆಗಳನ್ನು ನಿವಾರಿಸಲು ಮತ್ತು ತಮ್ಮ ಅವಶ್ಯಕತೆಗಳನ್ನು ಈಡೇರಿಸಲು ಅವಶ್ಯಪಡುವ ಅಗತ್ಯ ಉಂಟಾಗಲಾರದು.

ಈ ಪ್ರಸ್ತಾವನೆಯ ನಂತರ ಲೋಕದಲ್ಲಿ ದೀರ್ಘಕಾಲ ಶಾಂತಿ ಸ್ಥಾಪನೆಗೊಳ್ಳುವ ಬಗ್ಗೆ ಇಸ್ಲಾಮಿನ ನೈಜ ತತ್ವೋಪದೇಶಗಳನ್ನು ವಿವರಿಸುತ್ತೇನೆ. ಮೊದಲನೆಯದಾಗಿ, ಇಸ್ಲಾಮಿನ ಮೂಲ ತತ್ವಗಳಲ್ಲಿ ಒಂದು ಹೀಗಿದೆ:  ಸತ್ಯಸಂಧನಾದ ಒಬ್ಬ ಮುಸ್ಲಿಮನು ಹೇಗಿರಬೇಕು ಎಂದರೆ ಅವನ ನಾಲಗೆಯಿಂದಲೂ ಕೈಗಳಿಂದಲೂ ಇತರ ಎಲ್ಲಾ ಶಾಂತಿಪ್ರಿಯ ಜನರು ಹಾನಿ ಅನುಭವಿಸುವುದರಿಂದ ಸುರಕ್ಷಿತರಾಗಿರುವರು. ಇದು ಹಝ್‌ರತ್ ಮುಹಮ್ಮದ್ ಪೈಗಂಬರರು[ಸ] ಮುಸ್ಲಿಮ್ ಪದಕ್ಕೆ ನೀಡಿದ ಅರ್ಥ ವಿವರಣೆಯಾಗಿದೆ. ಈ ಮೂಲಭೂತ ಇಸ್ಲಾಮಿಕ ತತ್ವವನ್ನು ಆಲಿಸಿದ ನಂತರ ಯಾವುದೇ ದೋಷಾರೋಪ ಇಸ್ಲಾಮಿನ  ವಿರುದ್ಧ ಮಾಡಲು ಸಾಧ್ಯವೇ? ಖಂಡಿತವಾಗಿಯೂ ಸಾಧ್ಯವಿಲ್ಲ. ತಮ್ಮ ನಾಲಗೆಗಳನ್ನೂ ಕೈಗಳನ್ನೂ ಅನ್ಯಾಯ ಮತ್ತು ದ್ವೇಷವನ್ನು ಹರಡಲು ಪ್ರಯೋಗಿಸುವವರನ್ನು  ಶಿಕ್ಷಿಸಬೇಕೆಂದು

ಇಸ್ಲಾಮ್ ಉಪದೇಶಿಸುತ್ತದೆ. ಆದುದರಿಂದ ಪ್ರಾದೇಶಿಕ ಮಟ್ಟದಿಂದ ಜಾಗತಿಕ ಮಟ್ಟದ ತನಕ ಎಲ್ಲಾ ಪಕ್ಷಗಳ ಜನರು ಈ ಸುವರ್ಣ ತತ್ವದ ಪರಿಮಿತಿಯೊಳಗೆ ವರ್ತಿಸುವುದಾದರೆ ಲೋಕದಲ್ಲಿ ಎಂದೂ ಧಾರ್ಮಿಕ ಸಂಘರ್ಷಗಳುಂಟಾಗಲಾರವು. ರಾಜಕೀಯ ಸಂಘರ್ಷಗಳು, ದುರಾಶೆ ಮತ್ತು ಅಧಿಕಾರ ಪಡೆಯುವ ಹಂಬಲಗಳು ಉಂಟಾಗಲಾರವು. ಇಸ್ಲಾಮಿನ ಈ ತತ್ವೋಪದೇಶಗಳನ್ನು ಅನುಸರಿಸಿ ವರ್ತಿಸುವುದಾದರೆ, ಪ್ರತಿ ದೇಶದೊಳಗೆ ದೇಶವಾಸಿಗಳು ಒಬ್ಬರಿನ್ನೊಬ್ಬರ ಹಕ್ಕುಗಳನ್ನು ಮತ್ತು ಭಾವನೆಗಳನ್ನು ರಕ್ಷಿಸುವರು ಮತ್ತು ಸರಕಾರಗಳು ಎಲ್ಲಾ ನಾಗರಿಕರನ್ನು ರಕ್ಷಿಸುವ ತಮ್ಮ ಹೊಣೆಗಾರಿಕೆಗಳನ್ನು ಈಡೇರಿಸುವುವು. ಜಾಗತಿಕ ಮಟ್ಟದಲ್ಲಿ ಪ್ರತಿಯೊಂದು ದೇಶ ಇತರ ದೇಶಗಳೊಂದಿಗೆ ಸತ್ಯಸಂಧವಾದ ಸಹಾನುಭೂತಿಯಿಂದಲೂ ದಯಾಭಾವದಿಂದಲೂ ವರ್ತಿಸುವುದು.

ಇಸ್ಲಾಮ್ ಉಪದೇಶಿಸುವ ಇನ್ನೊಂದು ಮುಖ್ಯ ತತ್ವವೇನೆಂದರೆ, ಶಾಂತಿಯನ್ನು ಸ್ಥಾಪಿಸಲು ಪ್ರಯತ್ನಿಸುವಾಗ ಎಲ್ಲಾ ಪಕ್ಷಗಳು ಹೆಮ್ಮೆಯಿಂದ ಅಥವಾ ದುರಹಂಕಾರದಿಂದ ವರ್ತಿಸಬಾರದು ಎಂಬುದು ಅವಶ್ಯಕವಾಗಿದೆ. ಈ ತತ್ವವನ್ನು ಹಝ್ರತ್ ಪೈಗಂಬರರು[ಸ] ಬಹಳ ಚೆನ್ನಾಗಿ ವಿಶದೀಕರಿಸಿರುವರು. ಅವರು ಹೀಗೆ ಹೇಳಿದ ಮಾತುಗಳು ಬಹಳ ಪ್ರಸಿದ್ಧವಾಗಿವೆ: ಒಬ್ಬ ಕಪ್ಪು ಮನುಷ್ಯನು ಬಿಳಿ ಮನುಷ್ಯನಿಗಿಂತ ಶ್ರೇಷ್ಠನಲ್ಲ. ಒಬ್ಬ ಬಿಳಿ ಮನುಷ್ಯನು ಕಪ್ಪು ಮನುಷ್ಯನಿಗಿಂತ ಶ್ರೇಷ್ಠನಲ್ಲ. ಆದುದರಿಂದ ಒಬ್ಬ ಯುರೋಪಿಯನ್ ಮನುಷ್ಯನು ಬೇರೆ ಯಾವುದೇ ಜನಾಂಗದವನಿಗಿಂತ ಶ್ರೇಷ್ಠನೆಂದು ಗಣಿಸಬಾರದು, ಇದೇ ರೀತಿ ಆಫ್ರಿಕನರು, ಏಶಿಯಾದವರು ಅಥವಾ ಲೋಕದ ಬೇರೆ ಯಾವುದೇ ಜನಾಂಗದವರು ಅನ್ಯ ಜನಾಂಗದವರಿಗಿಂತ ಶ್ರೇಷ್ಠರೆಂದು ಗಣಿಸಬಾರದು. ಜನಾಂಗೀಯ, ವರ್ಗೀಯ, ವರ್ಣೀಯ ಮತ್ತು ಬುಡಕಟ್ಟು ಸಂಬಂಧ ವ್ಯತ್ಯಾಸಗಳು ವಿವಿಧ ಜನಸಮೂಹಗಳನ್ನು ಗುರುತಿಸಲು ಸಹಕಾರಿಯಾಗುವಂಥವುಗಳು ಮಾತ್ರವಾಗಿವೆ.

ಆಧುನಿಕ ಲೋಕದಲ್ಲಿ ನಾವೆಲ್ಲರೂ ಒಬ್ಬರಿನ್ನೊಬ್ಬರನ್ನು ಆಶ್ರಯಿಸಿರುತ್ತೇವೆ. ಇಂದಿನ ಕಾಲದಲ್ಲಿ ಮಹಾಶಕ್ತಿ ರಾಷ್ಟ್ರಗಳಾದ ಯುರೋಪ್ ಮತ್ತು ಯು.ಎಸ್.ಎ. ಕೂಡ ತಮ್ಮನ್ನು ಅನ್ಯ ದೇಶಗಳಿಂದ ಸಂಪೂರ್ಣವಾಗಿ ಬೇರ್ಪಡಿಸಿ ಬಾಳಲಾರವು. ಇದೇ ರಿತಿ ಆಫ್ರಿಕನ್ ದೇಶಗಳು ತಮ್ಮನ್ನು ಅನ್ಯ ದೇಶಗಳಿಂದ ದೂರಸರಿಸಿ ಅಭಿವೃದ್ಧಿ ಹೊಂದಲಾರವು. ಏಶಿಯನ್ ದೇಶಗಳು ಮತ್ತು ಲೋಕದ ಯಾವುದೇ ಪ್ರದೇಶದ ಜನತೆ ಸ್ವಯಂ ಪ್ರಗತಿ ಪಥದಲ್ಲಿ ಸಾಗಲಾರವು. ಉದಾಹರಣೆಗೆ ಹೇಳುವುದಾದರೆ, ನಿಮ್ಮ ಅರ್ಥಿಕ ವ್ಯವಸ್ಥೆ ಅಭಿವೃದ್ಧಿ ಹೊಂದಬೇಕಾದರೆ ನೀವು ಜಾಗತಿಕ ವಾಣಿಜ್ಯ ವ್ಯವಸ್ಥೆಯಲ್ಲಿ ಭಾಗವಹಿಸಬೇಕಾಗುತ್ತದೆ. ಈಗ ಲೋಕದ ದೇಶಗಳು ಪರಸ್ಪರ ಜೋಡಿಸಲ್ಪಟ್ಟಿವೆ ಎನ್ನುವುದಕ್ಕೆ ಒಂದು ಸ್ಪಷ್ಟ ಉದಾಹರಣೆ ಯುರೋಪಿನ ಮತ್ತು ಜಗತ್ತಿನ ಅರ್ಥಿಕ ಮುಗ್ಗಟ್ಟು ಕಳೆದ ಕೆಲವು ವರ್ಷಗಳಲ್ಲಿ ಹೆಚ್ಚು ಕಡಿಮೆ ಎಲ್ಲಾ ದೇಶಗಳ ಮೇಲೆ ಹಾನಿಕಾರಕ ಪ್ರಭಾವ ಉಂಟು ಮಾಡಿದೆ. ಇದಲ್ಲದೆ ದೇಶಗಳು ವಿಜ್ಞಾನ ಕ್ಷೇತ್ರದಲ್ಲಿ ಪ್ರಗತಿ ಪಡೆಯಲು ಮತ್ತು ಇತರ ಕ್ಷೇತ್ರಗಳಲ್ಲಿ ತರಬೇತಿ ಮತ್ತು ನೈಪುಣ್ಯ ಪಡೆಯಲು ಪರಸ್ಪರ ಸಹಕರಿಸುವುದು ಮತ್ತು ಸಹಾಯ ಮಾಡುವುದು ಅತ್ಯಾವಶ್ಯಕವಾಗಿದೆ.

ನಾವು ಯಾವಾಗಲೂ ಒಂದು ವಿಷಯವನ್ನು ಜ್ಞಾಪಕದಲ್ಲಿಡಬೇಕು. ಲೋಕದ ಎಲ್ಲ ಜನರಿಗೆ ಅವರು ಯುರೋಪಿನವರಾಗಲಿ, ಆಫ್ರಿಕಾದವರಾಗಲಿ, ಏಷ್ಯಾದವರಾಗಲಿ ಅಥವಾ ಬೇರೆ ಯಾವುದೇ ಪ್ರದೇಶದವರಾಗಲಿ, ಸರ್ವಶಕ್ತನಾದ ಅಲ್ಲಾಹನು ಅವರಿಗೆ ಹಿರಿಯ ಮಟ್ಟದ ಬುದ್ಧಿಶಕ್ತಿಯನ್ನು ದಯಪಾಲಿಸಿರುವನು. ಲೋಕದಲ್ಲಿರುವ ಎಲ್ಲ ವಿಭಾಗದ ಜನರು ತಮಗೆ ದೇವನಿಂದ ವರದಾನವಾಗಿ ದೊರೆತ ಸಾಮರ್ಥ್ಯಗಳನ್ನು ಪೂರ್ಣ ರೀತಿಯಲ್ಲಿ ಬಳಸುವುದಾದರೆ ಲೋಕವು ಶಾಂತಿಧಾಮವಾಗಿ ಪರಿವರ್ತಿತವಾಗುವುದು. ಆದರೆ ಅಭಿವೃದ್ಧಿ ಹೊಂದಿದ ದೇಶಗಳು ಅವರಿಗಿಂತ ಕಡಿಮೆ ಅಭಿವೃದ್ಧಿ ಹೊಂದಿದ ದೇಶಗಳನ್ನು ಮತ್ತು ಅಭಿವೃದ್ಧಿಶೀಲ ದೇಶಗಳನ್ನು ಅದುಮಿ ಹಾಕಿ ಅಲ್ಲಿನ ಬುದ್ಧಿಶಾಲಿಯಾದ ಜನರಿಗೆ ಪ್ರಗತಿಗಳಿಸುವ ಸಂದರ್ಭಗಳನ್ನು ಒದಗಿಸಿ ಕೊಡದಿದ್ದರೆ ಆಗ ನಿಶ್ಚಿತವಾಗಿಯೂ ಆ ದೇಶಗಳ ಆತಂಕ ವರ್ಧಿಸುವುದು ಮತ್ತು ಅದರ ಫಲಸ್ವರೂಪವಾಗಿ ಅಂತರ್ರಾಷ್ಟ್ರೀಯ ಶಾಂತಿ ಮತ್ತು ಭದ್ರತೆ ಕೆಟ್ಟು ಹೋಗುವುದು.

ಇಸ್ಲಾಮ್ ಧರ್ಮ ಪ್ರತಿಪಾದಿಸುವ ಇನ್ನೊಂದು ತತ್ವ, ಅನ್ಯರಿಗೆ ಅನ್ಯಾಯವಾಗುವುದನ್ನು ಮತ್ತು ಅನ್ಯರ ಹಕ್ಕುಗಳು ಕಸಿಯಲ್ಪಡುವುದನ್ನು ನಾವು ಸಹಿಸಬಾರದೆಂದಾಗಿದೆ. ಇದೇ ರೀತಿ ನಾವು ನಮ್ಮ ಹಕ್ಕುಗಳನ್ನು ಅಂಗೀಕರಿಸಿ ಅನ್ಯರಿಗೆ ಆ ಹಕ್ಕುಗಳನ್ನು ನಿರಾಕರಿಸಬಾರದು. ಇಸ್ಲಾಮ್ ಉಪದೇಶಿಸುವುದೇನೆಂದರೆ, ಪ್ರತೀಕಾರ ಮಾಡುವುದಾದರೆ ಅದು ಉಂಟಾದ ಹಾನಿಗೆ ಸಮ ಪ್ರಮಾಣದಲ್ಲಿರಬೇಕು. ಆದರೆ ಪ್ರತೀಕಾರ ಮಾಡದೆ ಕ್ಷಮಿಸುವುದು ಉತ್ತಮ ಪರಿಣಾಮ ಉಂಟು ಮಾಡುವುದಾದರೆ ಕ್ಷಮಿಸಲು ಆದ್ಯತೆ ನೀಡಬೇಕು. ಸತ್ಯವಾದ ಮತ್ತು ಉತ್ತಮವಾದ ಉದ್ದೇಶ ಯಾವಾಗಲೂ ಸುಧಾರಣೆ, ಸೌಹಾರ್ದ ವರ್ಧನೆ ಮತ್ತು ಸ್ಥಾಯಿಯಾದ ಶಾಂತಿಯಾಗಿರಬೇಕು. ಆದರೆ ಈಗ ಲೋಕದಲ್ಲಿ ನಡೆಯುತ್ತಿರುವುದಾದದೂ ಏನು? ಒಬ್ಬನು ಒಂದು ಅನ್ಯಾಯದ ಕೆಲಸ ತಪ್ಪಾಗಿ ಮಾಡಿದರೆ ಅದರಿಂದ ಹಾನಿ ಅನುಭವಿಸಿದವನು ಮಾಡುವ ಪ್ರತೀಕಾರ ಅವನು ಅನುಭವಿಸಿದ ಹಾನಿಗಿಂತ ಅತ್ಯಂತ ಹೆಚ್ಚಿನ ಮಟ್ಟದಲ್ಲಿದ್ದು ಅವನು ಅನುಭವಿಸಿದ ಅನ್ಯಾಯಕ್ಕಿಂತ ಬಹಳ ಘೋರ ಮಟ್ಟದ ಅನ್ಯಾಯವಾಗಿರುತ್ತದೆ.

ಇಸ್ರಾಯೇಲ್ ಮತ್ತು ಪಾಲೆಸ್ತೀನ್ ಮಧ್ಯೆ ವರ್ಧಿಸುತ್ತಾ ಇರುವ ಸಂಘರ್ಷಗಳಲ್ಲಿ ನಾವು ಇದನ್ನೇ ಕಾಣುತ್ತಿದ್ದೇವೆ. ಸಿರಿಯಾ, ಲಿಬ್ಯ, ಈಜಿಪ್ಟ್ ಮೊದಲಾದ ದೇಶಗಳಲ್ಲಿರುವ ಅಶಾಂತಿ ಪರಿಸ್ಥಿತಿ ಬಗ್ಗೆ ಮಹಾಶಕ್ತಿ ದೇಶಗಳು ತಮ್ಮ ಕೋಪವನ್ನು ಬಹಿರಂಗವಾಗಿ ಪ್ರಕಟಿಸಿವೆ. ಅಲ್ಲಿನ ಪರಿಸ್ಥಿತಿಗಳು ಆಂತರಿಕ ಸಮಸ್ಯೆಗಳೆಂದು ವಾದಿಸಬಹುದಾದರೂ ಹೀಗೆ ಅತೃಪ್ತಿ ಸೂಚಿಸಲಾಗಿದೆ. ಹೀಗಿದ್ದರೂ ಈ ಮಹಾಶಕ್ತಿ ರಾಷ್ಟ್ರಗಳು ಪಾಲೆಸ್ತೀನ್ ಜನತೆ ಬಗ್ಗೆ ಲಕ್ಷ್ಯ ನೀಡುತ್ತಿರುವುದಾಗಿ ಕಾಣುವುದಿಲ್ಲ. ಇದು ಈ ಮಹಾಶಕ್ತಿ ರಾಷ್ಟ್ರಗಳ ದ್ವಿಮುಖ ಧೋರಣೆ ಎಂದು ಮುಸ್ಲಿಮ್ ದೇಶಗಳ ಜನರು ಭಾವಿಸುತ್ತಾರೆ. ಅವರು ಮಹಾಶಕ್ತಿ ರಾಷ್ಟ್ರಗಳನ್ನು ದೂರುತ್ತಾರೆ. ಅವರ ಬಗ್ಗೆ ಕಡು ಹಗೆತನ ಹೊಂದಿದ್ದಾರೆ. ಈ ಜನರ ಕ್ರೋಧ ಅತ್ಯಂತ ಅಪಾಯಕರವಾಗಿದೆ ಮತ್ತು ಅದು ಕುದಿದು ಯಾವಾಗಲಾದರೂ ಸ್ಫೋಟಗೊಳ್ಳಬಹುದಾಗಿದೆ. ಇದರ ಪರಿಣಾಮ ಏನಾಗುವುದು? ಇದರಿಂದ ಅಭಿವೃದ್ಧಿಶೀಲ ದೇಶಗಳಿಗೆ ಎಷ್ಟು ಹಾನಿ ಉಂಟಾಗುವುದು? ಅವುಗಳಿಗೆ ಬದುಕಿ ಬಾಳಲು ಸಾಧ್ಯವಾಗುವುದೇ? ಅಭಿವೃದ್ಧಿ ಹೊಂದಿದ ದೇಶಗಳಿಗೆ ಉಂಟಾಗುವ ಹಾನಿ ಎಷ್ಟು? ಇಂತಹ ಪ್ರಶ್ನೆಗಳಿಗೆ ಉತ್ತರ ದೇವನಿಗೆ ಮಾತ್ರ ತಿಳಿದಿದೆ. ನಾನು ಈ ಪ್ರಶ್ನೆಗಳಿಗೆ ಉತ್ತರ ನೀಡಲಾರೆ. ಬೇರೆ ಯಾರಿಗೂ ಉತ್ತರ ನೀಡಲು ಸಾಧ್ಯವಾಗದು. ಆದರೆ ಒಂದು ವಿಷಯದ ಬಗ್ಗೆ ಸ್ಪಷ್ಟವಾಗಿ ಹೇಳಬಹುದು. ಜಗತ್ತಿನಲ್ಲಿ ಶಾಂತಿಗೆ ಭಂಗ ಉಂಟಾಗುವುದು.

ನಾನು ಯಾವುದೇ ದೇಶದ ಪರವಾಗಿ ಮಾತನಾಡುತ್ತಾ ಇಲ್ಲ ಎಂದು ಸ್ಪಷ್ಟಪಡಿಸಲು ಬಯಸುತ್ತೇನೆ. ನಾನು ಹೇಳುವುದೇನೆಂದರೆ, ಎಲ್ಲ ರೀತಿಯ ಕ್ರೂರ ವರ್ತನೆಗಳನ್ನು, ಅವು ಎಲ್ಲಿ ನಡೆಯುತ್ತಾ ಇದ್ದರೂ ತಡೆದು ಕೊನೆಗೊಳಿಸಬೇಕು. ಪಾಲೆಸ್ತೀನಿನ ಜನರು, ಇಸ್ರಾಯೇಲಿನ ಜನರು ಅಥವಾ ಬೇರೆ ಯಾವುದೇ ದೇಶದ ಜನರು ಕ್ರೂರ ಕೃತ್ಯಗಳನ್ನು ಮಾಡುತ್ತಿದ್ದರೆ ಅವರೆಲ್ಲರ ಕ್ರೂರತೆಗಳನ್ನು ತಡೆಗಟ್ಟಬೇಕು. ಏಕೆಂದರೆ ಅವುಗಳನ್ನು ಹರಡಲು ಅನುಮತಿಸಿದರೆ ದ್ವೇಷದ ಜ್ವಾಲೆಗಳು ಖಂಡಿತವಾಗಿಯೂ ಲೋಕವನ್ನೆಲ್ಲ ಸುತ್ತುವರಿಯುವುದು. ಅವು ಎಷ್ಟು ಭೀಕರವಾಗುವುದು ಎಂದರೆ ಇಂದಿನ ಆರ್ಥಿಕ ಬಿಕ್ಕಟ್ಟು ಬೇಗನೆ ಮರೆತು ಹೋಗುವುದು. ಅದಕ್ಕೆ ಬದಲಾಗಿ ಅವರು ಅತ್ಯಂತ ಭೀತಿದಾಯಕ ಪರಿಸ್ಥಿತಿಯನ್ನು ಎದುರಿಸಬೇಕಾಗುವುದು. ಎಷ್ಟು ಬೃಹತ್ ಮಟ್ಟದಲ್ಲಿ ಜೀವ ಹಾನಿ ಸಂಭವಿಸುವುದೆಂದರೆ, ನಾವು ಅದರ ಬಗ್ಗೆ ಊಹಿಸಲು ಕೂಡ ಸಾಧ್ಯವಾಗದು.

ದ್ವಿತೀಯ ಮಹಾಯುದ್ಧದಲ್ಲಿ ಬೃಹತ್ ಹಾನಿಯನ್ನು ಅನುಭವಿಸಿದ ಯುರೋಪಿಯನ್ ದೇಶಗಳು ಈ ಕಾರಣಗಳಿಂದ ತಮ್ಮ ಗತ ಕಾಲದ ಚರಿತ್ರೆಯಿಂದ ಪಾಠಗಳನ್ನು ಕಲಿತು ಲೋಕವನ್ನು ನಾಶದಿಂದ ಸಂರಕ್ಷಿಸಲು ಪ್ರಯತ್ನಿಸುವುದು ಅವರ ಕರ್ತವ್ಯವಾಗಿದೆ. ಹೀಗೆ ಮಾಡಲು ಯುರೋಪಿಯನ್ ದೇಶಗಳು ನ್ಯಾಯಪಾಲನೆಯ ಅವಶ್ಯಕತೆಗಳನ್ನು ಈಡೇರಿಸಬೇಕು ಮತ್ತು ತಮ್ಮ ಹೊಣೆಗಾರಿಕೆಗಳನ್ನು ನಿರ್ವಹಿಸಬೇಕು. ಇಸ್ಲಾಮ್ ನ್ಯಾಯಯುತವಾಗಿಯೂ ಉತ್ತಮ ರೀತಿಯಲ್ಲೂ ಎಲ್ಲರೂ ಯಾವಾಗಲೂ ವರ್ತಿಸುವ ಅವಶ್ಯಕತೆ ಬಗ್ಗೆ ಒತ್ತಿ ಹೇಳುತ್ತದೆ. ಯಾವುದೇ ಪಕ್ಷಕ್ಕೆ ಆದ್ಯತೆ ನೀಡಬಾರದೆಂದೂ ಯಾವುದೇ ಪಕ್ಷಕ್ಕೆ ಅನ್ಯಾಯಕರವಾಗಿ ಸವಲತ್ತು ನೀಡಬಾರದೆಂದೂ ಇಸ್ಲಾಮ್ ಉಪದೇಶಿಸುತ್ತದೆ. ಒಬ್ಬ ತಪ್ಪುಗಾರನ ಸ್ಥಾನಮಾನಗಳು ಹೇಗಿದ್ದರೂ ಅವನು ತನ್ನ ತಪ್ಪು ಕೆಲಸಗಳನ್ನು ಮುಂದುವರಿಸಲು ಅಂತರ್ರಾಷ್ಟ್ರೀಯ ಸಮುದಾಯ ಬಿಡಲಾರದೆಂಬ ಪ್ರಜ್ಞೆ ಪ್ರತಿಯೊಬ್ಬನಿಗಿರಬೇಕು. ಸಂಯುಕ್ತ ರಾಷ್ಟ್ರ ಸಂಘದ ಸದಸ್ಯ ದೇಶಗಳು, ಯುರೋಪಿಯನ್ ಯೂನಿಯನ್‌ನಿಂದ ಲಾಭ ಪಡೆಯುವ ದೇಶಗಳು ಮತ್ತು ಮಹಾಶಕ್ತಿ ರಾಷ್ಟ್ರಗಳ ಗುಂಪಿಗೆ ಸೇರಿದ ದೇಶಗಳು ಮತ್ತು ಅಭಿವೃದ್ಧಿ ಹೊಂದದ ದೇಶಗಳು ಕೂಡ ಈ ತತ್ವವನ್ನು ಅಂಗೀಕರಿಸುವುದಾದರೆ ಮಾತ್ರ, ಆಗ ಮಾತ್ರ ಲೋಕದಲ್ಲಿ ಶಾಂತಿ ಸ್ಥಾಪಿತವಾಗುವುದು.

ಇದಲ್ಲದೆ, ಸಂಯುಕ್ತ ರಾಷ್ಟ್ರ ಸಂಘದಲ್ಲಿ ವೀಟೋ ಅಧಿಕಾರವಿರುವ ದೇಶಗಳು ತಮ್ಮ ಕೃತ್ಯಗಳ ಬಗ್ಗೆ ಉತ್ತರ ಹೇಳಬೇಕಾಗುವುದು. ಅವರು ಆ ಕೃತ್ಯಗಳ ತಪ್ಪುಗಳಿಗೆ ಹೊಣೆಗಾರರಾಗುವರು ಎಂದು ಅರಿತುಕೊಳ್ಳುವುದಾದರೆ ನ್ಯಾಯ ಪಾಲನೆಯು ಸತ್ಯವಾಗಿ ಸ್ಥಾಪಿತವಾಗುವುದು. ವಾಸ್ತವಿಕವಾಗಿ ನಾನು ಹೇಳಲು ಬಯಸುವುದೇನೆಂದರೆ, ವೀಟೋ ಪ್ರಯೋಗಿಸುವ ಅಧಿಕಾರವು ಶಾಂತಿ ಸ್ಥಾಪನೆಗೆ ಎಂದೂ ಸಹಾಯಕವಾಗಲಾರದು. ಏಕೆಂದರೆ ಸಂಯುಕ್ತ ರಾಷ್ಟ್ರದ ಸದಸ್ಯ ದೇಶಗಳು ಸಮಾನ ಮಟ್ಟದಲ್ಲಿ ಸದಸ್ಯತ್ವ ಹೊಂದಿರುವುದಿಲ್ಲ. ಈ ವರ್ಷದ ಆರಂಭದಲ್ಲಿ ನಾನು ಯು.ಎಸ್.ಎ. ದೇಶದ ಮುಖ್ಯ ರಾಜಕಾರಣಿಗಳನ್ನೂ ಧೋರಣೆಗಳನ್ನು ರೂಪಿಸುವವರನ್ನೂ ಕ್ಯಾಪಿಟೋಲ್ ಹಿಲ್‌ನಲ್ಲಿ ಸಂಬೋಧಿಸಿ ಮಾತನಾಡಿದಾಗ ಈ ಅಂಶವನ್ನು ಅವರೊಂದಿಗೆ ಹೇಳಿದ್ದೆನು. ನಾವು ಸಂಯುಕ್ತ ರಾಷ್ಟ್ರ ಸಂಘದಲ್ಲಿ ವೀಟೋ ಪ್ರಯೋಗದ ಚರಿತ್ರೆಯನ್ನು ನೋಡುವಾಗ, ವೀಟೋ ಪ್ರಯೋಗಿಸಿದುದು ದಬ್ಬಾಳಿಕೆಗೆ ತುತ್ತಾದವರನ್ನು ರಕ್ಷಿಸಲಿಕ್ಕೆ ಅಥವಾ ಸರಿಯಾಗಿ ವರ್ತಿಸುವವರನ್ನು ಬೆಂಬಲಿಕ್ಕೋಸ್ಕರವಾಗಿರಲಿಲ್ಲ ಎಂದು ಸ್ಪಷ್ಟವಾಗುತ್ತದೆ. ವೀಟೋ ಪ್ರಯೋಗಿಸುವ ಅಧಿಕಾರವನ್ನು ಕೆಲವು ಸಂದರ್ಭಗಳಲ್ಲಿ ಕ್ರೂರತೆಯನ್ನು ಬೆಂಬಲಿಸಲು ಬಳಸಲಾಗಿದೆ; ಅದನ್ನು ತಡೆಯಲಿಕ್ಕಲ್ಲ ಎಂದು ನಾವು ನೋಡಿರುತ್ತೇವೆ. ಇದು ರಹಸ್ಯವಾಗಿರುವ ಅಥವಾ ಯಾರಿಗೂ ತಿಳಿಯದಿರುವ ವಿಷಯವೇನೂ ಅಲ್ಲ. ಸಂಪರ್ಕ ಮಾಧ್ಯಮಗಳ ಅನೇಕ ವಿಶ್ಲೇಷಕರು ಬಹಿರಂಗವಾಗಿ ಇದರ ಬಗ್ಗೆ ಬರೆದಿರುತ್ತಾರೆ ಮತ್ತು ಮಾತನಾಡಿರುತ್ತಾರೆ.

ಇಸ್ಲಾಮ್ ಉಪದೇಶಿಸುವ ಇನ್ನೊಂದು ಸುಂದರ ತತ್ವ, ಸಮಾಜದಲ್ಲಿ ಶಾಂತಿಯನ್ನು ಕಾಪಾಡಲು ಕೋಪವನ್ನು ಪ್ರತಿಯೊಬ್ಬನು ತಗ್ಗಿಸಬೇಕೆಂದಾಗಿದೆ. ಪ್ರಾಮಾಣಿಕತೆ ಮತ್ತು ನ್ಯಾಯ ಪಾಲನೆಯ ಮೇಲೆ ಅದಕ್ಕೆಂದೂ ಆದ್ಯತೆ ನೀಡಬಾರದು. ಇಸ್ಲಾಮಿನ ಆದಿ ಕಾಲೀನ ಚರಿತ್ರೆ ಇದಕ್ಕೆ ಸಾಕ್ಷ್ಯವಹಿಸುತ್ತದೆ. ಸತ್ಯಸಂಧರಾದ ಮುಸ್ಲಿಮರು ಯಾವಾಗಲೂ ಈ ತತ್ವವನ್ನು ಪಾಲಿಸುತ್ತಿದ್ದರು. ಯಾರು ಈ ತತ್ವವನ್ನು ಪಾಲಿಸಲಿಲ್ಲವೋ ಅವರನ್ನು ಹಝ್ರತ್ ಮಹಮ್ಮದ್ ಪೈಗಂಬರರು[ಸ] ತೀವ್ರವಾಗಿ ಖಂಡಿಸಿದ್ದರು. ಆದರೆ ಇಂದು ದುರದೃಷ್ಟಕರವಾಗಿ ಯಾವಾಗಲೂ ಈ ತತ್ವ ಪಾಲಿಸಲ್ಪಡುತ್ತಿಲ್ಲ. ಈಗಿನ ಕಾಲದಲ್ಲಿ ಕೆಲವು ಸಂದರ್ಭಗಳಲ್ಲಿ ಶಾಂತಿ ಪಾಲನೆಗೆ ಕಳುಹಿಸಲ್ಪಟ್ಟ ಸೈನ್ಯ ಅಥವಾ ಸೈನಿಕರು ಹೇಗೆ ವರ್ತಿಸುತ್ತಾರೆಂದರೆ ಅವರಿಗೆ ವಹಿಸಿಕೊಟ್ಟ ಕರ್ತವ್ಯಗಳಿಗೆ ಸಂಪೂರ್ಣ ವಿರುದ್ಧವಾಗಿರುತ್ತದೆ. ಉದಾಹರಣೆಗೆ, ಕೆಲವು ದೇಶಗಳಲ್ಲಿ ವಿದೇಶಿ ಸೈನಿಕರು ತಮ್ಮ ಗುಂಡಿಗೆ ಬಲಿಯಾದ ಸ್ಥಳೀಯ ಜನರ ಮೃತ ಶರೀರಗಳೊಂದಿಗೆ ಅತ್ಯಂತ ಗೌರವ ರಹಿತವಾಗಿಯೂ ಬಹಳ ಭಯಾನಕವಾಗಿಯೂ ವರ್ತಿಸಿದ್ದಾರೆ. ಈ ರೀತಿ ಶಾಂತಿ ಸ್ಥಾಪಿಸಲು ಸಾಧ್ಯವೇ? ಇದಕ್ಕೆದುರಾಗಿ ಪ್ರತಿಕ್ರಿಯೆ ಆ ಬಾಧಿತ ದೇಶಕ್ಕೆ ಸೀಮಿತವಾಗದೆ ಲೋಕದಲ್ಲಿ ಎಲ್ಲಾ ಕಡೆಗಳಲ್ಲೂ ಪ್ರಕಟವಾಗುತ್ತಿದೆ. ಮುಸ್ಲಿಮರ ವಿರುದ್ಧ ತಪ್ಪಾಗಿ ವರ್ತಿಸಿದರೆ ಮುಸ್ಲಿಮ್ ತೀವ್ರವಾದಿಗಳು ಅದರ ಲಾಭ ಖಂಡಿತವಾಗಿ ಪಡೆಯುತ್ತಾರೆ ಮತ್ತು ಇಸ್ಲಾಮಿನ ತತ್ವಗಳಿಗೆ ವಿರುದ್ಧವಾಗಿ ವರ್ತಿಸಿ ಜಾಗತಿಕ ಶಾಂತಿಯನ್ನು ಕೆಡಿಸುತ್ತಾರೆ. ಇಸ್ಲಾಮ್ ಉಪದೇಶಿಸುವುದೇನೆಂದರೆ, ದೌರ್ಜನ್ಯಗಾರನಿಗೂ ದೌರ್ಜನ್ಯ ಪೀಡಿತನಿಗೂ ಸಂಪೂರ್ಣ ನಿಷ್ಪಕ್ಷವಾಗಿ, ಸ್ವಾರ್ಥ ಲಾಭ ಬಯಸದೆ ಮತ್ತು ಹಗೆತನ ರಹಿತವಾಗಿ ಸಹಾಯ ಮಾಡಬೇಕೆಂದಾಗಿದೆ. ಎಲ್ಲಾ ಪಕ್ಷಗಳ ಜನರಿಗೆ ಸಮಾನ ವೇದಿಕೆ ಮತ್ತು ಆಡುವ ಕ್ಷೇತ್ರ ನೀಡಿ ಮಾತ್ರ ಶಾಂತಿ ಸ್ಥಾಪಿಸಬಹುದಾಗಿದೆ.

ಸಮಯಾವಕಾಶ ಸೀಮಿತವಾದ ಕಾರಣ ನಾನು ಇಸ್ಲಾಮಿನ ಇನ್ನೊಂದು ಉಪದೇಶವನ್ನು ಮಾತ್ರ ನಿಮ್ಮ ಮುಂದಿರಿಸುತ್ತೇನೆ. ಅನ್ಯರ ಸಂಪತ್ತನ್ನೂ ಸಂಪನ್ಮೂಲಗಳನ್ನೂ ಅಸೂಯೆಯಿಂದ ದಿಟ್ಟಿಸಿ ನೋಡಬಾರದೆಂಬುದು ಇಸ್ಲಾಮ್ ಉಪದೇಶಿಸುವ ಇನ್ನೊಂದು ತತ್ವವಾಗಿದೆ. ಅನ್ಯರ ಸಂಪತ್ತನ್ನು ಅಪಹರಿಸಲು ಪ್ರಯತ್ನಿಸಬಾರದು. ಹೀಗೆ ಮಾಡುವುದರಿಂದ ಸಹ ಶಾಂತಿಗೆ ಭಂಗ ಉಂಟಾಗುತ್ತದೆ. ಶ್ರೀಮಂತ ದೇಶಗಳು ಅಭಿವೃದ್ಧಿ ಹೊಂದದ ದೇಶಗಳ ಸಂಪತ್ತನ್ನು ಸ್ವಾಧೀನಪಡಿಸಿ ತಮ್ಮ ಸ್ವಂತ ಅವಶ್ಯಕತೆಗಳನ್ನು ಈಡೇರಿಸಲು ಬಯಸಿದರೆ ಅದರಿಂದ ಸಹ ಶಾಂತಿಭಂಗವಾಗುವುದು. ಅಭಿವೃದ್ಧಿ ಹೊಂದಿದ ದೇಶಗಳು ಅಭಿವೃದ್ಧಿ ಹೊಂದದ ದೇಶಗಳಿಗೆ ಮಾಡುವ ಸೇವೆಗೋಸ್ಕರ ಯೋಗ್ಯ ಸಂದರ್ಭಗಳಲ್ಲಿ ಸಂಪತ್ತಿನ ಚಿಕ್ಕ ಪಾಲನ್ನು ಪಡೆದುಕೊಂಡು

ಸಂಪತ್ತಿನ ಬಹುಭಾಗವನ್ನು ಅಭಿವೃದ್ಧಿ ಹೊಂದದ ದೇಶಗಳ ಜನರ ಜೀವನ ಮಟ್ಟವನ್ನು ಉನ್ನತಗೊಳಿಸಲು ವಿನಿಯೋಗಿಸಬೇಕು. ಅಭಿವೃದ್ಧಿ ಹೊಂದದ ದೇಶಗಳು ಅಭಿವೃದ್ಧಿ ಪಡೆಯಲು ಮತ್ತು ಆ ದೇಶಗಳ ಜನರ ಜೀವನ ಮಟ್ಟವನ್ನು ಏರಿಸಲು ಸಹಾಯ ಮಾಡಬೇಕು. ಹೀಗೆ ಮಾಡಿದರೆ ಮಾತ್ರ ಜಾಗತಿಕ ಶಾಂತಿ ಸ್ಥಾಪಿಸಲ್ಪಡುವುದು. ಆ ದೇಶಗಳ ರಾಜಕೀಯ ನಾಯಕರು ಪ್ರಾಮಾಣಿಕರಾಗಿಲ್ಲವಾದರೆ ಪಾಶ್ಚಿಮಾತ್ಯ ದೇಶಗಳು ಅಥವಾ ಅಭಿವೃದ್ಧಿ ಹೊಂದಿದ ದೇಶಗಳು ಸ್ವತಃ ಅಭಿವೃದ್ಧಿ ಕಾರ್ಯಕ್ರಮಗಳನ್ನು ವ್ಯವಸ್ಥೆಗೊಳಿಸಿ ಅವರಿಗೆ ಸಹಾಯ ಧನ ನೀಡಿ ಸ್ವತಃ ಮೇಲ್ವಿಚಾರಣೆ ನಡೆಸಬೇಕು.

ನಾನು ವಿವರಿಸಬಹುದಾದ ಬೇರೆ ಅನೇಕ ಅಂಶಗಳಿವೆ. ಆದರೆ ಸಮಯದ ಪರಿಮಿತಿಯ ಕಾರಣ ನಾನು ಇಷ್ಟರವರೆಗೆ ವಿವರಿಸಿದ ಅಂಶಗಳಿಗೆ ವಿಷಯವನ್ನು ಸೀಮಿತಗೊಳಿಸುತ್ತೇನೆ. ಖಂಡಿತವಾಗಿಯೂ ನಾನು ವಿವರಿಸಿದ ಎಲ್ಲಾ ಅಂಶಗಳು ಇಸ್ಲಾಮಿನ ತತ್ವೋಪದೇಶಗಳ ಸತ್ಯಸಂಧವಾದ ವಿವರಣೆಯಾಗಿವೆ.

ಒಂದು ಪ್ರಶ್ನೆ ನಿಮ್ಮ ಹೃದಯದಲ್ಲಿ ಉದ್ಭವಿಸಲು ಸಾಧ್ಯವಿದೆ. ಆದುದರಿಂದ ಅದಕ್ಕೆ ಮುಂಚಿತವಾಗಿ ಅದರ ಉತ್ತರ ಹೇಳಲು ನಾನು ಬಯಸುತ್ತೇನೆ. ನೀವು ಪ್ರಶ್ನಿಸಬಹುದು. ನಾನು ವಿವರಿಸಿದ ಹಾಗೆಯೇ ಇಸ್ಲಾಮಿನ ತತ್ವೋಪದೇಶಗಳಾಗಿದ್ದರೆ ಮುಸ್ಲಿಮ್ ಲೋಕದಲ್ಲಿ ಇಷ್ಟೆಲ್ಲಾ ವಿಭಜನೆಗಳನ್ನು ಮತ್ತು ಅಸ್ತವ್ಯಸ್ತತೆಗಳನ್ನು ನಾವು ಕಾಣುತ್ತಿರುವುದೇಕೆ? ಈ ಪ್ರಶ್ನೆಗೆ ಉತ್ತರ ನಾನು ನನ್ನ ಭಾಷಣದ ಪ್ರಾರಂಭದಲ್ಲಿ ಸೂಚಿಸಿ ಒಬ್ಬ ಸುಧಾರಕನ ಆಗಮನದ ಅವಶ್ಯಕತೆಯನ್ನು ವಿವರಿಸಿದ್ದೇನೆ. ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸ್ಥಾಪಕರು ಹೀಗೆ ಆಗಮಿಸಿದ ಸುಧಾರಕರೆಂದು ನಾವು ನಂಬುತ್ತೇವೆ. ಅಹ್ಮದಿಯಾ ಮುಸ್ಲಿಮ್ ಸಂಘಟನೆಗೆ ಸೇರಿದ ನಾವು ಯಾವಾಗಲೂ ಇಸ್ಲಾಮಿನ ಸತ್ಯ ತತ್ವೋಪದೇಶಗಳನ್ನು ಹೆಚ್ಚು ಹೆಚ್ಚಾಗಿ ವಿಶಾಲವಾಗಿ ಜನರಿಗೆ ತಲುಪಿಸಲು ಪ್ರಯತ್ನಿಸುತ್ತಾ ಇರುತ್ತೇವೆ. ನೀವೆಲ್ಲರೂ ನಿಮ್ಮ ಪ್ರದೇಶಗಳಲ್ಲಿ ಈ ವಿಷಯಗಳ ಬಗ್ಗೆ ಜನರಲ್ಲಿ ಪ್ರಜ್ಞೆ ಮೂಡುವಂತೆ ಪ್ರಯತ್ನಿಸಬೇಕೆಂದು ನಿಮ್ಮನ್ನೆಲ್ಲಾ ಕೋರುತ್ತೇನೆ. ಈ ಮೂಲಕ ದೀರ್ಘಕಾಲ ನೆಲೆನಿಲ್ಲುವ ಶಾಂತಿ ಲೋಕದಲ್ಲಿ ಎಲ್ಲಾ ಕಡೆಗಳಲ್ಲೂ ಸ್ಥಾಪಿತವಾಗಲಿ ಎಂದು ಬಯಸುತ್ತೇನೆ.

ನಾವು ಈ ನಿಟ್ಟಿನಲ್ಲಿ ಜಯಶಾಲಿಗಳಾಗದಿದ್ದರೆ, ಲೋಕದ ಯಾವುದೇ ಭಾಗ ಭಯಾನಕ ಮತ್ತು ವಿನಾಶಕಾರಿ ಯುದ್ಧದ ಪರಿಣಾಮಗಳಿಂದ ಸುರಕ್ಷಿತವಾಗಿರಲಾರದು. ನಾನು ಪ್ರಾರ್ಥಿಸುತ್ತೇನೆ: ಲೋಕದ ಜನರು ತಮ್ಮ ಸ್ವಾರ್ಥ ಹಿತಾಸಕ್ತಿಗಳನ್ನು ಕಡೆಗಣಿಸಿ ಸಂಭವಿಸಲಿರುವ ನಾಶದಿಂದ ಲೋಕವನ್ನು ರಕ್ಷಿಸಲು ಪ್ರಯತ್ನಿಸುವ ಭಾಗ್ಯವನ್ನು ಅಲ್ಲಾಹನು ಅವರಿಗೆ ನೀಡಲಿ.

ಪಶ್ಚಿಮದ ಅಭಿವೃದ್ಧಿ ಹೊಂದಿದ ದೇಶಗಳು ಇಂದಿನ ಲೋಕದಲ್ಲಿ ಅತ್ಯಂತ ಹೆಚ್ಚು ಅಧಿಕಾರ ಶಕ್ತಿಗಳನ್ನು ಹೊಂದಿವೆ. ಆದುದರಿಂದ ಪಶ್ಚಿಮ ದೇಶಗಳ ನೀವು, ಇತರರಿಗಿಂತ ಹೆಚ್ಚಾಗಿ ಈ ಅತ್ಯಂತ ಮುಖ್ಯ ವಿಷಯದ ಬಗ್ಗೆ ತುರ್ತಾಗಿ ಲಕ್ಷ್ಯ ನೀಡಬೇಕಾದುದು ನಿಮ್ಮ ಕಡ್ಡಾಯ ಕರ್ತವ್ಯವಾಗಿದೆ.

ಕೊನೆಯದಾಗಿ, ನೀವೆಲ್ಲರೂ ಸಮಯಾವಕಾಶ ಮಾಡಿಕೊಂಡು ಇಲ್ಲಿಗೆ ಬಂದು ನನ್ನ ಭಾಷಣವನ್ನು ಆಲಿಸಿದುದಕ್ಕಾಗಿ ನಾನು ನಿಮಗೆ ಕೃತಜ್ಞತೆ ಅರ್ಪಿಸುತ್ತೇನೆ. ಅಲ್ಲಾಹನು ನಿಮಗೆಲ್ಲರಿಗೂ ಅನುಗ್ರಹ ನೀಡಲಿ. ನಿಮಗೆ ಬಹಳ ಧನ್ಯವಾದಗಳು.

**(The Review of Religions,**
**ಫೆಬ್ರವರಿ 2013 ಸಂಚಿಕೆಯಿಂದ.**
**ಭಾಷಾಂತರ : ಎಮ್. ಉಬೈದುಲ್ಲಾ)**

---

(14ನೇ ಪುಟದಿಂದ)

## ಜಾಗತಿಕ ಶಾಂತಿಯ ವಿಷಮ ಪರಿಸ್ಥಿತಿ

ಸಮಸ್ಯೆಗಳನ್ನು ಶಾಂತಿಯುತವಾಗಿ ಪರಿಹರಿಸಲು ಉತ್ತಮ ಮಾರ್ಗಗಳ ಬಗ್ಗೆ ಚರ್ಚಿಸಲು ಇದರಿಂದ ಸಾಧ್ಯವಾಗುವುದು. ಜಾಗತಿಕ ಶಾಂತಿ ಸ್ಥಾಪನೆಗೆ ಈ ಕ್ರಮಗಳು ಅತ್ಯಂತ ಅವಶ್ಯಕವಾಗಿವೆ. ಲೋಕದ ಜನರಿಗೆ ಹೀಗೆ ಮಾಡಲು ಸಾಮರ್ಥ್ಯ ನೀಡಲಿ ಎಂದು ನಾನು ಸರ್ವಶಕ್ತನಾದ ಅಲ್ಲಾಹನೊಂದಿಗೆ ಪ್ರಾರ್ಥಿಸುತ್ತೇನೆ.

ಈ ವರ್ಷದ ಅಹ್ಮದಿಯಾ ಮುಸ್ಲಿಮ್ ಪೀಸ್ ಪ್ರೈಝ್ ಗಳಿಸಿದ ಡಾಕ್ಟರ್ ಬೋಚೀ-ಅಡ್‌ಜೇ ಅವರನ್ನು ನಾನು ಅಭಿನಂದಿಸುತ್ತೇನೆ. ಅವರು ಮಾನವರಿಗೋಸ್ಕರ ಮಾಡಿದ ಸೇವೆಗಳ ಬಗ್ಗೆ ಅರಿತುಕೊಂಡು ನಾನು ಅಭಿನಂದನೆ ಅರ್ಪಿಸುತ್ತೇನೆ ಮತ್ತು ನಾನು ಅದರಿಂದ ಸಂತೋಷಪಡುತ್ತೇನೆ.

ಕೊನೆಯದಾಗಿ, ಇಲ್ಲಿಗೆ ಆಗಮಿಸಿದ ಮತ್ತು ತಮ್ಮ ಸಮಯವನ್ನು ವಿನಿಯೋಗಿಸಿ ನಮ್ಮೊಂದಿಗೆ ಸೇರಲು ಪ್ರಯತ್ನಿಸಿದ ನಿಮಗೆಲ್ಲರಿಗೆ ಕೃತಜ್ಞತೆ ಅರ್ಪಿಸಲು ಬಯಸುತ್ತೇನೆ. ನೀವು ಈ ಸಮಾರಂಭದಿಂದ ಸಂತೋಷ ಮತ್ತು ಪ್ರಯೋಜನ ಗಳಿಸುವವರಾಗಲೆಂದು ನಾನು ಭರವಸೆ ಹೊಂದಿ ಪ್ರಾರ್ಥಿಸುತ್ತೇನೆ. ನಿಮಗೆಲ್ಲರಿಗೂ ಕೃತಜ್ಞತೆಗಳು. ನಿಮಗೆಲ್ಲರಿಗೂ ಬಹಳ ಕೃತಜ್ಞತೆಗಳು.

**(The Review of Religions,**
**ಮೇ 2013 ಸಂಚಿಕೆಯಿಂದ.**
**ಭಾಷಾಂತರ : A. ಅಬ್ದುಸಲಾಮ್)**

---

# ಇನ್‌ಸಾನಿಯತ್ ಝಿಂದಾಬಾದ್ ಮಾನವೀಯತೆ ಚಿರಕಾಲ ಬಾಳಲಿ

# ಜಾಗತಿಕ ಶಾಂತಿಯ ವಿಷಮ ಪರಿಸ್ಥಿತಿ



ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಜಾಗತಿಕ ಸರ್ವೋಚ್ಚ ನೇತಾರರೂ ಪಂಚಮ ಖಲೀಫರೂ ಆಗಿರುವ ಹಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹೇಬ್ ಅಣುಶಸ್ತ್ರ ಬಳಸಲ್ಪಡುವ ಯುದ್ಧದ ಬೆದರಿಕೆ ಬಗ್ಗೆ ಮತ್ತು ಜಾಗತಿಕ ಶಾಂತಿಗೆ ಭಂಗ ಉಂಟಾಗುವ ಅಪಾಯದ ಬಗ್ಗೆ ದೀರ್ಘವಾಗಿ ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿರುವರು. ಹತ್ತನೇ ವಾರ್ಷಿಕ ಶಾಂತಿ ಸಿಂಪೋಸಿಯಂ ಲಂಡನಿನ ಬೈತುಲ್ ಫುತೂಹ್ ಮಸ್‌ಜಿದ್‌ನಲ್ಲಿ ಜರಗಿದಾಗ ಸಭೆಯನ್ನು ಸಂಬೋಧಿಸಿ, ವಾಸ್ತವಿಕವಾಗಿ ನ್ಯಾಯವನ್ನು ಎಲ್ಲಾ ಹಂತಗಳಲ್ಲೂ ಪಾಲಿಸದಿದ್ದರೆ ಅದರಿಂದ ವಿನಾಶಕರವಾದ ಪರಿಣಾಮಗಳು ಉಂಟಾಗುವುವು ಎಂದು ಮುನ್ನೆಚ್ಚರಿಕೆ ನೀಡಿದರು. ಅಣುಶಸ್ತ್ರ ಬಳಸಲ್ಪಡಬಹುದಾದ ಯುದ್ಧದ ಬೆದರಿಕೆ ವಾಸ್ತವಿಕ; ಇಂದಿನ ನಾಗರಿಕತೆಗೆ ಅದು ಅತ್ಯಂತ ದೊಡ್ಡ ಬೆದರಿಕೆಯಾಗಿದೆ ಎಂದು ಅವರು ಹೇಳಿದರು. ಲೋಕದಲ್ಲಿ ಶಾಂತಿ ಮತ್ತು ನ್ಯಾಯ ಸ್ಥಾಪಿಸುವ ಬಗ್ಗೆ, ದೂರ ಪೂರ್ವ ದೇಶಗಳಲ್ಲಿ ತಲೆದೋರಿರುವ ಸಂಘರ್ಷಗಳ ಬಗ್ಗೆ, ಸಿರಿಯಾದಲ್ಲಿ ನಡೆಯುತ್ತಿರುವ ಆಂತರಿಕ ಯುದ್ಧ ಮತ್ತು ಜಾಗತಿಕ ಅಣುಯುದ್ಧದ ಬೆದರಿಕೆಯ ಬಗ್ಗೆ ಅವರು ಪ್ರಸ್ತಾಪಿಸಿದರು. ಜಾಗತಿಕ ಅಶಾಂತಿಗೆ ಪರಿಹಾರ ಮಾರ್ಗಗಳನ್ನು ಪವಿತ್ರ ಖುರ್‌ಆನಿನ ಉಪದೇಶಗಳ ಬೆಳಕಿನಲ್ಲಿ ಅವರು ಸೂಚಿಸಿದರು. ಈ ಸಮಾರಂಭದಲ್ಲಿ ಒಂದು ಸಾವಿರಕ್ಕಿಂತಲೂ ಹೆಚ್ಚು ಜನರು ಭಾಗವಹಿಸಿದರು. ಅವರಲ್ಲಿ ಸರಕಾರದ ಸಚಿವರು, ರಾಯಭಾರಿಗಳು, ಬ್ರಿಟನ್ ಪಾರ್ಲಿಮೆಂಟಿನ ಎರಡು ಸಭೆಗಳ ಅನೇಕ ಸದಸ್ಯರು, ವಿವಿಧ ಸಾಮಾಜಿಕ ಶ್ರೇಣಿಗಳಿಗೆ ಸೇರಿದ ಗಣ್ಯರು ಸೇರಿದ್ದರು. ಈ ವರ್ಷದ ವಿಚಾರ ಗೋಷ್ಠಿಯ ವಿಷಯ "ಶಾಂತಿಗಿರುವ ದಾರಿ" ಎಂದಾಗಿತ್ತು.

ಹಝ್‌ರತ್ ಪಂಚಮ ಖಲೀಫರ ಮುಖ್ಯ ಭಾಷಣಕ್ಕೆ ಮೊದಲು ಶಾಂತಿಯ ಪ್ರಾಮುಖ್ಯತೆ ಮತ್ತು ಅದರ ಸ್ಥಾಪನೆಯ ಬಗ್ಗೆ ವಿವಿಧ ಗಣ್ಯರು ಭಾಷಣ ಮಾಡಿದರು. ಯುನೈಟೆಡ್ ಕಿಂಗ್‌ಡಮ್ಮಿನ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ನ್ಯಾಶನಲ್ ಪ್ರಸಿಡೆಂಟರಾದ ರಫೀಖ್ ಹಯಾತ್ ಹೀಗೆಂದರು: "2013 ಅಹ್ಮದಿಯಾ ಮುಸ್ಲಿಮ್ ಜಮಾಅತಿಗೆ ಒಂದು ಚಾರಿತ್ರಿಕ ವರ್ಷವಾಗಿದೆ. ಬ್ರಿಟನಿನಲ್ಲಿ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಸ್ಥಾಪಿತವಾದ ಶತ ವಾರ್ಷಿಕೋತ್ಸವದ ಸಂದರ್ಭ ಇದಾಗಿದೆ."

ಸಯೋಭೈನ್ ಮಕ್‌ಡೊನಾಗ್ ಪಾರ್ಲಿಮೆಂಟ್ ಸದ್ಯಸರೂ "ಆಲ್ ಪಾರ್ಟಿ ಪಾರ್ಲಿಮೆಂಟ್ ಗ್ರೂಪ್ ಫಾರ್ ದಿ ಅಹ್ಮದಿಯಾ ಕಮ್ಯುನಿಟಿ"ಯ ಅಧ್ಯಕ್ಷರೂ ಆಗಿದ್ದಾರೆ. ಅವರು ಹೀಗೆಂದರು:

"ಕಳೆದ ಕೆಲವು ಹಲವು ವರ್ಷಗಳಲ್ಲಿ ನಿಮ್ಮ ಸಂಘಟನೆ ಮೂಲಕ ನಾನು ಕಳೆದ ಇಸ್ಲಾಮ್ ಬಗ್ಗೆ ಬಹಳ ಮಾಹಿತಿ ಗಳಿಸಿದ್ದೇನೆ. ಜೀವಿಸುವ ಮೂಲಭೂತ ಅಧಿಕಾರ, ಸಮಾನತೆ, ಸಹನೆ ಮತ್ತು ನ್ಯಾಯ ಪಾಲನೆಯ ಅಸ್ತಿಭಾರವನ್ನು ಇಸ್ಲಾಮ್ ಹೊಂದಿದೆ ಎಂದು ನಾನು ಮನವರಿಕೆ ಮಾಡಿಕೊಂಡಿದ್ದೇನೆ."

ಪಾರ್ಲಿಮೆಂಟ್ ಸದಸ್ಯ ಸ್ಟೀಫೆನ್ ಹೆಮ್ಮಂಡ್ ಹೀಗೆಂದರು:

"ಮುಂದಿನ ತಿಂಗಳು ಹಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದರು ತನ್ನ ಖಿಲಾಫತಿನ ಹತ್ತನೆಯ ವರ್ಷವನ್ನು ಪೂರ್ತಿಗೊಳಿಸಲಿದ್ದಾರೆ. ಈ ಹತ್ತು ವರ್ಷಗಳಲ್ಲಿ ನಾವು ನಿಮ್ಮ ಜಮಾಅತಿನಲ್ಲಿ ಕಂಡದ್ದು ಸ್ವಯಂಸೇವೆ ಮತ್ತು ಶಾಂತಿ ಸ್ಥಾಪಿಸುವ ಉತ್ಸಾಹವನ್ನಾಗಿದೆ."

ಡಾಕ್ಟರ್ ಚಾರ್ಲ್ಸ್ ಟನ್ನೋಕ್ ಯುರೋಪಿಯನ್ ಪಾರ್ಲಿಮೆಂಟ್ ಸದ್ಯಸರೂ ಯುರೋಪಿಯನ್ ಪಾರ್ಲಿಮೆಂಟಿನ "ಫ್ರೆಂಡ್ಸ್ ಆಫ್ ಅಹ್ಮದಿಯಾ ಮುಸ್ಲಿಮ್ ಗ್ರೂಫ್" ಇದರ ಅಧ್ಯಕ್ಷರೂ ಆಗಿರುವರು. ಅವರು ಹೀಗೆಂದರು:

"ಯುರೋಪಿಯನ್ ಪಾರ್ಲಿಮೆಂಟಿನಲ್ಲಿ ಎರಡು ಮುಖ್ಯ ಸಮಾರಂಭಗಳ ಆತಿಥೇಯನಾಗಲು ನನಗೆ ಸಂದರ್ಭ ಲಭಿಸಿತು. ಅವುಗಳಲ್ಲೊಂದು ಕಳೆದ ವರ್ಷ ಡಿಸೆಂಬರಿನಲ್ಲಿ ಹಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದರು ಭಾಗವಹಿಸಿದುದಾಗಿತ್ತು. ಅದರಲ್ಲಿ ಜನರು ಬಹಳ ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದರು ಮತ್ತು ಆ ಸಮಾರಂಭ ಅತ್ಯಂತ ಜಯಶಾಲಿಯಾಗಿತ್ತು."

ಕೆನಡದ "ಅಂಬಾಸಿಡರ್ ಫೋರ್ ರಿಲೀಜಸ್ ಫ್ರೀಡಮ್" ಆಗಿರುವ ಆಂಡ್ರೂ ಬೆನ್ನಟ್ಟ್ ಹೀಗೆಂದರು:

"ಒಂದು ತಿಂಗಳ ಹಿಂದೆ ಕೆನಡದ ಪ್ರಧಾನ ಮಂತ್ರಿ ಸ್ಟೀಫನ್ ಹಾರ್ಪರ್ ಕೆನಡದ ಒಂಟಾರಿಯೋ ನಗರದ ವಾಗನ್‌ನಲ್ಲಿ ಅಹ್ಮದಿಯಾ ಮಸ್‌ಜಿದ್‌ನಲ್ಲಿ, ಕೆನಡ ಸರಕಾರದಿಂದ ಹೊಸದಾಗಿ ರೂಪಿಸಲಾದ ಆಫಿಸ್ ಆಫ್ ರಿಲೀಜಸ್ ಫ್ರೀಡಮ್ ಇದರ ಪ್ರಥಮ ಎಂಬಾಸಿಡರ್

(ರಾಯಭಾರಿ) ಆಗಿ ನನ್ನ ನೇಮಕವನ್ನು ಪ್ರಕಟಿಸಿದರು. ಈ ಹುದ್ದೆಯನ್ನು ಪ್ರಕಟಿಸಲಾದ ಫೆಬ್ರವರಿ ಹತ್ತೊಂಬತ್ತನೆಯ ದಿನಾಂಕ ಕೆನಡವು ಲೋಕದ ಎಲ್ಲಾ ದೇಶಗಳಲ್ಲಿರುವ ಅಹ್ಮದೀ ಮುಸ್ಲಿಮರ ನಿಷ್ಠಾವಂತ ಸ್ನೇಹಿತನಾಗಿರುವುದೆಂದು ಒತ್ತಿಹೇಳಿದೆವು.

ರೈಟ್ ಆನಲೇಬಲ್ ಎಡ್ ಡೇವಿ, ಎಂ.ಪಿ., ಸೆಕ್ರೆಟರಿ ಆಫ್ ಸ್ಟೇಟ್ ಫೋರ್ ಎನರ್ಜಿ ಆ್ಯಂಡ್ ಕ್ಲೈಮೆಟ್ ಚೇಂಜ್ (ಶಕ್ತಿ ಮತ್ತು ವಾತಾವರಣದ ಬದಲಾವಣೆ ಖಾತೆ ಮಂತ್ರಿ) ಹೀಗೆ ಹೇಳಿದರು:

"ಪ್ರಥಮವಾಗಿ, ಎಲ್ಲಾ ಧರ್ಮಗಳಿಗೆ ಸೇರಿದ ನಮ್ಮೆಲ್ಲರನ್ನು ಆಹ್ವಾನಿಸಿ ಒಟ್ಟಿಗೆ ಜಮಾಯಿಸಿ ಯು.ಕೆ.ಯಲ್ಲಿಯೂ ಲೋಕದ ಇತರ ಪ್ರದೇಶಗಳಲ್ಲೂ ಶಾಂತಿಗಾಗಿ ಪರಿಶ್ರಮ ಪಡುತ್ತಿರುವುದಕ್ಕೋಸ್ಕರ ಮತ್ತು ಹತ್ತನೆಯ ಶಾಂತಿ ಸಿಂಪೋಸಿಯಂ ನಡೆಸಲು ಪ್ರದರ್ಶಿಸಿದ ಮೇಧಾವಿತ್ವಕ್ಕೋಸ್ಕರ ಖಲೀಫರಾದ ತಮಗೆ ಕೃತಜ್ಞತೆ ಅರ್ಪಿಸಲು ಮತ್ತು ಪ್ರಶಂಸಿಸಲು ನಾನು ಬಯಸುತ್ತೇನೆ. ಒಬ್ಬರಿನ್ನೊಬ್ಬರನ್ನು ಪರಸ್ಪರ ಅರಿತುಕೊಳ್ಳಲು ನೀವು ಪ್ರತಿಯೊಬ್ಬರಿಗೆ ಸಹಾಯ ಮಾಡುತ್ತಿರುವಿರಿ. ನಾವು ನಮ್ಮ ಹೃದಯಗಳೊಳಗೆ ನೋಡಿ ನಮ್ಮ ಹೃದಯಗಳಲ್ಲಿ ಪ್ರೀತಿ ಇರುವುದನ್ನು ಖಾತರಿಪಡಿಸಲು ನೀವು ನಮಗೆ ಕಲಿಸುತ್ತಿರುವಿರಿ. ನೀವು ಪ್ರದರ್ಶಿಸುವ ಧಾರ್ಮಿಕ ನಾಯಕತ್ವ ಮತ್ತು ನೀವು ನೀಡುವ ಸಂದೇಶ ಬಹಳ ಸ್ವಾಗತಾರ್ಹವಾಗಿದೆ. ನಾವು ಅದಕ್ಕೋಸ್ಕರ ಕೃತಜ್ಞತೆ ಸೂಚಿಸುತ್ತೇವೆ."

"ಅಹ್ಮದಿಯಾ ಮುಸ್ಲಿಮ್ ಪ್ರೈಝ್ ಫೋರ್ ಎಡ್ವಾನ್ಸ್ ಮೆಂಟ್ ಆಫ್ ಪೀಸ್" ಇದರ ನಾಲ್ಕನೆಯ ವಾರ್ಷಿಕ ಸಮ್ಮಾನವನ್ನು ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಡಾಕ್ಟರ್ ಒಹೆನೆಬ ಬೋಚೀ ಅಡ್‌ಜೇ (DR.OHENEBA BOACHIE -ADJEI) ರವರಿಗೆ ಪ್ರದಾನ ಮಾಡಿದರು. ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಜನರಿಗೋಸ್ಕರ ವೈದ್ಯಕೀಯ ಸೇವೆ ನಡೆಸಿ ಅವರ ಭಾವಿ ಜೀವಿತವನ್ನು ಉತ್ತಮಪಡಿಸಿ ಶಾಂತಿಯನ್ನು ಸ್ಥಾಪಿಸಲು ತಮ್ಮ ಜೀವಿತವನ್ನು ವಿನಿಯೋಗಿಸಿ ಗಣನೀಯ ಸೇವೆ ಸಲ್ಲಿಸುತ್ತಿರುವುದಕ್ಕೋಸ್ಕರ ಅವರಿಗೆ ಈ ಪ್ರಶಸ್ತಿಯನ್ನು ನೀಡಲಾಯಿತು. ಈ ಪ್ರಶಸ್ತಿಯನ್ನು ಸ್ವತಃ ಪಡೆದುಕೊಂಡು ಡಾಕ್ಟರ್ ಬೋಚೀ ಅಡ್‌ಜೇ ತಾನು ಈ ಪ್ರಶಸ್ತಿಯನ್ನು ಪಡೆದು ಬಹಳ ಗೌರವಿಸಲ್ಪಟ್ಟುದಾಗಿಯೂ ತಾನು ವಿನೀತನಾಗಿ ಇದನ್ನು ಸ್ವೀಕರಿಸುವುದಾಗಿಯೂ ಹೇಳಿದರು. ಎಲ್ಲಾ ಜನರು ತಮ್ಮ ಮೂಲಗಳನ್ನು ನೆನಪಿಸಿಕೊಂಡು ತಮ್ಮ ಕೊಡುಗೆಗಳನ್ನು ಮರಳಿ ನೀಡಬೇಕೆಂದು ಹೇಳಿದರು.

**2013 ಮಾರ್ಚ್ ದಿನಾಂಕ 23ರಂದು ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ (ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಜಾಗತಿಕ ಸರ್ವೋಚ್ಚ ನಾಯಕ) ಹತ್ತನೆಯ ವಾರ್ಷಿಕ ಪೀಸ್ ಸಿಂಪೋಸಿಯಂನಲ್ಲಿ ಮಾಡಿದ ಭಾಷಣ:**

ಸಾಂಪ್ರದಾಯಿಕ ಪ್ರಾರ್ಥನೆಗಳ ನಂತರ ಹಝ್ರತ್ ಖಲೀಫತುಲ್ ಮಸೀಹ್ **V** ಹೀಗೆ ಹೇಳಿದರು:

ಗಣ್ಯರಾದ ಎಲ್ಲಾ ಅತಿಥಿಗಳಿಗೆ, ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತುಹೂ – ಅಲ್ಲಾಹನ ಶಾಂತಿ ಮತ್ತು ಅನುಗ್ರಹ ನಿಮ್ಮ ಮೇಲೆ ಸುರಿಯಲ್ಪಡಲಿ.

ಈ ಶಾಂತಿ ಸಿಂಪೋಸಿಯಂನಲ್ಲಿ ಭಾಗವಹಿಸಲು ನಾವು ನೀಡಿದ ಆಹ್ವಾನವನ್ನು ಸ್ವೀಕರಿಸಿ ಇಲ್ಲಿಗೆ ಆಗಮಿಸಿದ ಎಲ್ಲಾ ಗೌರವಾನ್ವಿತ ಅತಿಥಿಗಳಾದ ನಿಮಗೆಲ್ಲರಿಗೆ ನಾನು ಮೊದಲನೆಯದಾಗಿ ಕೃತಜ್ಞತೆ ಅರ್ಪಿಸುತ್ತೇನೆ. ನೀವು ಇಲ್ಲಿಗೆ ಪ್ರಥಮ ಬಾರಿ ಆಗಮಿಸುತ್ತಿರುವಿರಾದರೂ ಅಥವಾ ನೀವು ನಮ್ಮ ಹಳೆಯ ಸ್ನೇಹಿತರಾಗಿದ್ದರೂ ನಾವು ನಿಮ್ಮನ್ನೆಲ್ಲಾ ಹಾರ್ದಿಕವಾಗಿ ಸ್ವಾಗತಿಸುತ್ತೇವೆ. ನೀವು ಇಲ್ಲಿಗೆ ಆಗಮಿಸಿ ಈ ಸಮಾರಂಭಕ್ಕೆ ಶೋಭೆ ನೀಡಿರುವುದರಿಂದ ನಾವು ನಿಮಗೆ ಕೃತಜ್ಞರಾಗಿದ್ದೇವೆ. ಇಲ್ಲಿಗೆ ಬಂದಿರುವ ನಿಮ್ಮ ಪೈಕಿ ಬಹುತೇಕ ಜನರು ಮುಸ್ಲಿಮೇತರಾಗಿರುವಿರಿ. ಅಹ್ಮದಿಯಾ ಮುಸ್ಲಿಮ್ ಜಮಾಅತ್ ಒಂದು ಇಸ್ಲಾಮೀ ಪಂಗಡ ಎಂದು ಅರಿತುಕೊಂಡಿದ್ದರೂ ನೀವು ಇಲ್ಲಿಗೆ ಆಗಮಿಸಲು ತೋರಿಸಿದ ಆಸಕ್ತಿಯನ್ನು ನಾನು ವಿಶಿಷ್ಟವಾಗಿ ಪ್ರಶಂಸಿಸುತ್ತೇನೆ. ಸಾಮಾನ್ಯವಾಗಿ ಹೇಳುವುದಾದರೆ, ಒಂದು ಧಾರ್ಮಿಕ ಗುಂಪಿನ ಜನರು ಇನ್ನೊಂದು ಧಾರ್ಮಿಕ ಗುಂಪಿನ ಜನರ ಸಮಾರಂಭಗಳಲ್ಲಿ ಧಾರ್ಮಿಕ ವ್ಯತ್ಯಾಸಗಳನ್ನು ಪರಿಗಣಿಸದೆ ಭಾಗವಹಿಸುವುದು ಅಪರೂಪವಲ್ಲ. ವಿವಿಧ ಧರ್ಮಗಳಿಗೆ ಸೇರಿದ ಜನರು ಪರಸ್ಪರ ನಿಕಟ ಸ್ನೇಹ ಸಂಬಂಧವನ್ನು ತಮ್ಮ ವಿಶಾಲ ಹೃದಯದ ಕಾರಣದಿಂದಲೂ ನಿಷ್ಕಳಂಕ ಮನೋಭಾವದ ಕಾರಣದಿಂದಲೂ ಹೊಂದಿರುವುದನ್ನು ನಾವು ಕಾಣಬಹುದಾಗಿದೆ. ಹೀಗಿದ್ದರೂ ಈ ಸಮಾರಂಭದಲ್ಲಿ ಭಾಗವಹಿಸಲು ಆಗಮಿಸಿದುದು ಅನೇಕ ಕಾರಣಗಳಿಂದ ಪ್ರಶಂಸಾರ್ಹವೂ ಗಮನಾರ್ಹವೂ ಆಗಿದೆ. ಮೊದಲನೆಯದಾಗಿ, ಒಂದು ಮುಸ್ಲಿಮ್ ಸಂಘಟನೆಯ ಆಹ್ವಾನ ನೀವು ಸ್ವೀಕರಿಸಿದುದು ಗಮನಾರ್ಹವಾಗಿದೆ. ಎರಡನೆಯದಾಗಿ, ಒಂದು ಮಸ್‌ಜಿದ್ ಸಂಕೀರ್ಣದೊಳಗೆ ಜರಗಲಿರುವ ಸಮಾರಂಭಕ್ಕೆ ನೀವು ಸಂತೋಷದಿಂದ ಆಗಮಿಸಿದುದು ಗಮನಾರ್ಹವಾಗಿದೆ. ಮೂರನೆಯದಾಗಿ, ಕೆಲವು ತಥಾಕಥಿತ ಮುಸ್ಲಿಮರು ನಡೆಸುತ್ತಿರುವ ಭೀಕರ ಕೃತ್ಯಗಳಿಂದ ಮುಸ್ಲಿಮೇತರರಲ್ಲಿ ಭಯ ಮತ್ತು ಅಪನಂಬಿಕೆಗಳು ತಲೆದೋರಿವೆಯಾದರೂ ನೀವು ಇಲ್ಲಿಗೆ ಆಗಮಿಸಿರುವಿರಿ.

ಇವುಗಳನ್ನೆಲ್ಲಾ ಪರಿಗಣಿಸಿ ನಿಮ್ಮ ಆಗಮನವನ್ನು ನಾವು ಬಹಳ ಮೆಚ್ಚುಗೆಯಿಂದ ಕಾಣುತ್ತಿದ್ದೇವೆ. ನಮ್ಮ ಹಳೆಯ ಮುಸ್ಲಿಮೇತರ ಸ್ನೇಹಿತರಿಗೆ ಚೆನ್ನಾಗಿ ತಿಳಿದಿದೆ: ಅಹ್ಮದಿಯಾ ಜಮಾಅತ್ ಏನನ್ನು ಉಪದೇಶಿಸುತ್ತಿದೆಯೋ ಅದರ ಪ್ರಕಾರವೇ ವರ್ತಿಸುತ್ತದೆ ಮತ್ತು ಅಹ್ಮದಿಯರಾದ ನಾವು ಏನನ್ನು ಹೇಳುತ್ತಿರುವೆವೋ ಅವು ನೈಜ ಇಸ್ಲಾಮೀ ತತ್ವಗಳಿಗೆ ಅನುಸಾರವಾಗಿಯೇ ಇರುತ್ತವೆ. "ಎಲ್ಲರೊಂದಿಗೆ ಪ್ರೀತಿ ಯಾರೊಂದಿಗೂ ದ್ವೇಷವಿಲ್ಲ" ಎನ್ನುವುದೇ ನಮ್ಮ ಆದರ್ಶವಾಗಿದೆ. ಈ ಸಮಾರಂಭದಲ್ಲಿ ಕೆಲವು ಹೊಸ ಸ್ನೇಹಿತರು ಭಾಗವಹಿಸುತ್ತಿದ್ದಾರೆ. ಅವರಿಗೆ ಇಸ್ಲಾಮಿನ ಬಗ್ಗೆ ಕೆಲವು ಸಂಶಯಗಳೂ ಸಂದೇಹಗಳೂ ಇರಬಹುದಾಗಿದೆ. ಅವರಿಗೆ ನಾನು ಪ್ರಾರಂಭದಿಂದಲೇ ಖಾತರಿ ನೀಡುತ್ತೇನೆ. ಕ್ರೂರತೆ, ಮತಭ್ರಾಂತಿ, ಅನ್ಯಾಯಗಳಿಗೆ ವಿರುದ್ಧವಾಗಿ ಅಹ್ಮದಿ ಮುಸ್ಲಿಮರಿಗಿಂತ ಹೆಚ್ಚಿನ ಮಟ್ಟದಲ್ಲಿ ಕಾರ್ಯಪ್ರವೃತ್ತವಾಗಿರುವ ಬೇರೆ ಯಾವುದೇ ಗುಂಪನ್ನು ಕಾಣಲು ಸಾಧ್ಯವಿಲ್ಲವೆಂಬ ಸತ್ಯವನ್ನು ಅವರು ಮನವರಿಕೆ ಮಾಡಿಕೊಳ್ಳುವರು. ಪ್ರೀತಿ, ವಾತ್ಸಲ್ಯ ಮತ್ತು ಸಾಹೋದರ್ಯದ ಉನ್ನತ ಮಟ್ಟವನ್ನು ಸ್ಥಾಪಿಸುವುದು ನಮ್ಮ ಉದ್ದೇಶ ಲಕ್ಷ್ಯಗಳಾಗಿವೆ.

ಈ ಪ್ರಸ್ತಾವನೆಯ ನಂತರ ನಾನು ಈ ರಾತ್ರಿಯ ಮುಖ್ಯ ಸಮಾರಂಭದ ಬಗ್ಗೆ ವಿವರಿಸುತ್ತೇನೆ. ಪ್ರತಿ ವರ್ಷ ಯುನೈಟೆಡ್ ಕಿಂಗ್‌ಡಮ್‌ನ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಈ ಕಾರ್ಯಕ್ರಮವನ್ನು ಜರಗಿಸುತ್ತದೆ. ಶಾಂತಿ ಭರಿತವಾದ ಲೋಕವನ್ನು ನಾವು ಆಶಿಸುತ್ತೇವೆ. ಯಾವಾಗಲೂ ಅದಕ್ಕೋಸ್ಕರ ಕಠಿಣ ಪರಿಶ್ರಮ ಮಾಡುತ್ತೇವೆಂದು ಲೋಕದ ಜನರಿಗೆ ತಿಳಿಸಲು ನಾವು ಈ

ಸಮಾರಂಭವನ್ನು ಏರ್ಪಡಿಸುತ್ತೇವೆ. ಈ ಮಹತ್ವಪೂರ್ಣವಾದ ಉದ್ದೇಶವನ್ನು ಸಫಲೀಕರಿಸಲು ನಮಗೆ ನಿಮ್ಮ ಬೆಂಬಲ ಮತ್ತು ಸಹಾಯದ ಅವಶ್ಯಕತೆ ಇದೆ. ಆದುದರಿಂದ ನಾವು ಇಲ್ಲಿ ಜಮಾಯಿಸಿರುವುದು ನಮ್ಮ ಉದ್ದೇಶ ಲಕ್ಷ್ಯದ ಪ್ರಾಮುಖ್ಯತೆಯನ್ನು ನೆನಪಿಸಲಿಕ್ಕಾಗಿದೆ. ಶಾಂತಿಗೋಸ್ಕರ ಕಠಿಣ ಪರಿಶ್ರಮ ಮಾಡುವುದು ಬಹಳ ಶ್ರೇಷ್ಠ ಹಂಬಲವಾಗಿದೆ. ಇದರ ಅವಶ್ಯಕತೆ ಲೋಕಕ್ಕೆ ಯಾವಾಗಲೂ ಇರುವಂತಹದ್ದಾಗಿದೆ. ನಾವು ಇಂದಿನ ಕಾಲದ ಲೋಕದ ಸ್ಥಿತಿಯನ್ನು ಪರಿಶೀಲಿಸುವುದಾದರೆ, ಲೋಕದಲ್ಲಿ ಶಾಂತಿ ಮತ್ತು ಸೌಹಾರ್ದ ಸ್ಥಾಪಿಸುವ ಆವಶ್ಯಕತೆ ಈಗ ಹಿಂದೆಂದಿಗಿಂತಲೂ ಹೆಚ್ಚಿಗೆ ಇದೆ. ಮಾತ್ರವಲ್ಲ, ಅದು ತುರ್ತಾಗಿ ಈಡೇರಿಸಲ್ಪಡಬೇಕಾಗಿದೆ. ಕಳೆದ ನಾಲ್ಕೈದು ವರ್ಷಗಳಲ್ಲಿ ವಿವಿಧ ವಿಪತ್ತುಗಳು ಮತ್ತು ಕ್ಷೋಭೆಗಳು ಸಂಭವಿಸಿವೆ. ಮಾತ್ರವಲ್ಲ, ಇನ್ನುಸಹ ಸಂಭವಿಸುತ್ತಿದ್ದು ಲೋಕದಲ್ಲಿ ಆತಂಕ ಮತ್ತು ಅಸ್ತವ್ಯಸ್ತತೆ ವ್ಯಾಪಿಸಿದೆ. ದಿನಗಳೆದಂತೆ ಲೋಕದಲ್ಲಿ ಶಾಂತಿಯು ಇಳಿಕೆಯಾಗುತ್ತಾ ಹೋಗುತ್ತಿದೆ ಎಂಬುದು ನಿಸ್ಸಂಶಯವಾಗಿದೆ. ಲೋಕದಲ್ಲಿ ಶಾಂತಿಭಂಗಕ್ಕೆ ಕೇವಲ ಒಂದೆರಡು ಕಾರಣಗಳನ್ನು ಹೇಳಲಾಗದು. ಅನೇಕ ಕಾರಣಗಳು ಲೋಕದಲ್ಲಿ ಅಶಾಂತಿ ಮತ್ತು ಅಸ್ತವ್ಯಸ್ತತೆಗಳನ್ನು ಸೃಷ್ಟಿಸಲು ಕಾರಣೀಭೂತಗಳಾಗಿವೆ. ಅವುಗಳಲ್ಲಿ ಕೆಲವನ್ನು ಮಾತ್ರ ನಾನು ಹೆಸರಿಸುವೆನು.

ಲೋಕದಲ್ಲಿ ಸಂಭವಿಸಿರುವ ಆರ್ಥಿಕ ಬಿಕ್ಕಟ್ಟು ಆತಂಕಕ್ಕೆ ಮತ್ತು ಜನ ಸಾಮಾನ್ಯರಲ್ಲಿ ಅಸಮಾಧಾನ ವ್ಯಾಪಿಸುವುದಕ್ಕೆ ಒಂದು ಕಾರಣವಾಗಿದೆ. ವಿವಿಧ ದೇಶಗಳೊಳಗೆ ಆಂತರಿಕವಾಗಿ ಅಧಿಕಾರಕ್ಕೋಸ್ಕರ ನಡೆಯುವ ಹೋರಾಟಗಳು ಇನ್ನೊಂದು ಕಾರಣವಾಗಿದೆ. ಅನೇಕ ದೇಶಗಳಲ್ಲಿ ನಾಗರಿಕರ ಹಕ್ಕುಗಳನ್ನು ಅನ್ಯಾಯಕರವಾಗಿ ಅಪರಿಹರಿಸಲಾಗಿದ್ದು ಆ ಕಾರಣದಿಂದ ಆ ದೇಶಗಳ ಜನರು ಅಶಾಂತರಾಗಿದ್ದಾರೆ. ಕೆಲವು ಪಕ್ಷಗಳು ತಮ್ಮ ಶಕ್ತಿಯನ್ನು ಪ್ರದರ್ಶಿಸಿ ತಮ್ಮನ್ನು ಎದುರಿಸುವವರನ್ನು ಅತ್ಯಂತ ಕ್ರೂರವಾಗಿ ಹಿಂಸಿಸುತ್ತವೆ. ಲೋಕದಲ್ಲಿ ಮತಭೇದಗಳಿಗೆ ಇನ್ನೊಂದು ಕಾರಣ ನ್ಯಾಯ ಪಾಲನೆ ಇಲ್ಲದಿರುವುದಾಗಿದೆ. ಈ ಕಾರಣದಿಂದ ಪರಸ್ಪರ ನಂಬಿಕೆ ಮತ್ತು ಭರವಸೆ ಇಲ್ಲವಾಗಿದೆ. ಕೆಲವು ಜನರು ಮತ್ತು ಕೆಲವು ಸರಕಾರಗಳು ಅನ್ಯರ ಮತ್ತು ಅನ್ಯ ದೇಶಗಳ ಸಂಪನ್ಮೂಲಗಳನ್ನು ಅಸೂಯೆಯಿಂದಲೂ ದುರಾಶೆಯಿಂದಲು ವೀಕ್ಷಿಸುತ್ತಿರುವುದು ಇನ್ನೊಂದು ಕಾರಣವಾಗಿದೆ. ವಾಸ್ತವಿಕವಾಗಿ ಇವು ಅಸೂಯೆಭರಿತ ನೋಟಗಳಿಗೆ ಸೀಮಿತವಾಗುವುದಿಲ್ಲ, ತಮಗೆ ಹಕ್ಕು ಇಲ್ಲದುದನ್ನು ಅನ್ಯರಿಂದ ಕಿತ್ತುಕೊಳ್ಳಲು ಪ್ರಯತ್ನಿಸಲಾಗುತ್ತಿದೆ.

ಲೋಕವು ದ್ವೇಷ ಮತ್ತು ಅಸ್ತವ್ಯಸ್ತತೆಗೆ ತುತ್ತಾಗಿರುವುದಕ್ಕೆ ಕಾರಣಗಳನ್ನು ದೀರ್ಘವಾಗಿ ಪಟ್ಟಿಮಾಡಬಹುದಾಗಿದೆ. ಅವುಗಳಲ್ಲಿ ಕೆಲವನ್ನು ಮಾತ್ರ ನಾನು ಪ್ರಸ್ತಾಪಿಸಿದ್ದೇನೆ. ಈ ಕಾರಣಗಳು ಚರ್ಚೆ ಮಾಡಬೇಕಾದವುಗಳಾಗಿವೆ ಮತ್ತು ಅವುಗಳ ಬಗ್ಗೆ ಗಾಢವಾಗಿ ಚಿಂತಿಸಿ ಪರಿಹಾರ ಮಾರ್ಗಗಳನ್ನು ಕೈಗೊಳ್ಳಬೇಕಾಗಿದೆ. ಹೀಗೆ ಮಾಡಿದರೆ ಮಾತ್ರ ಲೋಕದಲ್ಲಿ ಶಾಂತಿ ಸ್ಥಾಪಿಸಲು ಸಹಾಯಕವಾಗುವುದು. ಹಗೆತನ ಮತ್ತು ಮತಭೇದಗಳು ಪ್ರತಿ ದಿನ ಹೆಚ್ಚುತ್ತಾ ಹೋಗುತ್ತಿವೆ ಮತ್ತು ಅವು ನಮ್ಮ ನಿಯಂತ್ರಣದಿಂದ ವೇಗವಾಗಿ ಕೈ ಬಿಟ್ಟು ಹೋಗುತ್ತವೆ. ಲೋಕದ ಸ್ಥಿತಿ ಕೆಟ್ಟ ಸ್ಥಿತಿಯಿಂದ ಕಡು ಕೆಟ್ಟ ಸ್ಥಿತಿಗೆ ಹೋಗುತ್ತಿದೆ.ಒಂದು ಹಳೆಯ ಗಾದೆ ಸತ್ಯ ಭರಿತವಾಗಿದೆ. ಒಬ್ಬನನ್ನು ಸ್ನೇಹಿತನನ್ನಾಗಿ ಮಾಡಿಕೊಳ್ಳುವುದು ಬಹಳ ಕಷ್ಟಕರವಾಗಿದೆ. ಆದರೆ ಒಬ್ಬನನ್ನು ಶತ್ರುವನ್ನಾಗಿ ಮಾಡಿಕೊಳ್ಳುವುದು ಬಹಳ ಸುಲಭವಾಗಿದೆ ಎನ್ನುವುದೇ ಆ ಗಾದೆ. ನಾವು ಇಂದಿನ ಲೋಕವನ್ನು ಅವಲೋಕಿಸುವುದಾದರೆ ಸಮಾಜದ ಅತ್ಯಂತ ಕೆಳಮಟ್ಟದಿಂದ ಪ್ರಾರಂಭಿಸಿ ದೇಶೀಯ ಮತ್ತು ಅಂತರ್ರಾಷ್ಟ್ರೀಯ ಮಟ್ಟದವರೆಗೆ ಪರಶೀಲಿಸುವುದಾದರೆ ನಾವು ಈ ಪರಿಸ್ಥಿತಿಯನ್ನು ಕಾಣಬಹುದು. ಜನರು ದ್ವೇಷ ಭರಿತರಾಗಿ ಕೆಟ್ಟಕೆಲಸಗಳನ್ನು ಮಾಡುತ್ತಾರೆ. ಮಾತ್ರವಲ್ಲ ಅನ್ಯರನ್ನುಸಹ ಕ್ರೂರ ದಮನಕಾರಿ ಕೃತ್ಯಗಳನ್ನು ಮಾಡಲು ಉತೇಜಿಸುತ್ತಾರೆ. ಸಂಘರ್ಷಗಳನ್ನು ಉತ್ತೇಜಿಸುವವರ ಸಂಖ್ಯೆ ಸದಾ ಕಾಲ ವರ್ಧಿಸುತ್ತಾ ಹೋಗುತ್ತದೆ. ನೈತಿಕ ಗುಣಗಳನ್ನು ಹೊಂದಿ ನ್ಯಾಯಪಾಲನೆ ಮಾಡುತ್ತಾ ಸೌಹಾರ್ದಭಾವನೆಗಳನ್ನು ಹರಡುವವರ ಸಂಖ್ಯೆ ಸದಾಕಾಲ ಕಡಿಮೆಯಾಗುತ್ತಾ ಹೋಗುತ್ತಿದೆ. ಈ ಪರಿಸ್ಥಿತಿಯಲ್ಲಿ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಉತ್ತಮ ಸಮಾಜ ವ್ಯವಸ್ಥೆಯ ರೂಪೀಕರಣಕ್ಕೆ ಕಠಿಣ ಪರಿಶ್ರಮ ಮಾಡುತ್ತಾ ಇದೆ. ಇಂದಿನ ಕಾರ್ಯಕ್ರಮ ಸಹ ಲೋಕದಲ್ಲಿ ನೈಜ ಶಾಶ್ವತ ಶಾಂತಿ ಸ್ಥಾಪಿಸಲು ಮಾಡುವ ಕಠಿಣ ಪ್ರಯತ್ನದ ಒಂದು ಭಾಗವಾಗಿ ಸಂಘಟಿಸಲಾಗಿದೆ.

ಕಳೆದ ಐದು ಅಥವಾ ಆರು ವರ್ಷಗಳಲ್ಲಿ ನನಗೆ ಸಂಬಂಧ ಸ್ಥಾಪಿಸಲು ಸಾಧ್ಯವಾದ ಎಲ್ಲರಿಗೂ ಲೋಕದಲ್ಲಿ ಶಾಂತಿ ಕೆಟ್ಟು ಹೋಗುತ್ತಿರುವ ಬಗ್ಗೆ ಮುನ್ನೆಚ್ಚರಿಕೆ ನೀಡುತ್ತಾ ಇದ್ದೇನೆ. ಆರ್ಥಿಕ ಮತ್ತು ರಾಜಕೀಯ ವಾತಾವರಣವು ಕೆಟ್ಟು ಹೋಗುತ್ತಾ ಇರುವುದರಿಂದ ಲೋಕವು ಅತ್ಯಂತ ಭೀಕರ ನಾಶಕ್ಕೆ ಗುರಿಯಾಗಲಿದೆ ಎಂದು ನಾನು ಪದೇ ಪದೇ ಹೇಳುತ್ತಾ ಇದ್ದೆನು. ಲೋಕವು ಈಗ ಯಾವ ಮಾರ್ಗದಲ್ಲಿ ಸಾಗುತ್ತಿದೆಯೋ ಆ ಕಾರಣದಿಂದ ಭೀಕರ ಜಾಗತಿಕ ಮಹಾಯುದ್ಧ ಸಂಭವಿಸಬಹುದು ಅಥವಾ ಸಂಭವಿಸಿಯೇ ತೀರುವುದು ಎಂದು ಸಹ ನಾನು ಎಚ್ಚರಿಕೆ ನೀಡಿದ್ದೆ. ದ್ವಿತೀಯ ಜಾಗತಿಕ ಮಹಾಯುದ್ಧದ ನಂತರ ಅರುವತ್ತೈದು ವರ್ಷಗಳು ದಾಟಿ ಹೋಗಿವೆ. ಆ ಮಹಾಯುದ್ಧದಲ್ಲಿ ಸಂಭವಿಸಿದಂತಹ, ಅದರ ಮೊದಲೆಂದೂ ಘಟಿಸದ ಭೀಕರನಾಶ ನಷ್ಟಗಳ ಬಗ್ಗೆ ಇಂದಿನ ಕಾಲದ ಜನರು ಮರೆತಿರಬಹುದು. ಆ ಮಹಾಯುದ್ಧದಲ್ಲಿ ಎಪ್ಪತ್ತು ಮಿಲಿಯಕ್ಕಿಂತ ಹೆಚ್ಚಿನ ಜನರು ಕೊಲ್ಲಲ್ಪಟ್ಟರು – ಅವರಲ್ಲಿ ಬಹುತೇಕ ಜನರು ಯುದ್ಧದಲ್ಲಿ ಭಾಗವಹಿಸದ ನಿಷ್ಕಳಂಕ ನಾಗರಿಕರಾಗಿದ್ದರು. ಅವರನ್ನು ಒಲ್ಲದ ಮನಸ್ಸಿನಿಂದ ಯುದ್ಧಕ್ಕೆ ತಳ್ಳಲಾಗಿತ್ತು.

ಕಳೆದ ವರ್ಷದ ಪೀಸ್ ಸಿಂಪೋಸಿಯಂ ನಂತರ ನಾನು ಯುನೈಟೆಡ್ ಸ್ಟೇಟ್ಸ್‌ಗೆ ಭೇಟಿ ನೀಡಿದಾಗ ಕೆಪಿಟೋಲ್ ಹಿಲ್‌ನಲ್ಲಿ ಅಮೇರಿಕನ್ ಕಾಂಗ್ರೆಸ್(ಪಾರ್ಲಿಮೆಂಟ್) ಸದ್ಯಸರನ್ನು ಸಂಬೋಧಿಸಲು ಆಮಂತ್ರಿಸಲ್ಪಟ್ಟಿದ್ದೆನು. ಅಲ್ಲಿ ರಾಜ ಕಾರಣಿಗಳು ಮಾತ್ರವಲ್ಲ, ಚಿಂತಕರ ಕೂಟದವರು ಮತ್ತು ಶೈಕ್ಷಣಿಕ ಪರಿಣಿತರು ಸಹ ನನ್ನ ಭಾಷಣವನ್ನು ಆಲಿಸಿದರು. ನಾನು ಅವರೊಂದಿಗೆ ಹೀಗೆ ಹೇಳಿದೆ: ಯುನೈಟೆಡ್ ಸ್ಟೇಟ್ಸ್ ವಿಶ್ವದ ಅತ್ಯಂತ ಹಿರಿಯ ಮಹಾಶಕ್ತಿ ರಾಷ್ಟ್ರವಾದುದರಿಂದ ಅದು ಲೋಕದ ಬಗ್ಗೆ ತನಗಿರುವ ಜವಾಬ್ದಾರಿಗಳನ್ನು ಪರಿಗಣಿಸಬೇಕು. ಅವರು ತಮ್ಮ ಹೋಣೆಗಾರಿಕೆಗಳನ್ನು ಈಡೇರಿಸದಿದ್ದರೆ ಮತ್ತು ನ್ಯಾಯ ಪಾಲನೆಯ ಉನ್ನತ ಮಟ್ಟವನ್ನು ಅವರು ಕಾಪಾಡದಿದ್ದರೆ ಅವರು ಲೋಕವನ್ನು ಭಯಾನಕ ವಿನಾಶದ ಕಡೆಗೆ ಕೊಂಡೊಯ್ಯುವರು. ಮುಂದಿನ ಪೀಳಿಗೆಗಳು ನಮ್ಮ ಮೇಲೆ ಮತ್ತು ವಿಶಿಷ್ಟವಾಗಿ ಇಂದಿನ ಮಹಾಶಕ್ತಿ ರಾಷ್ಟ್ರಗಳ ಮೇಲೆ ವಿನಾಶದ ಕಾರಣಕರ್ತರೆಂದು ಆಪಾದನೆ ಮಾಡುವುವು. ನಮ್ಮ ಮಕ್ಕಳು ಮತ್ತು ನಮ್ಮ ಮೊಮ್ಮಕ್ಕಳು ನಮ್ಮನ್ನು ಕ್ಷಮಿಸಲಾರರು. ಏಕೆಂದರೆ ಅವರು ವಾರೀಸುದಾರರಾಗಿರುವ ವಿನಾಶ ಪರಿಸ್ಥಿತಿಯನ್ನು ತಡೆಗಟ್ಟಲು ನಮಗೆ ಸಾಧ್ಯವಿತ್ತು. ಇದೇ ರೀತಿ 2012

ಡಿಸೆಂಬರ್‌ನಲ್ಲಿ ಬ್ರೆಸ್ಸೆಲ್ಸ್‌ನಲ್ಲಿ ಯುರೋಪಿಯನ್ ಪಾರ್ಲಿಮೆಂಟಿನಲ್ಲಿ ನನ್ನ ಒಂದು ಭಾಷಣವನ್ನು, ಈಗ ತಾನೆ ಮಾತನಾಡಿದ ನಮ್ಮ ಉತ್ತಮ ಸ್ನೇಹಿತರಾದ ಡಾಕ್ಟರ್ ಚಾರ್ಲ್ಸ್ ಟನ್ನೋಕ್ ಏರ್ಪಡಿಸಿದ್ದರು. ನಾನು ಯುರೋಪಿಯನ್ ಪಾರ್ಲಿಮೆಂಟ್ ಸದಸ್ಯರನ್ನು ಸಂಬೋಧಿಸಿ ಮಾತನಾಡಿದೆ. ಅಲ್ಲಿ ವಿವಿಧ ದೇಶಗಳ ರಾಷ್ಟ್ರೀಯ ಪಾರ್ಲಿಮೆಂಟಿನ ಸದ್ಯಸರು ಸಹ ಉಪಸ್ಥಿತರಿದ್ದರು. ಇತರ ಅನೇಕ ಗಣ್ಯರು ಸಹ ಅಲ್ಲಿ ಹಾಜರಿದ್ದರು. ಯುರೋಪಿಯನ್ ಯೂನಿಯನ್ ಸದಸ್ಯರಾದ ದೇಶಗಳ ಹೊಣೆಗಾರಿಕೆಗಳ ಬಗ್ಗೆ ನೆನಪಿಸಿ ಕೊಡಲು ನನಗೆ ಸಂದರ್ಭ ಲಭಿಸಿತು. ಅಲ್ಲಿ ಸಹ ನಾನು ಶಾಂತಿ ಮತ್ತು ನ್ಯಾಯ ಪಾಲನೆಯ ಅವಶ್ಯಕತೆ ಬಗ್ಗೆ ಸಂದೇಶ ವಿವಿಧ ನೀಡಿದೆ. ಲೋಕದ ವಿವಿಧ ದೇಶಗಳಲ್ಲಿ ವಿವಿಧ ಸಂಧರ್ಭಗಳಲ್ಲಿ ನಾನು ಇದೇ ಸಂದೇಶ ನೀಡುತ್ತಿರುವೆನು. ನನ್ನ ಭಾಷಣಗಳನ್ನು ಆಲಿಸಿದವರ ಮೇಲೆ ಯಾವ ಪ್ರಭಾವ ಉಂಟಾಗಿದೆ ಮತ್ತು ಅವರು ಲೋಕದಲ್ಲಿ ಶಾಂತಿ ಸ್ಥಾಪನೆಗೋಸ್ಕರ ತಮ್ಮ ಪ್ರಭಾವದ ವಲಯದಲ್ಲಿ ಯಾವ ಕಾರ್ಯಕ್ರಮಗಳನ್ನು ನಡೆಸುತ್ತಿದ್ದಾರೆ ಎನ್ನುವುದು ನನಗೆ ತಿಳಿದಿಲ್ಲ. ಹೀಗಿದ್ದರೂ ದೇವರಿಚ್ಛಿಸುವುದಾದರೆ ನಾನು ಶಾಂತಿ, ಸಹನೆ, ನ್ಯಾಯ ಮತ್ತು ಕಾರುಣ್ಯವನ್ನು ಪ್ರತಿಪಾದಿಸಿ ಕಾರ್ಯಕ್ರಮಗಳನ್ನು ರೂಪಿಸುವ ನನ್ನ ಹೊಣೆಗಾರಿಕೆಗಳನ್ನು ಲೋಕದ ಮೂಲೆ ಮೂಲೆಗಳಿಗೆ ತಲುಪಿಸುವೆನು. ಇಂದು ಲೋಕವು ಅನುಭವಿಸುವ ನೋವು ಮತ್ತು ಕಷ್ಟವನ್ನು ನಿವಾರಿಸಲು ನ್ಯಾಯಪಾಲನೆ ಮತ್ತು ಸಮತೆಯ ಸ್ಥಾಪನೆಯನ್ನು ಅವಲಂಬಿಸುವುದು ಅವಶ್ಯಕವೆಂದು ನಾನು ಜನರಿಗೆ ಉಪದೇಶಿಸುತ್ತಾ ಮುಂದುವರಿಯುವೆನು. ನ್ಯಾಯಪಾಲನೆ ಎಂದರೇನು? ಅದಕ್ಕೆ ಆವಶ್ಯಕವಾದುದೇನು? ಇದಕ್ಕೆ ಉತ್ತರವನ್ನು ನಾನು ಪೂರ್ಣವಾಗಿ ಪವಿತ್ರ ಖುರ್‌ಆನನ್ನು ಆಧಾರವಾಗಿಟ್ಟುಕೊಂಡು ನೀಡುವೆನು.

ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ: ಎಲ್ಲ ಜನರು ಪರಿಪೂರ್ಣವಾದ ನ್ಯಾಯ ನಿಷ್ಠೆ ಉಳ್ಳವರೂ ಅಲ್ಲಾಹನಿಗೋಸ್ಕರ ಸಾಕ್ಷ್ಯ ನೀಡುವವರೂ ಆಗಬೇಕು. ಅದು ನಿಮಗೆ ಅಥವಾ ನಿಮ್ಮ ಮಾತಾಪಿತರ ಅಥವಾ ನಿಕಟ ಬಂಧುಗಳ ವಿರುದ್ಧವಾಗಿದ್ದರೂ ಸಹ. (ಪವಿತ್ರ ಖುರ್‌ಆನ್ 4:136 ನೋಡಿರಿ). ಪವಿತ್ರ ಖುರ್‌ಆನ್ ಹೀಗೆ ಸಹ ಹೇಳುತ್ತದೆ: "ಒಂದು ಜನಾಂಗದವರ ಶತ್ರುತ್ವ ಅವರೊಡನೆ ಅನ್ಯಾಯವಾಗಿ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ. ಸದಾ ನೀವು ನ್ಯಾಯಯುತವಾಗಿ ವರ್ತಿಸಿರಿ. ಅದು ದೇವಭಕ್ತಿಗೆ ಅತಿ ಸಮೀಪವಾದುದು." (ಪವಿತ್ರ ಖುರ್‌ಆನ್ 5:9).

ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ನಾವು ನ್ಯಾಯ ಪಾಲನೆಯ, ಮೇಲೆ ಉಲ್ಲೇಖಿಸಿದ ಮಟ್ಟವನ್ನು ತಲುಪಬೇಕು. ಆದರೆ ಇಂದಿನ ಲೋಕವನ್ನು ನಾವು ಅವಲೋಕಿಸುವಾಗ ನ್ಯಾಯ ಪಾಲನೆಯನ್ನು ಯಾವುದೇ ಮಟ್ಟದಲ್ಲಿ ಕಾಪಾಡಲಾಗುತ್ತಿಲ್ಲ ಎಂದು ಕಾಣುತ್ತೇವೆ.

ಮುಸ್ಲಿಮರಲ್ಲಿ ಬಹುತೇಕ ಜನರು ನ್ಯಾಯಪಾಲನೆ ಎಂಬ ಈ ನೈತಿಕ ಗುಣವನ್ನು ಮರೆತು ಬಿಟ್ಟಿರುವರು ಎನ್ನುವುದನ್ನು ನಾನು ಖೇದಪೂರ್ವಕವಾಗಿ ಹೇಳಲು ಬಯಸುತ್ತೇನೆ. ಈ ಉಪದೇಶವನ್ನು ಮುಸ್ಲಿಮರಿಗೆ ನೀಡಲಾಗಿದ್ದರೂ ಮುಸ್ಲಿಮ್ ಸಮಾಜದಲ್ಲಿ ಜನರ ಮಧ್ಯೆ ಹಾಗೂ ಸರಕಾರ ಮತ್ತು ಜನರ ಮಧ್ಯೆ ಈ ಉಪದೇಶದ ಪಾಲನೆಯು ಕಾಣಿಸದು. ಇದೇ ರೀತಿ ಅಂತರ್ರಾಷ್ಟ್ರೀಯ ಸಂಬಂಧಗಳಲ್ಲಿಯೂ ಈ ಉನ್ನತ ನೈತಿಕ ಗುಣವನ್ನು ಪಾಲಿಸುವುದನ್ನು ಕಾಣಲಾಗದು. ತನ್ನ ವಿರುದ್ಧ, ಅಥವಾ ತನ್ನ ನಿಕಟ ಬಂಧುಗಳ ವಿರುದ್ಧ ಸತ್ಯ ಮತ್ತು ನ್ಯಾಯ ಪಾಲನೆಗೋಸ್ಕರ ಸಾಕ್ಷ್ಯ ನೀಡುವ ಒಬ್ಬನನ್ನು ಕೂಡ ಕಾಣುವುದು ಅಸಾಧ್ಯವೇ ಆಗಿದೆ. ಇದೇ ರೀತಿ ಒಂದು ದೇಶ ಇನ್ನೊಂದು ದೇಶದ ವಿರುದ್ಧ ಯಾವುದಾದರೂ ವಿಷಯದಲ್ಲಿ ಭಿನ್ನಾಭಿಪ್ರಾಯ ಹೊಂದಿದ್ದರೆ, ಅಥವಾ ಒಂದು ದೇಶ ಇನ್ನೊಂದನ್ನು ತನ್ನ ಶತ್ರು ದೇಶವೆಂದು ಗಣಿಸುವಾಗ ಆ ದೇಶದೊಂದಿಗೆ ನ್ಯಾಯೋಚಿತವಾಗಿ ವರ್ತಿಸುವುದು ಮತ್ತು ಇಂತಹ ಉನ್ನತ ನೈತಿಕ ಆದರ್ಶವನ್ನು ಪಾಲಿಸುವುದು ತೀರಾ ಕಂಡು ಬರಲಾರದು. ಈ ಎಲ್ಲಾ ವಿಷಯಗಳನ್ನು ಗಮನದಲ್ಲಿರಿಸಿ ನಾನು ಹೇಳಲು ಬಯಸುವುದೇನೆಂದರೆ, ನಾವು ಲೋಕದಲ್ಲಿ ನೈಜ ಶಾಂತಿಯನ್ನು ಬಯಸುವುದಾದರೆ ಮತ್ತು ಲೋಕವನ್ನು ನಾಶದಿಂದ ಸಂರಕ್ಷಿಸಲು ಬಯಸುವುದಾದರೆ, ನಾವು ನ್ಯಾಯಪಾಲಿಸುವವರೂ ಸತ್ಯದೊಂದಿಗೆ ನಿಷ್ಕಳಂಕ ಮತ್ತು ನಿಷ್ಠಾವಂತರಾಗಿಯೂ ವರ್ತಿಸುವವರಾಗಬೇಕು. ನಮ್ಮ ಮುಂದಿನ ಪೀಳಿಗೆ ನಮ್ಮನ್ನು ಪ್ರೀತಿಪೂರ್ವಕವಾಗಿ ಅವಲೋಕಿಸಬೇಕಾದರೆ ಮತ್ತು ನಮ್ಮ ಕಾರಣದಿಂದ ಅಂಗವಿಕಲರಾಗಿ ಕೋಪದಿಂದ ನಮ್ಮ ಕಡೆಗೆ ನೋಡದಿರಬೇಕಾದರೆ ನಾನು ಪ್ರತಿಪಾದಿಸಿದ ನ್ಯಾಯಪಾಲನೆಯ ತತ್ವಗಳನ್ನು ಪಾಲಿಸುವವರಾಗಬೇಕು. ನಾವು ನಮ್ಮ ಹೊಣೆಗಾರಿಕೆಯನ್ನು ಈಡೇರಿಸದಿದ್ದರೆ ಮುಂದೆ ಬಂದೆರಗಲಿರುವ ನಾಶದಿಂದ ಸಂರಕ್ಷಣೆ ಪಡೆಯುವ ಸಾಧ್ಯತೆಯೇ ಇರುವುದಿಲ್ಲ; ಯಾವ ಅಡಗುದಾಣವೂ ಎಲ್ಲಿಯೂ ಲಭಿಸಲಾರದು.

ನಾನು "ಅಂಗವಿಕಲರಾದ ಮುಂದಿನ ಪೀಳಿಗೆ"ಯ ಬಗ್ಗೆ ಉದ್ದೇಶ ಪೂರ್ವಕವಾಗಿಯೇ ಹೇಳಿದ್ದೇನೆ. ಏಕೆಂದರೆ ಇನ್ನೊಂದು ಜಾಗತಿಕ ಯುದ್ಧ ಪ್ರಾರಂಭವಾಗುವುದಾದರೆ ಅಣು ಅಸ್ತ್ರಗಳು ಉಪಯೋಗಿಸಲ್ಪಡುವುವು. ಅಣುಶಸ್ತ್ರ ಬಳಸಿ ಮಾಡಲಾಗುವ ಯುದ್ಧ ಪರಿಣಾಮಗಳು ಊಹಾತೀತವಾಗಿದೆ ಮತ್ತು ಅನೇಕ ಮುಂದಿನ ಪೀಳಿಗೆಗಳನ್ನು ಅದರ ಪರಿಣಾಮ ಬಾಧಿಸುವುದು. ಆದುದರಿಂದ ನಾನು ಪ್ರತಿಪಾದಿಸಿದ ನ್ಯಾಯಪಾಲನೆ ಮಟ್ಟವನ್ನು ಮುಸ್ಲಿಮರು ಮಾತ್ರವಲ್ಲ, ಮುಸ್ಲಿಮೇತರೆಲ್ಲರೂ ಎಲ್ಲಾ ದೇಶಗಳ ಜನರೂ ಅನುಷ್ಠಾನಕ್ಕೆ ತರಬೇಕು. ಅಣುಶಸ್ತ್ರ ಬಳಸುವ ಯುದ್ಧದ ದುಷ್ಪರಿಣಾಮಗಳಿಂದ ಯಾರೂ ಮುಕ್ತರಾಗಲಾರರು. ಏಕೆಂದರೆ ಅದರ ವಿನಾಶಕಾರಿ ಮಾರ್ಗವನ್ನು ತಡೆಗಟ್ಟಲು ಯಾರಿಗೂ ಸಾಧ್ಯವಾಗದು. ಲೋಕದ ಪೂರ್ವದ ಜನರೂ ಪಶ್ಚಿಮದ ಜನರೂ ಯುದ್ಧದ ದುಷ್ಪರಿಣಾಮಗಳಿಗೆ ಗುರಿಯಾಗುವರು.

ಪ್ರಚಲಿತ ಘಟನೆಗಳನ್ನು ನೋಡುವಾಗ ಜಾಗತಿಕ ಮಹಾಯುದ್ಧ ಏಷ್ಯದಿಂದ ಸ್ಫೋಟಿಸಬಹುದೆಂದು ತೋರುವುದಾದರೂ ಅದರಿಂದ ದೂರ ಸರಿದು ನಿಲ್ಲಲು ಪಶ್ಚಿಮಕ್ಕೆ ಸಾಧ್ಯವಾಗಲಾರದು. ಇದನ್ನು ವಿಶದೀಕರಿಲು ಉತ್ತರ ಮತ್ತು ದಕ್ಷಿಣ ಕೊರಿಯ ದೇಶಗಳ ಮಧ್ಯೆ ವರ್ಧಿಸುತ್ತಿರುವ ಬಿಗುವಿನ ಸ್ಥಿತಿಯನ್ನು ನೋಡಬಹುದಾಗಿದೆ. ಈ ಎರಡು ದೇಶಗಳ ಪರಸ್ಪರ ಸಂಬಂಧ ಕೆಟ್ಟು ಹೋಗುತ್ತಿದೆ. ಯುನೈಟೆಡ್ ಸ್ಟೇಟ್ಸ್ ಸಾವಿರಾರು ಮೈಲು ದೂರವಿರುವ ದೇಶವಾದರೂ ಅದು ಕೂಡ ಈ ವಿಷಯದಲ್ಲಿ ನೇರವಾಗಿ ಹಸ್ತಕ್ಷೇಪ ನಡೆಸಿದೆ. ಉತ್ತರ ಕೊರಿಯ ದಕ್ಷಿಣ ಕೊರಿಯವನ್ನು ಮಾತ್ರವಲ್ಲ ಅಮೇರಿಕವನ್ನು ಸಹ ಬೆದರಿಸಿದೆ. ಅದು ಅಣು ಬಾಂಬನ್ನು ಹೊಂದಿದೆ ಮಾತ್ರವಲ್ಲ ಅದನ್ನು ಬಳಸುವ ಬಗ್ಗೆ ಯಾವ ಹಿಂಜರಿಕೆಯನ್ನೂ ಹೊಂದಿಲ್ಲ. ಉತ್ತರ ಕೊರಿಯ ಅಣು ಬಾಂಬ್ ಬಳಕೆಯ ದುಷ್ಪರಿಣಾಮಗಳ ಬಗ್ಗೆ ಲಕ್ಷ್ಯ ನೀಡುವುದಿಲ್ಲ ಮಾತ್ರವಲ್ಲ ಅದು ಯುದ್ಧೋತ್ಸಾಹಭರಿತವಾಗಿದೆ. ಇದೇ ಕಾರಣದಿಂದ ಅಮೇರಿಕ ತನ್ನ ಪಶ್ಚಿಮದ ಕರಾವಳಿಯಲ್ಲಿ ಮಿಸ್ಸೈಲ್ ಪ್ರತಿರೋಧಕ ವ್ಯವಸ್ಥೆಯನ್ನು ಬಲಪಡಿಸುವುದಾಗಿ ಹೇಳಿದೆ. ರಶ್ಯಾ ಮತ್ತು ಚೀನ ಸಹಿತ ಎಲ್ಲಾ ದೊಡ್ಡ ದೇಶಗಳು ಇತ್ತೀಚೆಗೆ ಉತ್ತರ ಕೊರಿಯವನ್ನು ಖಂಡಿಸಿವೆ.

ಇನ್ನೊಂದು ಸಂಘರ್ಷ ಪರಿಸ್ಥಿತಿ ಚೀನ ಮತ್ತು ಜಪಾನು ಮಧ್ಯದಲ್ಲಿರುವುದಾಗಿ ಕಾಣುತ್ತೇವೆ. ಚೀನದ ಪೂರ್ವ ದಿಕ್ಕಿನ ಸಮುದ್ರದಲ್ಲಿರುವ ದ್ವೀಪಗಳ ಮಾಲಿಕತ್ವದ ಬಗ್ಗೆ ಇರುವ ವಿವಾದ ಕಳೆದ ಕೆಲವು ತಿಂಗಳುಗಳಲ್ಲಿ ವರ್ಧಿಸಿದೆ. ಈ ವಿವಾದ ಎರಡು ದೇಶಗಳಿಗೆ ಸೀಮಿತವಾಗುವುದೆಂದು ಹೇಳಲಿಕ್ಕೆ ಸಾಧ್ಯವಿಲ್ಲ. ಅಮೇರಿಕ ಸಹ ಇದರಲ್ಲಿ ಹಸ್ತಕ್ಷೇಪ ಮಾಡುವ ಸಾಧ್ಯತೆಗಳಿವೆ. ಎರಡು ದೇಶಗಳು ಸಹನೆಯಿಂದ ವರ್ತಿಸಬೇಕೆಂದು ಅಮೇರಿಕ ಹೇಳಿದ್ದರೂ ಅದರ ಸಹಾನುಭೂತಿ ಜಪಾನಿನ ಪರವಾಗಿದೆ. ಅಮೇರಿಕ ಮತ್ತು ಜಪಾನ್‌ಗಳ ಮಧ್ಯೆ ಇರುವ ಬಾಂಧವ್ಯ ಹೇಗಿದೆ ಎಂದರೆ ಚೀನ ಮತ್ತು ಜಪಾನಿನ ಮಧ್ಯೆ ಯುದ್ಧ ಪ್ರಾರಂಭವಾದರೆ ಅಮೇರಿಕ ಜಪಾನಿನ ಪರವಾಗಿ ಹೋರಾಡುವುದು.

ಇಂದಿನ ಕಾಲಘಟ್ಟದಲ್ಲಿ ಶತ್ರು ರಾಷ್ಟ್ರಗಳಿಗೆ ಹಾನಿಯನ್ನುಂಟು ಮಾಡಲು ಅವರ ವಾಣಿಜ್ಯ ವ್ಯವಸ್ಥೆಯನ್ನು ಆಕ್ರಮಣಕ್ಕೆ ಗುರಿಪಡಿಸಲಾಗುತ್ತಿದೆ. ಇಂದಿನ ಲೋಕ, ಐವತ್ತು ಅರವತ್ತು ವರ್ಷಗಳಷ್ಟು ಹಿಂದಿನ ಲೋಕದ ಹಾಗೆ ಅಲ್ಲ. ಹಿಂದಿನ ಕಾಲದಲ್ಲಿ ಸಹ ಒಂದು ದೇಶದ ವರ್ತನೆ ಬೇರೆ ದೇಶಗಳನ್ನು ಬಾಧಿಸುತ್ತಿತ್ತು. ಆದರೆ ಈಗ ದೇಶಗಳು ಅತ್ಯಂತ ನಿಕಟ ಸಂಬಂಧ ಹೊಂದಿರುವುದರಿಂದ ಅದರ ಪರಿಣಾಮ ಬಹಳ ಹೆಚ್ಚಾಗಿರುತ್ತದೆ. ಚೀನವು ಸದಾ ಕಾಲ ಅಭಿವೃದ್ಧಿ ಪಥದಲ್ಲಿ ಸಾಗುತ್ತಿರುವ ಆರ್ಥಿಕ ಶಕ್ತಿಯಾಗಿದ್ದು ಅದು ವಿಶ್ವದ ಅತ್ಯಂತ ದೊಡ್ಡ ಆರ್ಥಿಕ ಶಕ್ತಿಯಾಗಿ ಪರಿಣಮಿಸುವ ಸಾಧ್ಯತೆ ಮುಂದಿನ ವರ್ಷಗಳಲ್ಲಿದೆ. ಅದರ ಆರ್ಥಿಕ ಶಕ್ತಿ ಬಲಿಷ್ಠವಾಗಿದ್ದು ಆರ್ಥಿಕ ವ್ಯಾಖ್ಯಾನಗಾರರು ಅಮೇರಿಕ ಅದರ ಬಗ್ಗೆ ಆತಂಕಗೊಂಡಿದೆ ಎಂದು ಹೇಳುತ್ತಾರೆ. ಚೀನದ ಆರ್ಥಿಕ ಅಭಿವೃದ್ಧಿಯನ್ನು ತಡೆಯಲು ಅಮೇರಿಕ ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನು ಮಾಡುವುದೆಂದು ಹೇಳುತ್ತಿರುವುದು ಸರಿಯೇ ಆಗಿದೆ. ಈ ಕಾರಣದಿಂದ ಚೀನ ಜಾಗರೂಕತೆ ವಹಿಸಿ ಜಪಾನಿನ ವಿರುದ್ಧವಿರುವ ತನ್ನ ವಿವಾದದ ಬಗ್ಗೆ ಸಹನೆಯಿಂದ ವರ್ತಿಸುವುದು ಎಂದು ಹೇಳಬಹುದಾದರೂ ಅದರ ಬಗ್ಗೆ ಖಾತರಿ ನೀಡಲಾಗದು. ಕೆಲವು ಸಾರಿ ಬಲಹೀನ ಪಕ್ಷಗಳನ್ನು ಬೆದರಿಸಿದಾಗ ಅಥವಾ ಅವರನ್ನು ತಪ್ಪಿಸಿಕೊಳ್ಳಲಾಗದಂತೆ ಹಿಡಿದಿಟ್ಟಾಗ ಅವರು ಆಕ್ರಮಣ ನಡೆಸಿ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಹಾಗೆ ಅವರು ಹೆಚ್ಚು ಅಪಾಯಕಾರಿಗಳಾಗುತ್ತಾರೆ.

ಪ್ರಾಯಶಃ ದೂರದೃಷ್ಟಿಯನ್ನು ಹೊಂದಿ ಹಾಗೂ ಅಮೇರಿಕದ ಧೋರಣೆಯನ್ನು ಪರಿಗಣಿಸಿ ಮತ್ತು ಇತರ ಪಶ್ಚಿಮದ ದೇಶಗಳ ಮೇಲುಂಟಾಗಬಹುದಾದ ಪರಿಣಾಮಗಳನ್ನು ಗಮನಿಸಿ ಚೀನ ಹೊಸ ಮಾರುಕಟ್ಟೆಗಳನ್ನು ಹುಡುಕಲು ಪ್ರಾರಂಭಿಸಿದೆ. ಇತ್ತೀಚೆಗೆ ಚೀನ ಆಫ್ರಿಕಾದಲ್ಲೂ ಇತರ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲೂ ಬಹಳ ಭಂಡವಾಳ ಹೂಡಿದೆ. ಆದುದರಿಂದ ಚೀನದ ಆರ್ಥಿಕ ಹಿತಾಸಕ್ತಿಗಳು ಲೋಕದ ಆ ಭಾಗಗಳಲ್ಲಿ ವ್ಯಾಪಕವೂ ಸುಸ್ಥಾಪಿತವೂ ಆಗಿವೆ. ಆಫ್ರಿಕಾದ ದೇಶಗಳು ತಮ್ಮ ಪ್ರಾಮುಖ್ಯತೆಯನ್ನು ಮನವರಿಕೆ ಮಾಡಿಕೊಂಡರೆ ಪಶ್ಚಿಮದ ಮತ್ತು ಏಶಿಯನ್ ದೇಶಗಳ ಮಧ್ಯೆ ಯುದ್ಧ ನಡೆಯುವಾಗ ಆಫ್ರಿಕ ಸುರಕ್ಷಿತವಾದ ಆಶ್ರಯಧಾಮವಾಗಬಲ್ಲದು.

ಸಂಕ್ಷಿಪ್ತವಾಗಿ ಹೇಳುವುದಾದರೆ, ಇಂದಿನ ಲೋಕ ಎದುರಿಸುತ್ತಿರುವ ಅಪಾಯಗಳು ಅತ್ಯಂತ ಭಯಾನಕವಾಗಿವೆ. ಒಂದು ಬಿಗುವಿನ ಪರಿಸ್ಥಿತಿ ಫಕ್ಕನೆ ಸ್ಫೋಟಗೊಂಡು ಜ್ವಲಿಸುವುದು ಸಂಭಾವ್ಯವಾಗಿದೆ ಎಂದು ನಾವು ಯಾವಾಗಲೂ ನೆನಪ್ಪಿಟ್ಟುಕೊಳ್ಳಬೇಕು. ಚಿಕ್ಕಪುಟ್ಟ ಮತ್ತು ಸಾಮಾನ್ಯವೆಂದು ತೋರುವ ವಿಷಯಗಳನ್ನು ಸೂಕ್ಷ್ಮವಾಗಿ ನಿಭಾಯಿಸದಿದ್ದರೆ ಅತ್ಯಂತ ಅಪಾಯಕಾರಿ ಪರಿಣಾಮಗಳನ್ನು ಉಂಟು ಮಾಡಬಲ್ಲ ಮೂಲವಾಗಬಲ್ಲವು. ಚರಿತ್ರೆ ಇದಕ್ಕೆ ಸಾಕ್ಷ್ಯ ವಹಿಸುತ್ತಿದೆ; ಪ್ರಥಮ ಮತ್ತು ದ್ವಿತೀಯ ಮಹಾಯುದ್ಧದಲ್ಲಿ ನಾವು ಇದನ್ನು ಕಂಡಿದ್ದೇವೆ.

ಇದೇ ರೀತಿ ಸಿರಿಯಾದಲ್ಲಿ ಸಂಭವಿಸುತ್ತಿರುವ ದುರ್ಘಟ ಪರಿಸ್ಥಿತಿ ನಮ್ಮನ್ನು ಬಹಳ ವಿಶಾಲವಾದ ಮತ್ತು ವಿನಾಶಕರವಾದ ಪರಿಣಾಮಗಳಿಗೆ ಒಯ್ಯುತ್ತಿದೆ ಎಂದು ತೋರುತ್ತದೆ. ಮೇಲಿಂದ ಮೇಲೆ ನೋಡುವಾಗ ಇದು ಸರಕಾರಿ ಸೈನ್ಯ ಮತ್ತು ವಿದ್ರೋಹಿಗಳ ಮಧ್ಯೆ ನಡೆಯುವ ಯುದ್ಧ ಎನ್ನಲಾಗುತ್ತಿದ್ದರೂ ಇದರಿಂದ ಸಂಭವಿಸುತ್ತಿರುವ ಸಾವು ಒಂದು ಲಕ್ಷದ ಅಂಚನ್ನು ತಲುಪುತ್ತದೆ. ಕೆಲವು ಶಕ್ತಿಶಾಲಿ ದೇಶಗಳು ಯೋಚಿಸುವುದೇನೆಂದರೆ, ವಿರೋಧಿ ವಿದ್ರೋಹಿಗಳು ಜಯಿಸಿ ಸರಕಾರವನ್ನು ರಚಿಸಲು ಸಮರ್ಥರಾದರೆ ಸಿರಿಯಾದ ಸ್ಥಿತಿ ಕೂಡಲೆ ಶಾಂತವಾಗುವುದು. ಸಿರಿಯದ ಜನರ ಸ್ಥಿತಿ ಉತ್ತಮಗೊಳ್ಳುವುದೆಂದೂ ಸಿರಿಯಾ ಸರಕಾರ ಮತ್ತು ಅಂತರ್‌ರಾಷ್ಟ್ರೀಯ ಸರಕಾರಗಳ ಸಂಬಂಧ ಉತ್ತಮಗೊಳ್ಳುವುದೆಂದೂ ಅವರು ನಂಬುತ್ತಾರೆ. ತಥಾಕಥಿತ 'ಕ್ರಾಂತಿ'ಯ ನಂತರ ಲಿಬ್ಯ ಮತ್ತು ಈಜಿಪ್ಪಿನ ಸ್ಥಿತಿಯನ್ನು ನೋಡುವುದಾದರೆ ಸಿರಿಯದ ಸ್ಥಿತಿ ಆವಶ್ಯಕವಾಗಿಯೂ ಉತ್ತಮಗೊಳ್ಳುವುದೆಂದು ಹೇಳಲಾರೆವು. ಇದರ ಒಂದು ಚಿಹ್ನೆ ಇತ್ತೀಚೆಗೆ ಕಾಣಿಸಿದೆ. ಫಿಲಿಪ್ಪೀನ್ಸ್ ದೇಶದ ಶಾಂತಿಪಾಲಕರಾದ ಸೈನಿಕರನ್ನು ವಿದ್ರೋಹಿಗಳು ಒತ್ತೆಸೆರೆ ಹಿಡಿದರು. ವಿದ್ರೋಹಿಗಳು ತಮಗೆ ಶಾಂತಿ ಪಾಲಕರಾಗಲಿ ಆಹಾರದ ಪೂರೈಕೆಯಾಗಲಿ ಬೇಕಾಗಿಲ್ಲ; ತಮಗೆ ಆಯುಧಗಳು, ಟ್ಯಾಂಕ್ ಮತ್ತು ವಿಮಾನಗಳ ವಿರುದ್ಧ ಆಕ್ರಮಣ ಮಾಡುವ ಮಿಸ್ಸೈಲ್‌ಗಳು ಬೇಕಾಗಿವೆ ಎಂದು ಹೇಳುತ್ತಾರೆ. ಇಂತಹ ಕೃತ್ಯಗಳು ಮತ್ತು ಹೇಳಿಕೆಗಳು ಸಿರಿಯಾದಲ್ಲಿ ಸ್ಥಿರವಾದ ಶಾಂತಿ ಸ್ಥಾಪನೆಗೊಳ್ಳುವ ಬಗ್ಗೆ ಭರವಸೆ ಉಂಟುಮಾಡುತ್ತಾ ಇಲ್ಲ.

ಹಾಗಾದರೆ ಸಿರಿಯಾದಲ್ಲಿ ಏನು ಮಾಡಬೇಕು? ಸಿರಿಯಾದಲ್ಲಿ ಜನರ ಮೇಲೆ ಸರಕಾರದಿಂದ ಕ್ರೂರತೆ ಮತ್ತು ದಬ್ಬಾಳಿಕೆ ಮುಂದುವರಿಯುತ್ತಿದೆ ಮತ್ತು ಸಿರಿಯಾದ ಜನರು ಸಹಾಯವನ್ನು ಬೇಡುತ್ತಿದ್ದಾರೆ ಎಂದು ಲೋಕಕ್ಕೆ ಮನವರಿಕೆ ಆಗುವುದಾದರೆ ಸಿರಿಯಾದ ಸುತ್ತಮುತ್ತಲಿನ ದೇಶಗಳು ಈ ಹಿಂಸಾಚಾರವನ್ನು ಕೊನೆಗೊಳಿಸಲು ಮತ್ತು ಶಾಂತಿ ಸ್ಥಾಪಿಸಲು ಒಗ್ಗೂಡಬೇಕು. ಅವರು ತಮ್ಮ ಸ್ವಾರ್ಥ ಹಿತಾಸಕ್ತಿಗಳನ್ನು ಈಡೇರಿಸಲು ಬಯಸಬಾರದು. ಅವರ ಉದ್ದೇಶ ಲಕ್ಷ್ಯ ಸಿರಿಯದಲ್ಲಿ ಶಾಂತಿ ಸ್ಥಾಪಿಸಿ ಅಲ್ಲಿನ ಜನರು ಪ್ರಗತಿಗೊಳ್ಳುವಂತೆ ಮಾಡುವುದಾಗಿರಬೇಕು. ಪವಿತ್ರ ಖುರ್‌ಆನ್ ಹೀಗೆ ಉಪದೇಶಿಸುತ್ತದೆ: ಹಿಂಸಾಚಾರವನ್ನು ಕೊನೆಗೊಳಿಸಿದ ನಂತರ ಹಿಂಸೆ ಮಾಡಿದವನು ಶಾಂತಿ ಸಂಧಾನಕ್ಕೆ ಒಪ್ಪಿಗೆ ಸೂಚಿಸಿದರೆ ಅವನ ಮೇಲೆ ಅನುಚಿತ ನಿಯಂತ್ರಣಗಳನ್ನು ಹೇರಿ ಶಕ್ತಿ ಪ್ರದರ್ಶನ ಮಾಡಬಾರದು. ಈ ಮುಖ್ಯ ತತ್ವ ಒಂದು ದೇಶ ಇನ್ನೊಂದು ದೇಶವನ್ನು ಆಕ್ರಮಿಸುವಾಗ ಅನ್ವಯಿಸುವಂತಹದ್ದಾಗಿದ್ದರೂ ಈ ತತ್ವವನ್ನು ಶಾಂತಿಯನ್ನು ಸ್ಥಾಪಿಸಲು ಎಲ್ಲಾ ಸಂದರ್ಭಗಳಲ್ಲೂ ಬಳಸಬಹುದಾಗಿದೆ.

ಇತ್ತೀಚೆಗೆ ಇಸ್ರಾಯೇಲ್ ದೇಶದ ಅಧ್ಯಕ್ಷ ಶೀಮೋನ್ ಪೇರೆಸ್, ಜಾಣ್ಮೆ ಭರಿತ ಒಂದು ಸಲಹೆ ಸಿರಿಯಕ್ಕೆ ಸಂಬಂಧಿಸಿ ನೀಡಿದರು: ಪಾಶ್ಚಿಮಾತ್ಯ ದೇಶಗಳು ಅಲ್ಲಿನ ಸರಕಾರವನ್ನು ಕಿತ್ತುಹಾಕಲು ಕೈ ಹಾಕುವುದಕ್ಕೆ ಬದಲಾಗಿ ಸಂಯುಕ್ತ ರಾಷ್ಟ್ರ ಸಂಘ ಒಂದು ಶಾಂತಿಪಾಲಕ ಸೈನ್ಯವನ್ನು ಸಿರಿಯಕ್ಕೆ ಕಳುಹಿಸಬೇಕು. ಅದರಲ್ಲಿ ಅರಬಿ ವಂಶಜರಾದ ಸೈನಿಕರು ಮಾತ್ರ ಇರಬೇಕು. ಹೀಗೆ ಮಾಡಿದರೆ ಅದು ಪಾಶ್ಚಿಮಾತ್ಯರ ಆಕ್ರಮಣ ಅಥವಾ ಸಾಮ್ರಾಜ್ಯವಾದ ಎಂದಾಗದು. ಅರಬ್ ಲೀಗ್ ಎಂಬ ಪ್ರಾದೇಶಿಕ ಸಂಸ್ಥೆ ಇದೆ. ಅದು ಸಿರಿಯಾದಲ್ಲಿ ಶಾಂತಿ ಮತ್ತು

ನ್ಯಾಯವನ್ನು ಸ್ಥಾಪಿಸುವ ಸರಕಾರವನ್ನು ಏರ್ಪಡಿಸಲು ಪ್ರಯತ್ನಿಸಬೇಕು.

ಜಾಣ್ಮೆಯ ಉಪದೇಶಗಳನ್ನು ಯಾರು ನೀಡಿದರೂ ಅದನ್ನು ಅಂಗೀಕರಿಸಬೇಕು; ಅದನ್ನು ನೀಡಿದುದು ಯಾರೆಂದು ಗಮನಿಸಬೇಕಾಗಿಲ್ಲ ಎಂದು ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಉಪದೇಶಿಸಿದ್ದಾರೆ. ಈ ಸಲಹೆ ಇಸ್ರಾಯೇಲ್ ದೇಶದ ಅಧ್ಯಕ್ಷರದ್ದು ಎಂಬುದನ್ನು ಯೋಚಿಸದೆ ಈ ಸಲಹೆಗೆ ಮುಸ್ಲಿಮ್ ದೇಶಗಳು ತೀವ್ರವಾಗಿ ಲಕ್ಷ್ಯನೀಡಬೇಕೆಂದು ಅಪೇಕ್ಷಿಸುತ್ತೇನೆ.

ದುರದೃಷ್ಟಕರವಾಗಿ ಸಿರಿಯಾದ ಪ್ರಶ್ನೆ ಮಾತ್ರ ಪರಿಹಾರಗೊಳ್ಳಬೇಕಾದ ಏಕ ಮಾತ್ರ ಪ್ರಶ್ನೆ ಅಲ್ಲ. ಶಾಂತಿ ಸ್ಥಾಪನೆಯ ಮಾರ್ಗದಲ್ಲಿ ಅಡ್ಡಿಯಾಗಿರುವ ಮುಖ್ಯ ತಡೆ ಅರಬ್ ದೇಶಗಳೊಳಗೆ ಯಾವುದೇ ನ್ಯಾಯ ದೊರಕದುದಾಗಿದೆ. ಅರಬ್ ದೇಶಗಳು ತಮ್ಮ ದೇಶದ ಸ್ವಂತ ಪ್ರಜೆಗಳಿಗೆ ನ್ಯಾಯ ನೀಡದಿರುವಾಗ ಅವರು ಅನ್ಯ ದೇಶಗಳ ಜನರಿಗೆ ನ್ಯಾಯ ಒದಗಿಸಿ ಕೊಡಲು ಹೇಗೆ ತಾನೇ ಸಾಧ್ಯ? ಇದರಿಂದ ತಿಳಿಯುವುದೇನೆಂದರೆ, ಲೋಕವು ಭಿನ್ನತೆಗಳನ್ನು ಎದುರಿಸುತ್ತಿದೆ ಮತ್ತು ವಿನಾಶದ ಅಂಚಿಗೆ ತಲುಪಿದೆ. ಪರಿಸ್ಥಿತಿ ಕೆಟ್ಟುಹೋದರೆ ಯಾವುದೇ ಪಕ್ಷವು ವಿನಾಶದಿಂದ ಸಂರಕ್ಷಿಸಲ್ಪಡಲಾರದು. ಪಶ್ಚಿಮದ ಬೆಂಬಲ ಹೊಂದಿರುವ ಪೂರ್ವದ ದೇಶಗಳು ಮತ್ತು ಪಶ್ಚಿಮದ ಸರಕಾರಗಳು ಲೋಕದಲ್ಲಿ ವೃದ್ಧಿಗೊಳ್ಳುತ್ತಿರುವ ವಿನಾಶಕಾರಿ ಪರಿಸ್ಥಿತಿಗಳ ಪರಿಣಾಮಗಳನ್ನು ಅನುಭವಿಸುವುವು. ಕೊನೆಯ ಪರಿಣಾಮ ಭೀಕರ ಮತ್ತು ವಿನಾಶಕಾರಿ ಯುದ್ಧವಾಗಿರುವುದು. ಅಂತಹ ಯುದ್ಧದಲ್ಲಿ ಸಾಂಪ್ರದಾಯಿಕ ಆಯಧಗಳಿಗೆ ಬದಲಾಗಿ ಅಣು ಆಯುಧಗಳು ಬಳಸಲ್ಪಡುವುವು ಎಂದು ನಾನು ಇನ್ನೊಮ್ಮೆ ಹೇಳುತ್ತೇನೆ.

ಇಂತಹ ಸನ್ನಿವೇಶದಲ್ಲಿಯೂ ಶಾಂತಿ ಸ್ಥಾಪಿತವಾಗುವ ಖಾತರಿ ನೀಡಬಲ್ಲ ಒಂದು ವಿಷಯ ನ್ಯಾಯ ಪಾಲನೆಯಾಗಿದೆ. ಇದು ಹಝ್ರತ್ ಪೈಗಂಬರರು(ಸ) ನೀಡಿದ "ನೀವು ನಿಮಗೆ ಇಷ್ಟಪಡುವುದನ್ನು ಅನ್ಯರಿಗೂ ಇಷ್ಟಪಡಿರಿ" ಎಂಬ ಉಪದೇಶದ ಸತ್ವವನ್ನು ಒಳಗೊಂಡಿರಬೇಕು. ಇಂತಹ ನ್ಯಾಯ ಪಾಲನೆ ಅನುಷ್ಠಾನಕ್ಕೆ ಬರುವುದಾದರೆ, ಪ್ರತಿಯೊಂದು ದೇಶ ಮತ್ತು ಪ್ರತಿಯೊಂದು ಶಕ್ತಿಶಾಲಿ ರಾಷ್ಟ್ರ ತಾನು ಬಯಸುವುದನ್ನೇ ಅನ್ಯರಿಗೂ ಬಯಸುವುದಕ್ಕೆ ಸನ್ನದ್ಧವಾದರೆ ಲೋಕದಲ್ಲಿ ಶಾಂತಿಯು ಸ್ಥಾಪಿತವಾಗುವುದು. ಇದಕ್ಕೆ ಅವಶ್ಯಕವಾದುದು, ಎಲ್ಲಾ ಪಕ್ಷಗಳ ಜನರು ಸತ್ಯಸಂಧವಾದ ಸಾಕ್ಷ್ಯನೀಡಬೇಕು ಮತ್ತು ಕೆಲವರಿಗೆ ಮಾತ್ರ ವೀಟೋ ಅಧಿಕಾರ ಇರಬಾರದು ಎನ್ನುವುದಾಗಿದೆ. ನೈಜ ಪ್ರಜಾಪ್ರಭುತ್ವ ಮತ್ತು ನ್ಯಾಯ ಪಾಲನೆ ಜಾರಿಗೊಳ್ಳಬೇಕು. ಈ ಕ್ರಮಗಳನ್ನು ಕೈಗೊಂಡರೆ ದೇಶಗಳ ಮಧ್ಯೆ ಶಾಂತಿ ಸ್ಥಾಪಿತವಾಗುವುದು ಮತ್ತು ಭೀಕರವಾದಿ ಸಂಘಟನೆಗಳು ಎಲ್ಲಾ ಬೆಂಬಲಗಳನ್ನು ಕಳೆದುಕೊಂಡು ನಿಶ್ಶೇಷವಾಗುವುವು.

ಇತ್ತೀಚೆಗಿನವರೆಗೆ ಮುಖ್ಯ ಭೀಕರವಾದಿ ಸಂಘಟನೆಗಳು ಅಫ್‌ಘಾನಿಸ್ಥಾನದಲ್ಲಿ ಮತ್ತು ಪಾಕಿಸ್ಥಾನದಲ್ಲಿ ಮಾತ್ರ ಕಾರ್ಯನಿರತವಾಗಿದ್ದುವು. ಆದರೆ ಕಳೆದ ಕೆಲವು ವರ್ಷಗಳಲ್ಲಿ ಆಫ್ರಿಕನ್ ದೇಶಗಳಲ್ಲೂ ಬೇರೆ ಕೆಲವೆಡೆಗಳಲ್ಲೂ ಅವರು ತಲೆಯೆತ್ತುತ್ತಿರುವುದು ಕಾಣಿಸುತ್ತದೆ. ಹಾಗಿದ್ದರೂ ನ್ಯಾಯ ಪಾಲನೆ ಮೂಲಕ ವಾಸ್ತವಿಕ ಶಾಂತಿ ದೇಶಗಳಲ್ಲಿ ಸ್ಥಾಪಿತವಾದರೆ ಜನರು ಈ ಭೀಕರ ಸಂಘಟನೆಗಳ ವಿರುದ್ಧ ಎದ್ದೇಳುವರು ಮತ್ತು ಆ ಸಂಘಟನೆಗಳು ಸತ್ತು ಹೋಗುವುವು.

ತಥಾಕಥಿತ ಮುಸ್ಲಿಮ್ ಭೀಕರವಾದಿ ಗುಂಪುಗಳು ಧರ್ಮದ ಹೆಸರಿನಲ್ಲಿ ತಮ್ಮ ದ್ವೇಷಭರಿತ ಆಕ್ರಮಣಗಳನ್ನು ನ್ಯಾಯೀಕರಿಸಿ ಇಸ್ಲಾಮ್ ಧರ್ಮವನ್ನು ಅಪಕೀರ್ತಿಗೆ ಗುರಿಪಡಿಸುತ್ತಿರುವುದು ದಾರುಣ ಅಪಹಾಸ್ಯವಾಗಿದೆ, ವಾಸ್ತವಿಕವಾಗಿ ಭೀಕರವಾದಿಗಳು ಪ್ರತಿಪಾದಿಸುವ ಇಸ್ಲಾಮ್‌ಗೆ ನೈಜ ಇಸ್ಲಾಮಿನೊಂದಿಗೆ ಯಾವ ಸಂಬಂಧವೂ ಇಲ್ಲ, ನೈಜ ಇಸ್ಲಾಮ್ ಧರ್ಮ ಶಾಂತಿ ಪ್ರತಿಪಾದಿಸುವ ಧರ್ಮವಾಗಿದೆ. ಅದು ತನ್ನ ಸೌಂದರ್ಯ ಮತ್ತು ಪರಿಶುದ್ಧತೆಯ ಮೂಲಕ ಲೋಕವನ್ನು ಬೆಳಗಿಸಿದೆ.

ನಾನು ಇದರ ಮೊದಲು ಹೇಳಿದ ಹಾಗೆ ಲೋಕವು ವಿನಾಶದ ಅಂಚಿಗೆ ತಲುಪಲು ಅನೇಕ ಕಾರಣಗಳಿವೆ. ಅವುಗಳಲ್ಲಿ ಒಂದು ಕಾರಣ ಭೀಕರವಾದದ ಉದ್ಭವವಾಗಿದೆ. ಇಂದಿನ ನಾಗರಿಕತೆಗೆ ಅತ್ಯಂತ ಬೆದರಿಕೆ ಒಡ್ಡುತ್ತಿರುವುದು ಇನ್ನೊಂದು ಜಾಗತಿಕ ಮಹಾಯುದ್ಧವಾಗಿದೆ. ಈ ಬೆದರಿಕೆ ವಾಸ್ತವಿಕವಾದುದಾಗಿದೆ. ಇದನ್ನು ತಡೆಗಟ್ಟಲು ನಾವು ನ್ಯಾಯ ಬದ್ಧವಾದ ರೀತಿಯಲ್ಲಿ ಚಿಂತಿಸಿ ವರ್ತಿಸಿ ಲೋಕವನ್ನು ವಿನಾಶದಿಂದ ರಕ್ಷಿಸಬೇಕಾಗಿದೆ.

ಲೋಕದಲ್ಲಿ ಅಶಾಂತಿ ವ್ಯಾಪಿಸಿರುವುದಕ್ಕೆ ಇನ್ನೊಂದು ಬಹಳ ದೊಡ್ಡ ಕಾರಣ ಪ್ರಚಲಿತ ಆರ್ಥಿಕ ಬಿಕ್ಕಟ್ಟಾಗಿದೆ. ಕಳೆದ ಕೆಲವು ವರ್ಷಗಳಲ್ಲಿ ಇದು ಅತ್ಯಂತ ತೀವ್ರವಾಗಿದೆ. ಇತ್ತೀಚೆಗೆ ಲಕ್ಸೆಂಬರ್ಗ್ ಪ್ರಧಾನ ಮಂತ್ರಿ ಹೀಗೆ ಹೇಳಿದರು: "ಪ್ರಥಮ ಜಾಗತಿಕ ಮಹಾಯುದ್ಧ ಪ್ರಾರಂಭವಾಗುವ ಮೊದಲು ಇದ್ದ ಆರ್ಥಿಕ ದುಸ್ಥಿತಿ ಈಗ ಇದೆ. ಆ ಕಾಲದ ದುರ್ಘಟ ಆರ್ಥಿಕ ಸ್ಥಿತಿಗಳು ಯುದ್ಧಕ್ಕೆ ಮುಖ್ಯ ಹೇತುವಾಯಿತು." ಅನ್ಯರು ಅವರೊಂದಿಗೆ ಸಹಮತ ಹೊಂದಿದರೂ ಇಲ್ಲದಿದ್ದರೂ ನಾನು ಅವರ ನಿಷ್ಕರ್ಷೆಯನ್ನು ಸರಿ ಎಂದು ಗಣಿಸುತ್ತೇನೆ. ನನ್ನ ಅಭಿಪ್ರಾಯ ಪ್ರಕಾರ ಲೋಕದ ಈಗಿನ ಸ್ಥಿತಿ ದ್ವಿತೀಯ ಮಹಾಯುದ್ಧ ಪ್ರಾರಂಭವಾಗುವ ಮೊದಲು ಇದ್ದ ಲೋಕದ ಸ್ಥಿತಿಗೆ ಸಮವಾಗಿದೆ. ಲಕ್ಸೆಂಬರ್ಗ್ ಪ್ರಧಾನಮಂತ್ರಿ ನೀಡಿದ ಎಚ್ಚರಿಕೆಯ ಪದಗಳನ್ನು ನಾವು ಲಕ್ಷ್ಯವಿಟ್ಟು ಗಮನಿಸಬೇಕು. ಅವರು ಹೀಗೆಂದರು:

"ಯುರೋಪಿನಲ್ಲಿ ಯುದ್ಧ ಮತ್ತು ಶಾಂತಿ ಎಂಬ ಸ್ಥಿರ ಪ್ರಕ್ರಿಯೆ ಶಾಶ್ವತವಾಗಿ ಕೊನೆಗೊಂಡಿದೆ ಎಂದು ನಂಬುವವರು ಬಹಳ ದೊಡ್ಡ ತಪ್ಪು ಮಾಡುತ್ತಿದ್ದಾರೆ."

ಆದುದರಿಂದ ನಾವು ಇಲ್ಲಿ ಕುಳಿತುಕೊಂಡು ಏಶಿಯಾದಲ್ಲಿ ನಡೆಯುವ ಯುದ್ಧದಲ್ಲಿ ನಾವು ಸಹ ಭಾಗಿಗಳಾಗುವ ಸಂಭಾವ್ಯತೆಗಳ ಬಗ್ಗೆ ಮಾತ್ರ ಚಿಂತಿಸದೆ ನಾವು ನಮ್ಮ ಹೊಸ್ತಿಲ ಬಳಿಗೆ ಸಮೀಪಿಸುತ್ತಿರುವ ಸಮಸ್ಯೆಗಳ ಬಗ್ಗೆ ಅತ್ಯಂತ ಕಾಳಜಿಪೂರ್ವಕವಾಗಿ ಗಮನಿಸಬೇಕಾದ ಅವಶ್ಯಕತೆ ಇದೆ. ನಾವು ಯುರೋಪಿನ ಸ್ವಂತ ಆರ್ಥಿಕ ಬಿಕ್ಕಟ್ಟು ಮತ್ತು ಅದರ ದೀರ್ಘ ಕಾಲೀನ ಪರಿಣಾಮಗಳನ್ನು ನೋಡುವಾಗ ಅದರಿಂದ ಯುರೋಪಿನ ಜನರಲ್ಲಿ ವ್ಯಾಕುಲತೆ ವೇಗವಾಗಿ ವರ್ಧಿಸುತ್ತಿರುವುದಾಗಿ ಕಾಣಿಸುತ್ತದೆ. ಇದನ್ನು ಸರಿಯಾದ ರೀತಿಯಲ್ಲಿ ನಿಭಾಯಿಸದಿದ್ದರೆ ಜನರ ನಿರಾಶೆ ಮತ್ತು ದುಗುಡದ ಪರಿಣಾಮ ವಿನಾಶಕರವಾಗುವುದು. ಎಲ್ಲಾ ಶಕ್ತಿಗಳು ನ್ಯಾಯ ಪಾಲನೆಯ ಆವಶ್ಯಕತೆಗಳನ್ನು ಈಡೇರಿಸಿ ಐಕ್ಯತೆಯನ್ನು ಹೊಂದುವುದು ಅಗತ್ಯವಾಗಿದೆ. ಎಲ್ಲಾ ಪಕ್ಷಗಳ ಜನರು ಪರಸ್ಪರ ಮಾತುಕತೆಗಳನ್ನು ನಡೆಸಬೇಕು ಮತ್ತು ಪರಸ್ಪರ ಸಂಪರ್ಕವನ್ನು ಸ್ಥಾಪಿಸಬೇಕು. ಲೋಕದ

(8ನೇ ಪುಟಕ್ಕೆ)

# ಮಹಿಳೆ ಇಸ್ಲಾಮ್‌ನಲ್ಲಿ

ಸರ್ ಮುಹಮ್ಮದ್ ಝುಫ್ರುಲ್ಲಾ ಖಾನ್

ಸರ್ ಮುಹಮ್ಮದ್ ಝುಫ್ರುಲ್ಲಾ ಖಾನ್‌ರವರು ಅಹ್ಮದಿಯಾ ಜಮಾಅತಿನ ಸ್ಥಾಪಕರ ಶಿಷ್ಯರಾಗಿದ್ದರು. ಅವರು ಬ್ರಿಟಿಷ್ ಇಂಡಿಯಾದಲ್ಲಿ ವೈಸ್‌ರೋಯಿಯವರ ಎಕ್ಸಿಕ್ಯೂಟಿವ್ ಕೌನ್ಸಿಲ್ ಸದಸ್ಯರಾಗಿದ್ದರು. ಅವರು ಫೆಡರಲ್ ಕೋರ್ಟಿನ ನ್ಯಾಯಾಧೀಶರೂ ಆಗಿದ್ದರು. ಸಂಯುಕ್ತ ರಾಷ್ಟ್ರ ಸಂಘದ ಜನರಲ್ ಅಸೆಂಬ್ಲಿಯ ಅಧ್ಯಕ್ಷರಾಗಿ ಚುನಾಯಿತರಾದ ಅವರು ತನ್ನ ಅಧ್ಯಕ್ಷೀಯ ಭಾಷಣದಲ್ಲಿ ಪವಿತ್ರ ಖುರ್‌ಆನಿನ ವಚನಗಳನ್ನು ಸಂಯುಕ್ತ ರಾಷ್ಟ್ರ ಸಂಘದ ಚರಿತ್ರೆಯಲ್ಲಿಯೇ ಪ್ರಥಮ ಬಾರಿ ಪಠಿಸಿದರು. ಅವರು ದಿ ಹೇಗ್‌ನಲ್ಲಿರುವ ಜಾಗತಿಕ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರೂ ಅಧ್ಯಕ್ಷರೂ ಆಗಿದ್ದರು. ಪವಿತ್ರ ಖುರ್‌ಆನನ್ನು ಇಂಗ್ಲಿಷ್‌ಗೆ ಭಾಷಾಂತರಿಸಿದ ಅವರು ಅನೇಕ ಪುಸ್ತಕಗಳನ್ನೂ ಲೇಖನಗಳನ್ನೂ ಪ್ರಕಟಿಸಿದ್ದಾರೆ.



ಪುರುಷ ಮತ್ತು ಮಹಿಳೆಯ ಸಂಬಂಧವನ್ನು ಸುವ್ಯವಸ್ಥಿಗೊಳಿಸಲು ಇಸ್ಲಾಮ್ ಧರ್ಮವು ಮಹಿಳೆಗೆ ಗೌರವದ ಸ್ಥಾನವನ್ನು ದೇವ ನಿರ್ದೇಶ ಪ್ರಕಾರ ನೀಡಿರುತ್ತದೆ. ಶಾಂತಿ, ಸುಖ, ಸಂತೋಷ, ಸಂತಾನಾಭಿವೃದ್ಧಿ ಮತ್ತು ಪ್ರಗತಿಗೆ ಇಂತಹ ಹಿತಕರವಾದ ವ್ಯವಸ್ಥೆಯು ಅತ್ಯಾವಶ್ಯಕವಾಗಿದೆ.

ಅಲ್ಲಾಹನು ತನ್ನ ಪರಿಪೂರ್ಣ ಬುದ್ಧಿಶಕ್ತಿಯ ಪ್ರಕಾರ ಎಲ್ಲಾ ವರ್ಗಗಳನ್ನು ಜೋಡಿಗಳನ್ನಾಗಿ ಸೃಷ್ಟಿಸಿದ್ದಾನೆಂದೂ ಪುರುಷ ಮತ್ತು ಮಹಿಳೆ ಇಬ್ಬರನ್ನೂ ಒಂದೇ ವರ್ಗದಿಂದ ಸೃಷ್ಟಿಸಲಾಗಿದೆಯೆಂದೂ ಪವಿತ್ರ ಖುರ್‌ಆನ್ ಒತ್ತಿ ಹೇಳುತ್ತದೆ. ನೋಡಿರಿ:

*"ಅವನು ನಿಮ್ಮನ್ನು ಏಕ ಜೀವಾಳದಿಂದ ಸೃಷ್ಟಿಸಿರುವನು. ಅನಂತರ ಅದರಿಂದ ಅದರ ಜೋಡಿಯನ್ನುಂಟುಮಾಡಿದನು." (ಪವಿತ್ರ ಖುರ್‌ಆನ್ 39:7)*

*"ನಿಮ್ಮ ವರ್ಗದಿಂದಲೇ ಅವನು ನಿಮಗೆ ಜೋಡಿಗಳನ್ನು ಸೃಷ್ಟಿಸಿದ್ದಾನೆ." (42:12)*

*"ಓ ಮನುಷ್ಯರೇ, ನೀವು ನಿಮ್ಮ ಪ್ರಭುವಿನ ಭಯವಿರಿಸಿಕೊಳ್ಳಿರಿ. ಅವನು ನಿಮ್ಮನ್ನು ಒಂದು ಜೀವಾಳದಿಂದ ಸೃಷ್ಟಿಸಿ, ಅದರಿಂದ (ಅದರ ವರ್ಗದಿಂದಲೇ) ಅದರ ಜೋಡಿಯನ್ನೂ ಸೃಷ್ಟಿಸಿ ಅವೆರಡರಿಂದ ಅನೇಕ ಪುರುಷರನ್ನೂ ಸ್ತ್ರೀಯರನ್ನೂ (ಲೋಕದಲ್ಲಿ) ವ್ಯಾಪಿಸುವಂತೆ ಮಾಡಿರುವನು." (4:2)*

*"ಅವನು (ಅಲ್ಲಾಹನು) ನಿಮ್ಮನ್ನು ಒಂದೇ ಜೀವಾಳದಿಂದ ಸೃಷ್ಟಿಸಿರುವನು. ಅದರಿಂದಲೇ ಅವನು ಅದರ ಜೋಡಿಯನ್ನೂ ಉಂಟುಮಾಡಿದನು –ಅವನು (ಪುರುಷನು) ಅವಳೊಂದಿಗೆ ತೃಪ್ತಿ ಪಡೆಯಲಿಕ್ಕಾಗಿ." (7:190)*

*"ನೀವು ಮನಶ್ಶಾಂತಿ ಪಡೆಯಲಿಕ್ಕೋಸ್ಕರ ನಿಮ್ಮ ವರ್ಗದಿಂದಲೇ ಅವನು ನಿಮಗಾಗಿ ಬಾಳ ಸಂಗಾತಿಗಳನ್ನು ಸೃಷ್ಟಿಸಿದ್ದಾನೆ. ಇದು ಅವನ ದೃಷ್ಟಾಂತಗಳಲ್ಲೊಂದು. ನಿಮ್ಮ ಮಧ್ಯೆ ಅವನು ಪ್ರೀತಿಯನ್ನೂ ಕರುಣೆಯನ್ನೂ ಉಂಟುಮಾಡಿದನು. ಚಿಂತನಶೀಲರಿಗೆ ಅದರಲ್ಲಿ ನಿಜವಾಗಿಯೂ ದೃಷ್ಟಾಂತಗಳಿವೆ." (30:22)*

ಅಲ್ಲಾಹನು ಮನುಷ್ಯರಿಗೆ ನೀಡಿರುವ ಶಕ್ತಿ ಸಾಮರ್ಥ್ಯಗಳು ದೈವಿಕ ಅನುಗ್ರಹಗಳೆಂದೂ ಅವುಗಳನ್ನು ನೀವು ಕೃತಜ್ಞತೆಯಿದ ಬಳಸಬೇಕೆಂದೂ ಇಸ್ಲಾಮ್ ಉಪದೇಶಿಸುತ್ತಿದೆ. ಈ ಕೆಳಗಿನ ಪವಿತ್ರ ಖುರ್‌ಆನ್ ವಚನಗಳನ್ನು ನೋಡಿರಿ:

*"ನಿಮಗೆ ಏನೂ ತಿಳಿಯಲಸಾಧ್ಯವಾದ ಸ್ಥಿತಿಯಲ್ಲಿ ಅಲ್ಲಾಹನು ನಿಮ್ಮನ್ನು ನಿಮ್ಮ ತಾಯಂದಿರ ಉದರಗಳಿಂದ ಹೊರಗೆ ತಂದನು. ಅವನು ನಿಮಗೆ ಕಿವಿಗಳನ್ನೂ ಕಣ್ಣುಗಳನ್ನೂ ಹೃದಯಗಳನ್ನೂ ದಯಪಾಲಿಸಿದನು. ನೀವು ಕೃತಜ್ಞತೆ ತೋರಿಸುವವರಾಗಲಿಕ್ಕೋಸ್ಕರ." (16:79)*

ಅಂದರೆ, ಅಲ್ಲಾಹನು ದಯಪಾಲಿಸಿದ ಶಕ್ತಿ ಸಾಮರ್ಥ್ಯಗಳನ್ನು ಸರಿಯಾದ ಸಮಯಗಳಲ್ಲೂ ಸರಿಯಾದ ಸಂದರ್ಭಗಳಲ್ಲೂ ಉಪಯೋಗಿಸಬೇಕು. ಹಾಗೆ ಮಾಡಿದರೆ ಅಲ್ಲಾಹನ ಅನುಗ್ರಹಗಳು ಹೆಚ್ಚಾಗುತ್ತಾ ಹೋಗುವುವು. ಅವುಗಳನ್ನು ನಿರ್ಲಕ್ಷ್ಯಿಸಿದರೆ ಅಥವಾ ದುರುಪಯೋಗಪಡಿಸಿದರೆ ದೈವಿಕ ಕೋಪಕ್ಕೆ ಪಾತ್ರರಾಗಬೇಕಾದೀತು. ಪವಿತ್ರ ಖುರ್‌ಆನಿನ ಈ ಕೆಳಗಿನ ವಚನ ಇದನ್ನು ಸೂಚಿಸುತ್ತದೆ:

*"ನೀವು ಕೃತಜ್ಞತೆ ಉಳ್ಳವರಾದರೆ ನಾನು ಖಂಡಿತವಾಗಿಯೂ ನಿಮಗೆ ಅನುಗ್ರಹಗಳನ್ನು ವೃದ್ಧಿಗೊಳಿಸುವೆನು. ನೀವು ಕೃತಘ್ನರಾದರೆ ನನ್ನ ಶಿಕ್ಷೆ ಕಠೋರವಾಗಿರುವುದು." (14:8)*

ಕೆಲವು ಧರ್ಮಗಳ ಆಚಾರ ವಿಧಿಗಳು ಅವಿವಾಹಿತ ಜೀವಿತವು ದಾಂಪತ್ಯ ಜೀವಿತಕ್ಕಿಂತ ಆಧ್ಯಾತ್ಮಿಕವಾಗಿ ಶ್ರೇಷ್ಠವೆಂದು ತಪ್ಪಾಗಿ ಪ್ರತಿಪಾದಿಸಿ ಅವಿವಾಹಿತ ಜೀವಿತವನ್ನು ಆದರ ಭಾವದಿಂದ ಕಾಣುತ್ತವೆ. ಆದರೆ ಇಸ್ಲಾಮ್ ಧರ್ಮವು ಬ್ರಹ್ಮಚರ್ಯವನ್ನು ಒಪ್ಪದೆ ಅದನ್ನು ನಿರಾಕರಿಸುತ್ತದೆ. ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

*"ಅವರೇ ಹೊಸದಾಗಿ ತಂದ ಸನ್ಯಾಸವನ್ನು ನಾವು ಅವರಿಗೆ ಆಜ್ಞಾಪಿಸಿರಲಿಲ್ಲ. ಬದಲಾಗಿ, ಅಲ್ಲಾಹನ ಸಂತುಷ್ಟಿಯನ್ನು ನಾವು ಅವರಿಗೆ ಆದೇಶಿಸಿದ್ದೆವು. ಆದರೆ ಅವರು ಅದನ್ನು (ಸನ್ಯಾಸವನ್ನು) ಕ್ರಮಬದ್ಧವಾಗಿ ಅನುಷ್ಠಿಸಲಿಲ್ಲ." (57:28)*

ಮಹಿಳೆಯು ಕೀಳು ಸೃಷ್ಟಿಯೆಂದೂ ಆಕೆಯೊಂದಿಗೆ ಸಹವಾಸವು

ಹೀನಾಯವೂ ನೀತಿರಾಹಿತ್ಯವೂ ಆಗಿದೆ ಎಂಬ ಕಲ್ಪನೆಯಿಂದ ಸನ್ಯಾಸವು ಪ್ರಾರಂಭಗೊಂಡಿತು. ಚರ್ಚ್‌ಗಳ ಪಾದರಿಗಳು ಪುರುಷನು ಪಾಪಿಯಾಗಲು ಮಹಿಳೆಯು ಜವಾಬ್ದಾರಳಾಗಿದ್ದಾಳೆ ಎಂದು ಆರೋಪಿಸಿ ಅವಳು ಆತ್ಮ ಇಲ್ಲದವಳೂ ಶೈತಾನನ ಆಯುಧವೆಂದೂ ಮಹಿಳೆಯನ್ನು ವರ್ಣಿಸಿದರು.

ಇಸ್ಲಾಮ್ ಧರ್ಮವು ಈ ಮನೋಭಾವವನ್ನು ಖಂಡಿಸಿ ಮಹಿಳೆಯನ್ನು ಆಧ್ಯಾತ್ಮಿಕವಾಗಿ ಪುರುಷನಿಗೆ ಸಮಾನವಾದ ಸ್ಥಾನಕ್ಕೆ ಏರಿಸಿತು. ಮಹಿಳೆ ಮತ್ತು ಪುರುಷ ಪರಸ್ಪರ ಪೂರಕವಾಗಿದ್ದಾರೆಂದೂ ಪರಸ್ಪರ ಸುಖ ಸಂತೋಷಗಳಿಗೆ ಸಹಾಯಕರಾಗಿದ್ದಾರೆಂದೂ ಪ್ರತಿಪಾದಿಸಿ ಹೀಗೆ ಹೇಳಿತು:

*"ಅವರು (ಪತ್ನಿಯರು) ನಿಮಗೆ ಒಂದು ಉಡುಗೆ; ನೀವು ಸಹ ಅವರಿಗೆ ಒಂದು ಉಡುಗೆಯಾಗಿರುವಿರಿ."*

*(ಪವಿತ್ರ ಖುರ್‌ಆನ್ 2:188)*

## ಆಧ್ಯಾತಿಕ ಸಮಾನತೆ

ಮಹಿಳೆಯು ಆಧ್ಯಾತ್ಮಿಕವಾಗಿ ಪುರುಷನೊಂದಿಗೆ ಸಮಾನ ಸ್ಥಾನ ಪಡೆದಿರುವುದಾಗಿ ಪವಿತ್ರ ಖುರ್‌ಆನ್ ಪದೇ ಪದೇ ಒತ್ತಿ ಹೇಳಿದೆ. ಉದಾಹರಣೆಗೆ, ಪವಿತ್ರ ಖುರ್‌ಆನಿನ ಈ ಕೆಳಗಿನ ವಚನಗಳನ್ನು ನೋಡಿರಿ :

*"ನಿಶ್ಚಯವಾಗಿಯೂ (ಅಲ್ಲಾಹನಿಗೆ) ಶರಣಾಗುವ ಪುರುಷರೂ ಶರಣಾಗುವ ಸ್ತ್ರೀಯರೂ ಸತ್ಯ ವಿಶ್ವಾಸಿಗಳೂ ಸತ್ಯ ವಿಶ್ವಾಸಿನಿಯರೂ (ಅಲ್ಲಾಹನಿಗೆ) ವಿಧೇಯ ರಾಗುವ ಪುರುಷರೂ ವಿಧೇಯರಾಗುವ ಸ್ತ್ರೀಯರೂ ಸತ್ಯವಂತರೂ ಸತ್ಯವತಿಯರೂ ತಾಳ್ಮೆವಹಿಸುವ ಪುರುಷರೂ ತಾಳ್ಮೆವಹಿಸುವ ಸ್ತ್ರೀಯರೂ ವಿನಯವಂತರಾದ ಪುರುಷರೂ ವಿನಯವಂತರಾದ ಸ್ತ್ರೀಯರೂ ದಾನಧರ್ಮ ಮಾಡುವ ಪುರುಷರೂ ದಾನಧರ್ಮ ಮಾಡುವ ಸ್ತ್ರೀಯರೂ ವ್ರತಾನುಷ್ಠಾನ ಮಾಡುವ ಪುರುಷರೂ ವ್ರತಾನುಷ್ಠಾನ ಮಾಡುವ ಸ್ತ್ರೀಯರೂ ತಮ್ಮ ಚಾರಿತ್ರ್ಯವನ್ನು ರಕ್ಷಿಸುವ ಪುರುಷರೂ ಚಾರಿತ್ರ್ಯವನ್ನು ರಕ್ಷಿಸುವ ಸ್ತ್ರೀಯರೂ ಅಲ್ಲಾಹನನ್ನು ಅಧಿಕವಾಗಿ ಸ್ಮರಿಸುವ ಪುರುಷರೂ ಅಲ್ಲಾಹನನ್ನು ಅಧಿಕವಾಗಿ ಸ್ಮರಿಸುವ ಸ್ತ್ರೀಯರೂ – ಇವರೆಲ್ಲರಿಗೂ ಅಲ್ಲಾಹನು ಕ್ಷಮಾದಾನವನ್ನೂ ಮಹತ್ವದ ಪ್ರತಿಫಲವನ್ನೂ ಸಿದ್ಧಪಡಿಸಿಟ್ಟಿದ್ದಾನೆ." (33:36)*

*"ಸತ್ಯವಿಶ್ವಾಸಿಗಳ ಮತ್ತು ಸತ್ಯ ವಿಶ್ವಾಸಿನಿಯರ ಕಡೆಗೆ ಅಲ್ಲಾಹನು ಕರುಣೆಯಿಂದ ತಿರುಗುವನು. ಅಲ್ಲಾಹನು ಅತ್ಯಂತ ಕ್ಷಮಾಶೀಲನೂ ಕಾರುಣ್ಯವಂತನೂ ಆಗಿದ್ದಾನೆ." (33:74)*

ಪುರುಷರಿಗೂ ಮಹಿಳೆಯರಿಗೂ ಸಮಾನವಾದ ಸಂರಕ್ಷಣೆ ನೀಡಲಾಗಿದೆ. ಪವಿತ್ರ ಖುರ್‌ಆನಿನ ಈ ಕೆಳಗಿನ ವಚನಗಳನ್ನು ನೋಡಿರಿ:

*"ಸತ್ಯ ವಿಶ್ವಾಸಿಗಳನ್ನೂ ಸತ್ಯ ವಿಶ್ವಾಸಿನಿಯರನ್ನೂ ಅವರು ಯಾವುದೇ ತಪ್ಪನ್ನು ಮಾಡದಿರುವಾಗ (ಅವರನ್ನು) ತೊಂದರೆಗೊಳಪಡಿಸುವವರು, ದಿಟವಾಗಿಯೂ ಅಂಥವರು ಸುಳ್ಳನ್ನೂ ಸ್ಪಷ್ಟವಾದ ಪಾಪವನ್ನೂ ಹೊತ್ತುಕೊಂಡಿರುವರು."*

*(33:59)*

*"ಯಾರು ಸತ್ಯ ವಿಶ್ವಾಸಿಗಳನ್ನೂ ಸತ್ಯ ವಿಶ್ವಾಸಿನಿಯರನ್ನೂ ಪೀಡಿಸುತ್ತಾರೋ ಹಾಗೂ ಆ ಬಗ್ಗೆ ಪಶ್ಚಾತ್ತಾಪಪಡುವುದಿಲ್ಲವೋ ಅವರಿಗೆ ಖಂಡಿತವಾಗಿಯೂ ನರಕ ಶಿಕ್ಷೆ ಇದೆ. ಉರಿಯುವ ಶಿಕ್ಷೆಯೂ ಇದೆ." (85:11)*

ಹುದೈಬಿಯಾ ಸಂಧಿಯ ಸಂದರ್ಭದಲ್ಲಿ ಹೀಗೆ ಹೇಳಲಾಯಿತು:

*"ನಿಮಗೆ ತಿಳಿಯದ ವಿಶ್ವಾಸಿಗಳಾದ ಕೆಲವು ಪುರುಷರೂ ಸ್ತ್ರೀಯರೂ (ಮಕ್ಕದಲ್ಲಿ) ಇಲ್ಲದಿರುತ್ತಿದ್ದರೆ– ಅಂದರೆ ನಿಮಗೆ ತಿಳಿಯದೆ ಅವರನ್ನು ನೀವು ತುಳಿದುಬಿಟ್ಟು ಅವರ ಕಾರಣದಿಂದ ನಿಮಗೆ ದೋಷವುಂಟಾಗುವ ಅಪಾಯ ಇಲ್ಲದಿರುತ್ತಿದ್ದರೆ (ಅವನು ನಿಮಗೆ ಯುದ್ಧ ಮಾಡುವ ಅನುಮತಿ ನೀಡುತ್ತಿದ್ದನು. ಆದರೆ ಅವನು ಹಾಗೆ ಮಾಡಲಿಲ್ಲ.) ಇದು ಅಲ್ಲಾಹನು ತಾನಿಚ್ಛಿಸುವವರನ್ನು ತನ್ನ ಕೃಪೆಯೊಳಗೆ ಸೇರಿಸಿಕೊಳ್ಳಲಿಕ್ಕಾಗಿದೆ. ಅವರು (ಆ ವಿಶ್ವಾಸಿಗಳೂ ವಿಶ್ವಾಸಿನಿಯರೂ ಅವಿಶ್ವಾಸಿಗಳಿಂದ ಬೇರ್ಪಟ್ಟಿದ್ದರೆ) ಅವರಲ್ಲಿ ಅವಿಶ್ವಾಸಿಗಳನ್ನು ನಾವು ಯಾತನಾಮಯವಾದ ಶಿಕ್ಷೆಗೆ ಗುರಿಪಡಿಸುತ್ತಿದ್ದೆವು." (ಪವಿತ್ರ ಖುರ್‌ಆನ್ 48:26)*

ಮಹಿಳೆಯರು ಪುರುಷರಿಗಿಂತ ಹೆಚ್ಚು ಸಂವೇದನ ಶೀಲರಾದುದರಿಂದ ಅವರಿಗೆ ವಿಶಿಷ್ಟ ಸಂರಕ್ಷಣೆ ನೀಡಲಾಗಿದೆ. ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

*"ಚಾರಿತ್ರ್ಯವತಿಯರೂ ಮುಗ್ಧೆಯರೂ ಆದ ಸತ್ಯ ವಿಶ್ವಾಸಿನಿಯರ ಮೇಲೆ ಯಾರು ಆರೋಪ ಹೊರಿಸುತ್ತಾರೋ ಅವರು ಇಹಲೋಕದಲ್ಲೂ ಪರಲೋಕದಲ್ಲೂ ಶಾಪಕ್ಕೆ ಗುರಿಯಾಗುವರು. ಅವರಿಗೆ ಕಠೋರ ಶಿಕ್ಷೆ ಇದೆ– ಅವರ ಕೃತ್ಯಗಳ ಬಗ್ಗೆ ಅವರ ನಾಲಗೆಗಳೂ ಅವರ ಕೈಗಳೂ ಅವರ ಕಾಲುಗಳೂ ಅವರ ವಿರುದ್ಧ ಸಾಕ್ಷ್ಯ ನೀಡುವ ದಿನ." (24:24–25)*

ಪರಲೋಕದಲ್ಲಿ ಪುರುಷರಿಗೂ ಮಹಿಳೆಯರಿಗೂ ಅವರು ಮಾಡಿದ ಸತ್ಕರ್ಮಗಳಿಗೆ ಸಮಾನ ಪ್ರತಿಫಲ ಲಭಿಸುವುದು.

*"ಸತ್ಯ ವಿಶ್ವಾಸಿಯಾಗಿರುವ ಪುರುಷನಾಗಲಿ ಸ್ತ್ರೀಯಾಗಲಿ, ಅವರು ಸತ್ಕರ್ಮಗಳನ್ನು ಮಾಡಿದರೆ ಅವರು ಸ್ವರ್ಗದಲ್ಲಿ ಪ್ರವೇಶಿಸುವರು. ಅವರಿಗೆ ತುಸು ಮಾತ್ರವಾದರೂ ಅನ್ಯಾಯ ವಾಗಲಾರದು." (4:125)*

*"ಪುರುಷನಾಗಲಿ ಸ್ತ್ರೀಯಾಗಲಿ ಸತ್ಯ ವಿಶ್ವಾಸಿಯಾಗಿದ್ದುಕೊಂಡು ಸತ್ಕರ್ಮ ಮಾಡಿದರೆ ಖಂಡಿತವಾಗಿಯೂ ನಾವು ಅವರಿಗೆ ಪರಿಶುದ್ಧ ಜೀವನವನ್ನು ದಯಪಾಲಿಸುವೆವು. ಅವರ ಸದ್ವರ್ತನೆಗೆ ತಕ್ಕುದಾದ ಪ್ರತಿಫಲವನ್ನು ಸಹ ನಾವು ನಿಶ್ಚಯವಾಗಿಯೂ ನೀಡುವೆವು."*

*(16:98)*

*"ಯಾರಾದರೂ –ಗಂಡಾಗಲಿ ಹೆಣ್ಣಾಗಲಿ–*

ಸತ್ಯವಿಶ್ವಾಸಿಯಾಗಿದ್ದು ಸತ್ಕರ್ಮ ನಿರತರಾದರೆ ಅವರು ಸ್ವರ್ಗದಲ್ಲಿ ಪ್ರವೇಶಿಸುವರು. ಅಲ್ಲಿ ಅವರಿಗೆ ಅಗಣಿತ ಅನುಗ್ರಹಗಳನ್ನು ನೀಡಲಾಗುವುದು." *(40:41)*

"ಸತ್ಯ ವಿಶ್ವಾಸಿಗಳಾದ ಪುರುಷರು (ಪರಸ್ಪರ) ಮತ್ತು ಸತ್ಯವಿಶ್ವಾಸಿಗಳಾದ ಸ್ತ್ರೀಯರು ಪರಸ್ಪರ ಮಿತ್ರರಾಗಿದ್ದಾರೆ. ಅವರು ಒಳಿತನ್ನು ಉಪದೇಶಿಸುತ್ತಾರೆ; ಕೆಡುಕನ್ನು ತಡೆಯುತ್ತಾರೆ; ನಮಾಝನ್ನು ನಿಷ್ಠೆಯಿಂದ ನಿರ್ವಹಿಸುತ್ತಾರೆ; ಝಕಾತ್ ಕೊಡುತ್ತಾರೆ; ಅಲ್ಲಾಹನನ್ನು ಮತ್ತು ಅವನ ಸಂದೇಶವಾಹಕನನ್ನು ಅನುಸರಿಸುತ್ತಾರೆ. ಅಂತಹ ಜನರ ಮೇಲೆ ಅಲ್ಲಾಹನು ಖಂಡಿತವಾಗಿಯೂ ಕರುಣೆ ತೋರಿಸುತ್ತಾನೆ. ನಿಶ್ಚಯವಾಗಿಯೂ ಅಲ್ಲಾಹನು ಪ್ರತಾಪವಂತನೂ ವಿವೇಕಶಾಲಿಯೂ ಆಗಿದ್ದಾನೆ."

"ಸತ್ಯವಿಶ್ವಾಸಿಗಳಿಗೂ ಸತ್ಯ ವಿಶ್ವಾಸಿನಿಯರಿಗೂ ಕೆಳಭಾಗದಲ್ಲಿ ನದಿಗಳು ಹರಿಯುವ ಸ್ವರ್ಗೀಯ ತೋಟಗಳನ್ನು ಅಲ್ಲಾಹನು ವಾಗ್ದಾನ ಮಾಡಿದ್ದಾನೆ. ಅವರು ಅಲ್ಲಿ ಸದಾ ಕಾಲ ನೆಲೆಸುವರು. ಶಾಶ್ವತವಾದ ವಾಸಕ್ಕಿರುವ ಸ್ವರ್ಗೀಯ ತೋಟಗಳಲ್ಲಿ ಪರಿಶುದ್ಧವಾದ ವಾಸಸ್ಥಳಗಳನ್ನೂ (ಅಲ್ಲಾಹನು ಅವರಿಗೆ ವಾಗ್ದಾನ ಮಾಡಿದ್ದಾನೆ.) ಅಲ್ಲಾಹನ ಸಂತುಷ್ಟಿಯೇ ಎಲ್ಲಕ್ಕಿಂತ ಮಿಗಿಲಾದುದು. ಅದೇ ಮಹಾ ವಿಜಯವಾಗಿದೆ." *(9:71,72)*

"(ಇದು) ಅವನು ವಿಶ್ವಾಸಿಗಳಾದ ಪುರುಷರಿಗೂ ವಿಶ್ವಾಸಿಗಳಾದ ಸ್ತ್ರೀಯರಿಗೂ ಕೆಳಬದಿಯಲ್ಲಿ ನದಿಗಳು ಹರಿಯುವ ಸ್ವರ್ಗೀಯ ತೋಟಗಳಲ್ಲಿ ಪ್ರವೇಶ ನೀಡಲಿಕ್ಕೂ –ಅವರು ಅಲ್ಲೇ ವಾಸಿಸುವರು– ಅವರಿಂದ ಅವರ ಕೆಡುಕುಗಳನ್ನು ನೀಗಿಸಲಿಕ್ಕೂ ಬೇಕಾಗಿ. ಅದು ಅಲ್ಲಾಹನ ದೃಷ್ಟಿಯಲ್ಲಿ ಮಹಾ ವಿಜಯವಾಗಿದೆ." *(48:6)*

"ಅವರ ಪ್ರಭು ಅವರ ಪ್ರಾರ್ಥನೆಗೆ ಉತ್ತರ ನೀಡುವನು: ಖಂಡಿತವಾಗಿಯೂ ನಿಮ್ಮ ಪೈಕಿ ಪುರುಷನಾಗಲಿ ಸ್ತ್ರೀಯಾಗಲಿ ಯಾರ ಕರ್ಮವನ್ನೂ ನಾನು ನಿಷ್ಫಲಗೊಳಿಸಲಾರೆ. ನಿಮ್ಮಲ್ಲಿ ಕೆಲವರಿಗೆ ಕೆಲವರೊಡನೆ (ಪರಸ್ಪರ) ಸಂಬಂಧವಿದೆ." *(3:196)*

(ಅಂದು ಅಲ್ಲಾಹನು ಅವರೊಡನೆ ಹೇಳುವನು:)

"ಓ ನನ್ನ ಭಕ್ತದಾಸರೇ, ಇಂದು ನಿಮಗೆ ಭಯವೇನೂ ಇಲ್ಲ; ನಿಮಗೆ ವ್ಯಥೆಯೂ ಇಲ್ಲ." *(43:69)*

"ನೀವು ಮತ್ತು ನಿಮ್ಮ ಬಾಳ ಸಂಗಾತಿಗಳು ಆಹ್ಲಾದಭರಿತರಾಗಿ ಸ್ವರ್ಗದಲ್ಲಿ ಪ್ರವೇಶಿಸಿರಿ." *(43:71)*

"ನಿಶ್ಚಯವಾಗಿಯೂ ಸ್ವರ್ಗವಾಸಿಗಳು ಅಂದು ತಮ್ಮ ಕಾಯಕದಲ್ಲಿ (ದೇವ ಸ್ಮರಣೆಯಲ್ಲಿ) ಆನಂದಾತಿರೇಕದಿಂದ ಇರುವರು. ಅವರು ಮತ್ತು ಅವರ ಸಂಗಾತಿಗಳು ನೆರಳಿನಲ್ಲಿ (ಇರಿಸಿರುವ) ಸುಖಾಸನಗಳಲ್ಲಿ ಪವಡಿಸುವರು. ಅವರಿಗೆ ಅಲ್ಲಿ ಹಣ್ಣು ಹಂಪಲುಗಳಿವೆ. ಅವರಿಗೆ ಬೇಕಾದುದೆಲ್ಲಾ ಅಲ್ಲಿ ಅವರಿಗೆ ಸಿಗುವುದು." *(36:56–58)*

"ಸತ್ಯವಿಶ್ವಾಸಿಗಳನ್ನೂ ಸತ್ಯವಿಶ್ವಾಸಿನಿಯರನ್ನೂ ಅವರ ಪ್ರಕಾಶ ಅವರ ಮುಂದೆ ಮತ್ತು ಅವರ ಬಲಭಾಗದಲ್ಲಿ ಶೀಘ್ರವಾಗಿ ಚಲಿಸುತ್ತಿರುವ ಸ್ಥಿತಿಯಲ್ಲಿ ನೀನು ಕಾಣುವ ದಿನದ ಬಗ್ಗೆ ಯೋಚಿಸು. (ಅವರೊಡನೆ ಹೀಗೆ ಹೇಳಲಾಗುವುದು:) ಇಂದು ನಿಮಗೆ ಶುಭಾಶಯಗಳು. ಕೆಳಬದಿಯಲ್ಲಿ ಹೊಳೆಗಳು ಹರಿಯುತ್ತಿರುವ ಸ್ವರ್ಗೀಯ ತೋಟಗಳು ನಿಮಗಿವೆ. ಅಲ್ಲಿ ನೀವು ಶಾಶ್ವತವಾಗಿ ವಾಸಿಸುವಿರಿ. ಅದೇ ಮಹಾ ವಿಜಯವಾಗಿದೆ." *(57:13)*

ಪವಿತ್ರ ಪೈಗಂಬರರೊಂದಿಗೆ[ಸ] ಅಲ್ಲಾಹನು ಹೇಳಿದನು:

"ಸತ್ಯ ವಿಶ್ವಾಸಿಗಳಾದ ಪುರುಷರಿಗಾಗಿಯೂ ಸ್ತ್ರೀಯರಿಗಾಗಿಯೂ ನೀನು ಕ್ಷಮೆ ಯಾಚಿಸು." *(47:20)*

## ಪುರುಷರಿಗೂ ಸ್ತ್ರೀಯರಿಗೂ ವಿಭಿನ್ನ ಕಾರ್ಯಕ್ಷೇತ್ರಗಳು

ಸೃಷ್ಟಿಕರ್ತನು ಲೋಕವ್ಯವಸ್ಥೆಯನ್ನು ಸ್ಥಾಪಿಸುವುದರಲ್ಲಿ ತನ್ನ ದೈವಿಕ ಜಾಣ್ಮೆಯನ್ನು ತೋರಿಸಿರುವನು. ಪುರುಷರೂ ಮಹಿಳೆಯರೂ ಆಧ್ಯಾತ್ಮಿಕವಾಗಿ ಪರಸ್ಪರ ಸಮಾನ ಸಂಬಂಧ ಹೊಂದಿರುವವರೂ ಅಲ್ಲಾಹನಿಂದ ವರದಾನಗಳನ್ನೂ ಅನುಗ್ರಹಗಳನ್ನೂ ಪಡೆಯುವುದರಲ್ಲಿ ಸಮಾನರಾಗಿದ್ದರೂ ಅವರ ಕೆಲಸಗಳು ಸಮಾನವಲ್ಲ. ಈ ವಿಭಿನ್ನತೆಗಳ ಕಾರಣದಿಂದ ಅವರ ಶಕ್ತಿ ಸಾಮರ್ಥ್ಯಗಳಲ್ಲೂ ಪರಸ್ಪರ ವಿಭಿನ್ನತೆಗಳು ಇವೆ. ಪವಿತ್ರ ಖುರ್‌ಆನ್ ಇವುಗಳ ಬಗ್ಗೆ ಹೀಗೆ ಹೇಳುತ್ತದೆ:

"ಪ್ರತಿಯೊಂದು ವಸ್ತುವನ್ನು ಅದರ ಸರಿಯಾದ ರೂಪದಲ್ಲಿ ಸೃಷ್ಟಿಸಿ, ಅನಂತರ ಅದಕ್ಕೆ ಮಾರ್ಗದರ್ಶನ ನೀಡಿದವನೇ ನಮ್ಮ ಪ್ರಭು." *(20:51)*

"ಇದು ಅಲ್ಲಾಹನಿಂದ ರೂಪೀಕೃತವಾದ ಪ್ರಕೃತಿಯಾಗಿದೆ. ಆ ಪ್ರಕೃತಿಯನುಸಾರ ಅವನು ಮನುಷ್ಯರನ್ನು ಸೃಷ್ಟಿಸಿದ್ದಾನೆ. ಅಲ್ಲಾಹನ ಸೃಷ್ಟಿ ಕಾರ್ಯದಲ್ಲಿ ಏನೂ ಬದಲಾವಣೆ ಇಲ್ಲ." *(30:31)*

ಪುರುಷನನ್ನು ಮಹಿಳೆಯನ್ನಾಗಿಯೂ ಮಹಿಳೆಯನ್ನು ಪುರುಷನನ್ನಾಗಿಯೂ ಪರಿವರ್ತಿಸಲು ಮಾಡುವ ಪ್ರಯತ್ನಗಳು ನಿರರ್ಥಕವೂ ವಿನಾಶಕಾರಿಯೂ ಆಗಿವೆ. ಪುರುಷನಿಗೂ ಮಹಿಳೆಗೂ ಅವರಿಗೆ ನಿಗದಿಪಡಿಸಲಾದ ತಕ್ಕುದಾದ ಕೆಲಸಗಳಿವೆ. ಅವರು ತಮಗೆ ವಹಿಸಲಾದ ಕೆಲಸಗಳನ್ನು ಮಾಡುವುದರಲ್ಲಿಯೇ ಅವರಿಗೆ ಗೌರವ, ಸುಖ ಸೌಕರ್ಯ, ಸಾರ್ಥಕತೆ ಮತ್ತು ಜೀವಿತದ ಸೌಂದರ್ಯ ಅಡಕವಾಗಿದೆ.

ಪುರುಷರ ಮತ್ತು ಮಹಿಳೆಯರ ವಿಭಿನ್ನ ಶಕ್ತಿ ಸಾಮರ್ಥ್ಯಗಳನ್ನು ಅವಲೋಕಿಸುವಾಗ ಪ್ರಕೃತಿಯು ಅವರಿಗೆ ವಹಿಸಿಕೊಟ್ಟ ವಿಭಿನ್ನ ಕೆಲಸಗಳೇನೆಂದು ತಿಳಿಯುವುದು. ಉದಾಹರಣೆಗೆ, ಮಹಿಳೆ ಹಾಲೂಡಿಸಲು ಸಾಮರ್ಥ್ಯ ಹೊಂದಿದ್ದಾಳೆ. ಆದರೆ ಪುರುಷನಿಗೆ ಅದು ಸಾಧ್ಯವಿಲ್ಲ. ಯುದ್ಧ ಕ್ಷೇತ್ರದಲ್ಲಿ ಸೇನಾ ನಾಯಕನಾಗುವ ಶಕ್ತಿಯನ್ನು ಪುರುಷನಿಗೆ ನೀಡಲಾಗಿದೆ. ಆದರೆ ಒಬ್ಬ ಮಹಿಳೆಯನ್ನು ಸೇನಾಧಿಪತಿಯನ್ನಾಗಿ ಮಾಡಿದರೆ ವಿನಾಶವನ್ನು ಆಮಂತ್ರಿಸುವುದಕ್ಕೆ ಸಮಾನವಾಗುವುದು. ಇದು ಪುರುಷನ ಶ್ರೇಷ್ಠತೆ ಅಥವಾ ಮಹಿಳೆಯ ಕೀಳುತನದ ಪ್ರಶ್ನೆಯಲ್ಲ. ಇದು ಪ್ರಕೃತಿ ಸಹಜವಾದ ಶಕ್ತಿ

ಸಾಮರ್ಥ್ಯಗಳ ಮತ್ತು ಸಮರ್ಪಕವಾದ ಕಾರ್ಯನಿರ್ವಹಣೆಯ ಪ್ರಶ್ನೆಯಾಗಿದೆ.

ಮಗುವನ್ನು ಹೆತ್ತು ಪೋಷಿಸುವ ಹೊಣೆಗಾರಿಕೆಯನ್ನು ಈಡೇರಿಸುವಾಗ ಮಹಿಳೆಗೆ ಕೆಲವು ಪ್ರತಿಬಂಧಗಳನ್ನು ಹೇರಲಾಗುತ್ತಿದೆ. ಪುರುಷನು ಇವುಗಳಿಂದ ಸ್ವತಂತ್ರನಾಗಿದ್ದಾನೆ. ಆದರೆ ಮಾತೃತ್ವವೆಂಬ ವೈಭವಶಾಲಿ ಕಿರೀಟವನ್ನು ಮಹಿಳೆಗೆ ಮಾತ್ರ ಕಾದಿರಿಸಲಾಗಿದೆ. ಪುರುಷನು ಅದನ್ನು ಹಂಬಲಿಸಲು ಅಸಾಧ್ಯ. ಮಕ್ಕಳನ್ನು ಅವರ ಚಿಕ್ಕ ವಯಸ್ಸಿನಲ್ಲಿ ಪಾಲನೆ ಪೋಷಣೆ ಮಾಡುವುದು ತಾಯಿಯ ಮುಖ್ಯ ಜವಾಬ್ದಾರಿಯಾಗಿದೆ. ಆ ಸಮಯದಲ್ಲಿ ಪಿತನ ಹೊಣೆಗಾರಿಕೆ ಮಾತೆಯ ಹೊಣೆಗಾರಿಕೆಗೆ ಪೂರಕವಾಗಿರುತ್ತದೆ. ಆ ಸಮಯದಲ್ಲಿ ಮಗು ಪಾಲನೆ ಪೋಷಣೆ, ಸುಖ ಸೌಕರ್ಯ ಮತ್ತು ರಕ್ಷಣೆಗೋಸ್ಕರ ಪಿತನಿಗಿಂತ ಮಾತೆಯ ಕಡೆಗೆ ಸಹಜ ಪ್ರಕೃತಿಯ ಪ್ರಕಾರ ತಿರುಗುತ್ತದೆ. ಒಂದು ಮಗು ತಾಯಿಯಿಂದ ಗದರಿಸಲ್ಪಟ್ಟರೆ ಅಥವಾ ಶಿಸ್ತು ಕ್ರಮಕ್ಕೆ ಗುರಿಯಾದರೆ ಅದು ತಾಯಿಯ ಮೇಲೆ ಕೋಪಗೊಳ್ಳುವುದಿಲ್ಲ. ಆದರೆ ತಂದೆಯಿಂದ ಶಿಕ್ಷಿಸಲ್ಪಟ್ಟರೆ ಕೋಪಗೊಳ್ಳುತ್ತದೆ. ಪಿತ ಮತ್ತು ಮಗುವಿನ ಮಧ್ಯೆ ಇರುವ ಸಂಬಂಧಕ್ಕಿಂತ ಹೆಚ್ಚು ಗಾಢವಾದ ಮಮತೆಯ ಸಂಬಂಧವನ್ನು ಮಗು ಮತ್ತು ಅದರ ಮಾತೆಯ ಮಧ್ಯೆ ಪ್ರಕೃತಿಯು ಸ್ಥಾಪಿಸಿರುತ್ತದೆ.

ಮಹಿಳೆಯು ದುರ್ಬಲಳಾಗಿರುವುದರಿಂದ ಆಕೆಯ ಸಂರಕ್ಷಣೆಗೆ ಮತ್ತು ಸಹಾಯಕ್ಕೆ ಪುರುಷನ ಅವಶ್ಯಕತೆ ಇರುತ್ತದೆ. ಒಬ್ಬ ಮಹಿಳೆಯನ್ನು ಅವಳ ಇಚ್ಛೆಗೆ ವಿರುದ್ಧವಾಗಿ ವರ್ತಿಸಲು ಬಲಾತ್ಕರಿಸಬಹುದು. ಆದರೆ ಪುರುಷನನ್ನು ಅವನ ಇಷ್ಟಕ್ಕೆ ವಿರುದ್ಧವಾಗಿ ವರ್ತಿಸಲು ಬಲಾತ್ಕಾರ ಮಾಡಲು ಸಾಧ್ಯವಾಗದು.

ಪತ್ನಿ ಮತ್ತು ತಾಯಿಯಾಗಿ ಮಹಿಳೆಯ ಸಹಜ ಕಾರ್ಯಕ್ಷೇತ್ರ ಮನೆಯಾಗಿದೆ. ಜೀವನಾಧಾರವನ್ನು ಅರಸುವ ಹೊಣೆಗಾರಿಕೆ ಹೊತ್ತಿರುವ ಪುರುಷನ ಸಹಜ ಕಾರ್ಯಕ್ಷೇತ್ರ ಮನೆಯ ಹೊರಗಾಗಿದೆ. ವಿವೇಕಭರಿತ ಮತ್ತು ಹಿತಕರವಾದ ಸಾಮಾಜಿಕ ವ್ಯವಸ್ಥೆಯನ್ನು ಇಸ್ಲಾಮ್ ಧರ್ಮವು ಸ್ಥಾಪಿಸಿದ್ದು ಅದು ಪುರುಷ ಮತ್ತು ಮಹಿಳೆಯ ಮಧ್ಯೆ ಸಮತೋಲನವನ್ನು ಕಾಪಾಡುತ್ತದೆ.

## ವಿವಾಹ

ಇಸ್ಲಾಮ್ ಧರ್ಮದ ಪ್ರಕಾರ ವಿವಾಹದ ಅಂತಿಮ ಗುರಿ ಚಾರಿತ್ರ್ಯ, ಈಡೇರಿಕೆ, ಸುಖ ಸಮಾಧಾನ ಮತ್ತು ಸಂತಾನಾಭಿವೃದ್ಧಿ ಮೂಲಕ ಅಲ್ಲಾಹನ ಸಂಪ್ರೀತಿಯನ್ನು ಗಳಿಸುವುದಾಗಿದೆ. ಪವಿತ್ರ ಖುರ್‌ಆನ್ ಸತ್ಯವಿಶ್ವಾಸಿಗಳ ಗುಣಗಳನ್ನು ಹೀಗೆಂದು ವಿವರಿಸಿದೆ: ವಿವಾಹದ ಮೂಲಕ ಚಾರಿತ್ರ್ಯವನ್ನು ಕಾಪಾಡುವವರು, ನಮಾಝನ್ನು ವಿನಮ್ರವಾಗಿ ಅನುಷ್ಠಿಸುವವರು, ನಿಷ್ಪ್ರಯೋಜಕ ಸಂಗತಿಗಳಿಂದ ದೂರವಿರುವವರು, ಝಕಾತ್ ಕೊಡುವವರು, ಅಮಾನತುಗಳನ್ನು (ವಿಶ್ವಸ್ತ ನಿಧಿಗಳನ್ನು) ಮತ್ತು ಒಪ್ಪಂದಗಳನ್ನು ಕಾಪಾಡುವವರು. ಅದು ಅವರನ್ನು, *"ಅವರೇ ನಿಜವಾದ ವಾರೀಸುದಾರರು, ಅವರು ಸ್ವರ್ಗದ ಹಕ್ಕುದಾರರಾಗುವರು. ಅಲ್ಲೇ ಅವರು ಶಾಶ್ವತವಾಗಿ ನೆಲೆಸುವರು"* ಎಂದು ಹೇಳಿದೆ. (ಪವಿತ್ರ ಖುರ್‌ಆನ್ 23:2–12 ನೋಡಿರಿ)

ಅಲ್ಲಾಹನು ಹೀಗೆ ಸಹ ಆದೇಶಿಸಿದ್ದಾನೆ:

*"ನಿಮ್ಮಲ್ಲಿರುವ ವಿಧವೆಯರಿಗೂ (ಮದುವೆಗೆ) ಯೋಗ್ಯರಾದ ಪುರುಷ ಮತ್ತು ಸ್ತ್ರೀ ಗುಲಾಮರಿಗೂ ವಿವಾಹ ಮಾಡಿಸಿರಿ. ಅವರು ದರಿದ್ರರಾಗಿದ್ದರೆ ಅಲ್ಲಾಹನು ತನ್ನ ಅನುಗ್ರಹದಿಂದ ಅವರಿಗೆ ಐಶ್ವರ್ಯವನ್ನು ದಯಪಾಲಿಸುವನು." (ಪವಿತ್ರ ಖುರ್‌ಆನ್ 24:23)*

ಹಝ್‌ರತ್ ಮುಹಮ್ಮದ್ ಪೈಗಂಬರರು(ಸ) ಹೀಗೆ ಹೇಳಿದ್ದಾರೆ: ದಾಂಪತ್ಯ ಜೀವನವು ನಮ್ಮ ಮಾರ್ಗವಾಗಿದೆ. ನಮ್ಮ ಮಾರ್ಗದಿಂದ ದೂರಸರಿದು ಹೋಗುವವನು ನಮ್ಮ ಪೈಕಿಯನಲ್ಲ.

ದುರದೃಷ್ಟಕರವಾದುದೇನೆಂದರೆ, ಪಾಶ್ಚಿಮಾತ್ಯರು ಚಾರಿತ್ರ್ಯವನ್ನು ಒಂದು ಸದ್ಗುಣವೆಂದು ಪರಿಗಣಿಸುವುದಿಲ್ಲ. ಅದು ಅವರಿಗೆ ಅಪಮಾನಕರವಾಗಿದೆ. ವಿವಾಹರಹಿತವಾಗಿ ಗಂಡು ಹೆಣ್ಣುಗಳು ಜೀವಿಸುವ ಪ್ರಯೋಗ ನಡೆಸುವುದು ಮತ್ತು ಸ್ವಚ್ಛಂದ ಸಂಭೋಗ ಅವರಲ್ಲಿ ಸಾಧಾರಣವಾಗಿದೆ. ವಿವಾಹಸಹಿತ ಮತ್ತು ವಿವಾಹರಹಿತ ವಿಕೃತ ಲೈಂಗಿಕ ಭೋಗ ಮತ್ತು ವಿಷಯಾಸಕ್ತಿ ಜೀವನವೇ ಕಾಮದ ಸರಿಯಾದ ಉದ್ದೇಶವೆಂದು ಗಣಿಸಲಾಗುತ್ತಿದೆ. ಕಾಮ ತಣಿಸುವ ಕೇವಲ ಒಂದು ಸಾಧನವಾಗಿ ಮಹಿಳೆಯ ಸ್ಥಾನವನ್ನು ತಗ್ಗಿಸಲಾಗಿದೆ.

ಇಸ್ಲಾಮ್ ಧರ್ಮ ಪ್ರಕಾರ ಪತಿ ಪತ್ನಿಯರ ಸಂಬಂಧವು ದಯೆ ಎಂಬ ಗುಣವಿಶೇಷದಿಂದಿರಬೇಕು. ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

*"ನೀವು ಅವರೊಂದಿಗೆ ಉತ್ತಮವಾಗಿ ವರ್ತಿಸಿರಿ. ನೀವು ಅವರನ್ನು ಇಷ್ಟಪಡುವುದಿಲ್ಲವಾದರೆ (ನೆನಪಿಡಿರಿ) ಅಲ್ಲಾಹನು ಧಾರಾಳ ಒಳಿತನ್ನು ಇಟ್ಟಿರುವ ಒಂದು ವಸ್ತುವನ್ನು ನೀವು ಮೆಚ್ಚುವುದಿಲ್ಲವೆಂದಾಗಲೂಬಹುದು." (4:20)*

ದಾಂಪತ್ಯ ಸಂಬಂಧ ಹೇಗಿರಬೇಕೆಂದು ಹಝ್‌ರತ್ ಮುಹಮ್ಮದ್ ಪೈಗಂಬರರ(ಸ) ಈ ಕೆಳಗಿನ ಆದೇಶದಿಂದ ತಿಳಿಯಬಹುದು: "ಪತಿ ಪತ್ನಿಯರು ಸೇರುವಾಗ ಹೀಗೆ ಪ್ರಾರ್ಥಿಸಬೇಕು– 'ಓ ಅಲ್ಲಾಹ್ ನಮ್ಮನ್ನು ಶೈತಾನನಿಂದ ರಕ್ಷಿಸು. ನೀನು ನಮಗೆ ದಯಪಾಲಿಸುವ ಮಗುವಿನಿಂದಲೂ ಶೈತಾನನನ್ನು ದೂರವಿರಿಸು'."

ಇದರ ಮೊದಲು ಬರೆಯಲಾದ ಹಾಗೆ ಪವಿತ್ರ ಖುರ್‌ಆನ್ (ಅಧ್ಯಾಯ 2 ವಚನ 188ರಲ್ಲಿ) ಪತಿ ಮತ್ತು ಪತ್ನಿಯರನ್ನು ಪರಸ್ಪರ ಉಡುಗೆ ಎಂದಾಗಿ ವರ್ಣಿಸಿದೆ. ಇದರ ಅರ್ಥ ಭದ್ರತೆ, ಗೌರವ ಮತ್ತು ಸೌಂದರ್ಯ ಗಳಿಸುವ ದಾರಿ ಎಂದಾಗಿದೆ.

ದಾಂಪತ್ಯ ಜೀವಿತವನ್ನು ನೈತಿಕ ಮತ್ತು ಆಧ್ಯಾತ್ಮಿಕ ಪ್ರಜ್ಞೆಯ ಉನ್ನತ ಮಟ್ಟದಲ್ಲಿ ಇಸ್ಲಾಮ್ ಪರಿಗಣಿಸುತ್ತದೆ. ಕೇವಲ ಕಾಮತೃಪ್ತಿಯ ಸರ್ವಭಾವನೆಗಳನ್ನು ಅದು ಹೊರಗಿರಿಸುತ್ತದೆ. ಪವಿತ್ರ ಖುರ್‌ಆನಿನ ಈ ಕೆಳಗಿನ ಉಪದೇಶಗಳಿಂದಲೂ ಆದೇಶಗಳಿಂದಲೂ ಇದನ್ನು

ತಿಳಿಯಬಹುದು:

*"ಋತುಸ್ರಾವದ ಕುರಿತು ನಿನ್ನೊಡನೆ ಕೇಳುತ್ತಾರೆ. ಹೇಳು: ಅದೊಂದು ಅಸ್ವಸ್ಥತೆಯ ಸ್ಥಿತಿಯಾಗಿದೆ. ಆದುದರಿಂದ ಋತುಸ್ರಾವದ ಕಾಲದಲ್ಲಿ ನೀವು ಸ್ತ್ರೀಯರಿಂದ ದೂರವಿರಿ. ಅವರು ಶುದ್ಧಿಯಾಗುವವರೆಗೆ ನೀವು ಅವರನ್ನು (ಸಂಸರ್ಗಕ್ಕಾಗಿ) ಸಮೀಪಿಸಬಾರದು. ಅವರು (ಸ್ನಾನಮಾಡಿ) ಶುದ್ಧಿಯಾದ ಬಳಿಕ ಅಲ್ಲಾಹನು ನಿಮ್ಮೊಡನೆ ಆಜ್ಞಾಪಿಸಿದಂತೆ ಅವರನ್ನು ಸಮೀಪಿಸಿರಿ. ಖಂಡಿತವಾಗಿಯೂ ಅಲ್ಲಾಹನು ಪಶ್ಚಾತ್ತಾಪಪಡುವವರನ್ನು ಪ್ರೀತಿಸುತ್ತಾನೆ. (ಬಾಹ್ಯವಾಗಿಯೂ ಆಂತರಿಕವಾಗಿಯೂ) ಪರಿಶುದ್ಧರಾಗಿರುವವರನ್ನು ಇಷ್ಟಪಡುತ್ತಾನೆ."*

*"ನಿಮ್ಮ ಪತ್ನಿಯರು ನಿಮಗೆ (ಒಂದು ರೀತಿಯ) ಕೃಷಿಸ್ಥಳ ವಾಗಿದ್ದಾರೆ. ಆದ್ದರಿಂದ ನೀವು ಇಚ್ಛಿಸಿದಂತೆ ನಿಮ್ಮ ಕೃಷಿ ಸ್ಥಳದೆಡೆಗೆ ಹೋಗಿರಿ. ನಿಮ್ಮ ಭವಿಷ್ಯಕ್ಕಾಗಿ ಬೇಕಾದುದನ್ನು ಮಾಡಿಟ್ಟುಕೊಳ್ಳಿರಿ. ಅಲ್ಲಾಹನ ಭಯವಿರಿಸಿಕೊಳ್ಳಿರಿ. ಅವನನ್ನು ನೀವು ಸಂಧಿಸ ಲಿರುವಿರೆಂದು ಅರಿತುಕೊಳ್ಳಿರಿ. ಸತ್ಯವಿಶ್ವಾಸಿಗಳಿಗೆ ನೀನು ಶುಭವಾರ್ತೆ ನೀಡು." (2:223–224)*

ಪತ್ನಿಯ ಗರ್ಭಧರಿಸುವ ಸಾಮರ್ಥ್ಯವನ್ನೂ ಸಂದರ್ಭವನ್ನೂ ಪ್ರತಿಕೂಲವಾಗಿ ಬಾಧಿಸುವ ಯಾವುದೇ ವರ್ತನೆಯನ್ನು ಪತಿಯು ಹೊಂದುವುದನ್ನು ಹೀಗೆ ಅಸಮ್ಮತಿಸಲಾಗಿದೆ. ಪರಿಶುದ್ಧತೆ ಮತ್ತು ದೇವಭಯವನ್ನು ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳಬೇಕು. ಸಾತ್ವಿಕರಾದ ಜನರಿಗೆ ಈ ಕೆಳಗಿನ ಪ್ರಾರ್ಥನೆಯನ್ನು ಪವಿತ್ರ ಖುರ್‌ಆನಿನಲ್ಲಿ ಕಲಿಸಲಾಗಿದೆ:

*"ನಮ್ಮ ಪ್ರಭೂ, ನಮ್ಮ ಬಾಳ ಸಂಗಾತಿಗಳನ್ನೂ ನಮ್ಮ ಮಕ್ಕಳನ್ನೂ ನಮಗೆ ನಯನಾನಂದಕರವಾಗಿ ಮಾಡು ಹಾಗೂ ನಮ್ಮನ್ನು ಸಜ್ಜನರಿಗೆ ನಾಯಕರನ್ನಾಗಿ ಮಾಡು." (25:75)*

## ಪತಿ ಪತ್ನಿಯರ ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳು

ಇಸ್ಲಾಮ್ ಧರ್ಮ ಪ್ರಕಾರ ವಿವಾಹ ಪತಿ ಪತ್ನಿಯರ ಮಧ್ಯೆ ನಡೆಯುವ ಒಂದು ನಾಗರಿಕ ಒಪ್ಪಂದವಾಗಿದ್ದು ಪರಸ್ಪರ ಹೊಣೆಗಾರಿಕೆಗಳನ್ನು ವಹಿಸಿಕೊಡಲಾಗುತ್ತಿದೆ. ವಿವಾಹವು ಅಂಗೀಕರಿಸಲ್ಪಡಲು ವಧು–ವರರ ಸ್ವಇಚ್ಛೆಯ ಒಪ್ಪಿಗೆ, ವಧುವಿನ ರಕ್ಷಕನ ಒಪ್ಪಿಗೆ ಅವಶ್ಯಕವಾಗಿದೆ. ವಧುವಿನ ರಕ್ಷಕ ವಧುವಿನ ಹಕ್ಕುಗಳನ್ನು ಸಂರಕ್ಷಿಸಬೇಕು. ವರನು ತನ್ನ ವರಮಾನಕ್ಕನುಸಾರವಾಗಿ ಮಹ್‌ರ್ ಎಂಬ ವಧುದಕ್ಷಿಣೆಯನ್ನು ನೀಡಬೇಕು. ಇದು ವಧುವಿನ ತಂದೆ ತಾಯಂದಿರು ಅಥವಾ ರಕ್ಷಕ ನೀಡುವ ವರದಕ್ಷಿಣೆ ಎಂದು ತಪ್ಪಾಗಿ ಭಾವಿಸಬಾರದು.

ಯಾರನ್ನು ವಿವಾಹವಾಗುವುದು ನಿಷಿದ್ಧ ಎಂದು ಈ ಕೆಳಗಿನ ಖುರ್‌ಆನ್ ವಚನಗಳು ಸ್ಪಷ್ಟವಾಗಿ ಹೇಳುತ್ತವೆ:

*"ನಿಮ್ಮ ಮಾತೆಯರು, ನಿಮ್ಮ ಪುತ್ರಿಯರು, ನಿಮ್ಮ ಸಹೋದರಿಯರು, ನಿಮ್ಮ ತಂದೆಯ ಸಹೋದರಿಯರು, ನಿಮ್ಮ ತಾಯಿಯ ಸಹೋದರಿಯರು, ನಿಮ್ಮ ಸಹೋದರರ ಪುತ್ರಿಯರು, ನಿಮ್ಮ ಸಹೋದರಿಯರ ಪುತ್ರಿಯರು, ನಿಮಗೆ ಮೊಲೆ ಯುಣ್ಣಿಸಿದ ಸಾಕು ತಾಯಂದಿರು, ಮೊಲೆಯುಂಡ ಸಂಬಂಧದ ನಿಮ್ಮ ಸಹೋದರಿಯರು, ನಿಮ್ಮ ಪತ್ನಿಯರ ಮಾತೆಯರು, ನೀವು ಸಮಾಗಮ ಮಾಡಿರುವ ನಿಮ್ಮ ಪತ್ನಿಯರ ಸಂತಾನವಾಗಿದ್ದು, ನಿಮ್ಮ ಸಂರಕ್ಷಣೆಯಲ್ಲಿರುವ ನಿಮ್ಮ ಸಾಕು ಪುತ್ರಿಯರು– ಇವರೆಲ್ಲ ನಿಮಗೆ (ವಿವಾಹ) ನಿಷಿದ್ಧಗೊಳಿಸಲ್ಪಟ್ಟವರಾಗಿದ್ದಾರೆ. ಆದರೆ ನೀವು ಆ ಪತ್ನಿಯರೊಂದಿಗೆ ಸಮಾಗಮ ಮಾಡಿಲ್ಲವಾದರೆ, (ಅವರ ಪುತ್ರಿಯರನ್ನು ವಿವಾಹವಾಗುವುದರಲ್ಲಿ) ನಿಮ್ಮ ತಪ್ಪಿಲ್ಲ. (ಹಾಗೆಯೇ) ನಿಮ್ಮ ಸ್ವಂತ ಪುತ್ರರ ಪತ್ನಿಯರನ್ನೂ ಇಬ್ಬರು ಸಹೋದರಿಯರನ್ನು ಒಟ್ಟಾಗಿಯೂ (ವಿವಾಹವಾಗುವುದು ನಿಮಗೆ ನಿಷಿದ್ಧಗೊಳಿಸಲಾಗಿದೆ.) ಹಿಂದೆ ಕಳೆದುದು ಕಳೆದು ಹೋಯಿತು. ಖಂಡಿತವಾಗಿಯೂ ಅಲ್ಲಾಹನು ಅತ್ಯಂತ ಕ್ಷಮಾಶೀಲನೂ ಕಾರುಣ್ಯನಿಧಿಯೂ ಆಗಿದ್ದಾನೆ."*

*"(ಅನ್ಯರ) ವಿವಾಹಬಂಧದಲ್ಲಿರುವ ಸ್ತ್ರೀಯರೂ (ನಿಮಗೆ ನಿಷಿದ್ಧ ಗೊಳಿಸಲ್ಪಟ್ಟಿದ್ದಾರೆ.) –(ಯುದ್ಧಕೈದಿಗಳಾಗಿ) ನಿಮ್ಮ ಅಧೀನಕ್ಕೆ ಬಂದವರು ಹೊರತು. ಇದು ನಿಮ್ಮ ಮೇಲೆ ವಿಧಿಸಲಾದ ಅಲ್ಲಾಹನ ಶಾಸನವಾಗಿದೆ." (4:24, 25)*

ಯಾರನ್ನೆಲ್ಲ ವಿವಾಹವಾಗುವುದು ನಿಷಿದ್ಧ ಎಂದು ವಿವರಿಸಿದ ನಂತರ ಖುರ್‌ಆನಿನಲ್ಲಿ ಹೀಗೆ ಹೇಳಲಾಗಿದೆ:

*"ಇವರನ್ನು (ಮೇಲೆ ವಿವರಿಸಿದ ಸ್ತ್ರೀಯರನ್ನು) ಹೊರತು ಬೇರೆ ಸ್ತ್ರೀಯರನ್ನು ನಿಮ್ಮ ಧನ (ಮಹರ್) ಮೂಲಕ ಅನ್ವೇಷಿಸುವುದು ನಿಮಗೆ ಧರ್ಮಬದ್ಧಗೊಳಿಸಲಾಗಿದೆ. (ಈ ನಿಮ್ಮ ಸಂಬಂಧ) ವೈವಾಹಿಕವಾಗಿರಬೇಕು; ಅನೈತಿಕ ಸಂಬಂಧವಾಗಿರಬಾರದು. ಅವರಿಂದ ನೀವು ಸುಖಾನುಭವ ಪಡೆದಿದ್ದರೆ ಪ್ರತಿಫಲವಾಗಿ ಅವರಿಗೆ ನಿಶ್ಚಯಿಸಲಾದ ವಿವಾಹಧನವನ್ನು ನೀಡಿರಿ. (ವಿವಾಹಧನವನ್ನು) ನಿರ್ಧರಿಸಿದ ನಂತರ ನೀವು ಪರಸ್ಪರ ಒಪ್ಪಿಕೊಂಡರೆ (ರಿಯಾಯಿತಿ ಯೇನಾದರೂ ಮಾಡಿದರೆ) ತಪ್ಪಾಗುವುದಿಲ್ಲ. ನಿಸ್ಸಂದೇಹವಾಗಿಯೂ ಅಲ್ಲಾಹನು ಎಲ್ಲ ಬಲ್ಲವನೂ ವಿವೇಕಶಾಲಿಯೂ ಆಗಿದ್ದಾನೆ. (4:25)*

ಪತಿ ಮತ್ತು ಪತ್ನಿಗೆ ಪರಸ್ಪರ ಪೂರಕ ಹೊಣೆಗಾರಿಕೆಗಳು ಇವೆ. ಪತ್ನಿ ಮತ್ತು ಕುಟುಂಬದ ಖರ್ಚು ವೆಚ್ಚಗಳಿಗೋಸ್ಕರ ದುಡಿಯುವ ಹೊಣೆಗಾರಿಕೆ ಪತಿಗಿದೆ. ಮನೆಯ ಖರ್ಚು ವೆಚ್ಚಗಳ ಬಗ್ಗೆ ನಿರ್ಧಾರ ಕೈಗೊಳ್ಳುವುದರಲ್ಲಿ ಈ ಕಾರಣದಿಂದ ಪತಿಗೆ ಪರಮಾಧಿಕಾರವಿದೆ. ಹೀಗೆ ಮಾಡದಿದ್ದರೆ ಕುಟುಂಬದಲ್ಲಿ ಅಸ್ತವ್ಯಸ್ತತೆಯೂ ನಾಶವೂ ಸಂಭವಿಸಬಹುದು. ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

*"ಅವರ ಮೇಲೆ (ಪುರುಷರಿಗೆ) ಕೆಲವು ಹಕ್ಕುಗಳಿರುವಂತೆಯೇ ಅವರಿಗೂ (ಸ್ತ್ರೀಯರಿಗೂ) ನ್ಯಾಯೋಚಿತವಾದ ಕೆಲವು ಹಕ್ಕುಗಳಿವೆ. ಪುರುಷರಿಗೆ ಅವರ ಮೇಲೆ ಒಂದು ದರ್ಜೆ ಹೆಚ್ಚಿಗಿದೆ. ಅಲ್ಲಾಹನು ಪ್ರತಾಪವಂತನೂ ವಿವೇಕಶಾಲಿಯೂ ಆಗಿದ್ದಾನೆ." (2:229)*

ಮಹಿಳೆಯರ ಶಾರೀರಿಕ ಬಲಹೀನತೆ, ಕೋಮಲತೆ ಮತ್ತು

ಅವರ ದುರ್ಬಲತೆಯನ್ನು ಪರಿಗಣಿಸಿ ಪುರುಷರನ್ನು ಮಹಿಳೆಯರ ಮೇಲೆ ಸಂರಕ್ಷಕರನ್ನಾಗಿ ನೇಮಿಸಲಾಗಿದೆ. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

*"ಪುರುಷರು ಸ್ತ್ರೀಯರ ರಕ್ಷಾಧಿಕಾರಿಗಳಾಗಿದ್ದಾರೆ– ಅಲ್ಲಾಹನು ಅವರ ಪೈಕಿ ಕೆಲವರಿಗೆ ಕೆಲವರಿಗಿಂತ (ಪುರುಷರಿಗೆ ಸ್ತ್ರೀಯರಿಗಿಂತ) ಕೆಲವು ಮೇಲ್ಮೆಗಳನ್ನು ಕೊಟ್ಟಿರುವುದರಿಂದಲೂ ಅವರು ತಮ್ಮ ಧನವನ್ನು ಖರ್ಚು ಮಾಡುವುದರಿಂದಲೂ. ಆದ್ದರಿಂದ ವಿಧೇಯತೆ ತೋರಿಸುವವರೂ ಅಲ್ಲಾಹನು ತಾಕೀತು ಮಾಡಿದ ರೀತಿಯಲ್ಲಿ ರಹಸ್ಯಗಳನ್ನು ಕಾಯ್ದುಕೊಳ್ಳುವವರೂ ಸಚ್ಚರಿತ ಸ್ತ್ರೀಯರಾಗಿದ್ದಾರೆ." (4:35)*

ಪತ್ನಿಯು ಯಾವಾಗಲೂ ಅವಿಧೇಯತೆ ಪ್ರಕಟಿಸುತ್ತಾ ಮನೆಯ ಶಾಂತಿ ಮತ್ತು ಸೌಹಾರ್ದವನ್ನು ಕೆಡಿಸುತ್ತಾ ಇದ್ದರೆ ಪತಿ ಮೊದಲು ಅವಳಿಗೆ ಉಪದೇಶಿಸಬೇಕು. ಅದು ಫಲಕಾರಿಯಾಗದಿದ್ದರೆ ಅವಳಿಂದ ಬೇರೆಯಾಗಿ ಮಲಗಬೇಕು. ಆ ಬಳಿಕವೂ ಆಕೆ ವಿಧೇಯಳಾಗದಿದ್ದರೆ ಕೊನೆಯದಾಗಿ ಆಕೆಗೆ ಹಗುರ ಶಿಕ್ಷೆ ನೀಡಬಹುದೆಂದು ಪವಿತ್ರ ಖುರ್‌ಆನ್ ಹೇಳಿದೆ. (ಪವಿತ್ರ ಖುರ್‌ಆನ್ 4:35 ನೋಡಿರಿ)

ಪವಿತ್ರ ಖುರ್‌ಆನ್ ಪತ್ನಿಯರೊಂದಿಗೆ ಹೀಗೆ ಹೇಳಿದೆ:

*"ಒಬ್ಬ ಸ್ತ್ರೀ ತನ್ನ ಗಂಡನಿಂದ ಕೆಟ್ಟವರ್ತನೆ ಅಥವಾ ಅವಗಣನೆ (ಉಂಟಾಗುವುದೆಂದು) ಭಯಪಡುವುದಾದರೆ,, ಅವರು ತಮ್ಮೊಳಗೆ ಒಪ್ಪಂದ ಮಾಡಿಕೊಂಡು ಶಾಂತಿಯಿಂದ ಸಮಸ್ಯೆಯನ್ನು ಬಗೆಹರಿಸುವುದರಲ್ಲಿ ಅವರಿಗೆ ದೋಷವೇನೂ ಇಲ್ಲ. ಒಪ್ಪಂದವೇ ಅತ್ಯುತ್ತಮವಾದುದು. ಮನುಷ್ಯಹೃದಯಗಳಲ್ಲಿ ಜಿಪುಣತೆ ಸೇರಿಕೊಂಡಿದೆ. ನೀವು ಸತ್ಕರ್ಮ ಮಾಡುವುದಾದರೆ ಮತ್ತು ದೇವ ಭಯವುಳ್ಳವರಾದರೆ, ನೀವು ಮಾಡುವುದನ್ನೆಲ್ಲ ಅಲ್ಲಾಹನು ಚೆನ್ನಾಗಿ ಬಲ್ಲವನಾಗಿದ್ದಾನೆ ಎಂದು ತಿಳಿದುಕೊಳ್ಳಿರಿ." (4:129)*

ಪತಿ ಪತ್ನಿಯರ ಪರಸ್ಪರ ಸವಾಲೋಚನೆಯಿಂದ ರಾಜಿಯಾಗದಿದ್ದರೆ ಸಮಸ್ಯೆಗಳನ್ನು ಬಗೆಹರಿಸಲು ಮಧ್ಯಸ್ಥರ ಸಹಾಯ ಪಡೆಯಬೇಕು. ಪವಿತ್ರ ಖುರ್‌ಆನ್ ಇದರ ಬಗ್ಗೆ ಹೀಗೆ ಹೇಳಿದೆ:

*"ಅವರ (ಪತಿ–ಪತ್ನಿಯರ) ಮಧ್ಯೆ ಒಡಕುಂಟಾಗುವುದೆಂದು ನಿಮಗೆ ಭಯವಿದ್ದರೆ, ಅವರ ಬಂಧುಗಳಿಂದ ಒಬ್ಬ ಮಧ್ಯಸ್ಥಗಾರನನ್ನೂ ಅವಳ ಬಂಧುಗಳಿಂದ ಒಬ್ಬ ಮಧ್ಯಸ್ಥಗಾರನನ್ನೂ ನೀವು ನೇಮಿಸಿರಿ. ಅವರಿಬ್ಬರೂ ಸಾಮರಸ್ಯವನ್ನು ಉದ್ದೇಶಿಸಿದರೆ, ಅಲ್ಲಾಹನು ಅವರ (ಪತಿ–ಪತ್ನಿಯರ) ಮಧ್ಯೆ ಒಮ್ಮತವನ್ನುಂಟು ಮಾಡುವನು. ನಿಸ್ಸಂದೇಹವಾಗಿಯೂ ಅಲ್ಲಾಹನು ಎಲ್ಲವನ್ನು ಬಲ್ಲವನೂ ಸರ್ವಜ್ಞನೂ ಆಗಿದ್ದಾನೆ." (4:36)*

## ವಿವಾಹ ವಿಚ್ಛೇದನೆ

ಪತಿ ಪತ್ನಿಯರ ಮಧ್ಯೆ ಸಾಮರಸ್ಯ ಸ್ಥಾಪಿಸಲು ಮಾಡಿದ ಎಲ್ಲಾ ಪ್ರಯತ್ನಗಳು ನಿಷ್ಫಲವಾದರೆ ವಿವಾಹ ವಿಚ್ಛೇದನೆಯಿಂದ ಮಾತ್ರ ಸಮಸ್ಯೆಗೆ ಪರಿಹಾರ ದೊರಕುವುದು. ಇಸ್ಲಾಮ್ ವಿವಾಹ ವಿಚ್ಛೇದನೆಯನ್ನು ಇಷ್ಟಪಡುವುದಿಲ್ಲವೆಂದು ಗಮನಿಸಬೇಕು. ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಹೇಳಿದರು: ಅಲ್ಲಾಹನು ಅನುಮತಿಸಿರುವ ವಿಷಯಗಳಲ್ಲಿ ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ನಿಂದನೀಯವಾದುದು ವಿವಾಹ ವಿಚ್ಛೇದನೆಯಾಗಿದೆ.

ವಿವಾಹ ವಿಚ್ಛೇದನೆಗೆ ಪತಿಯಾಗಲಿ ಪತ್ನಿಯಾಗಲಿ ಅಪೇಕ್ಷಿಸಬಹುದಾಗಿದೆ. ಪತ್ನಿಯು ವಿವಾಹ ವಿಚ್ಛೇದನೆಗೆ ಅಪೇಕ್ಷೆಯನ್ನು ನ್ಯಾಯಾಧೀಶರ ಮುಖಾಂತರವೇ ಸಲ್ಲಿಸಬೇಕು. ಹೀಗೆ ಮಾಡಿದುದು ಪತ್ನಿಯ ಹಕ್ಕುಗಳನ್ನು ಸಂರಕ್ಷಿಸಲಿಕ್ಕಾಗಿದೆ.

ಪತಿ ಪತ್ನಿಯರ ಮಧ್ಯೆ ಭಿನ್ನಾಭಿಪ್ರಾಯ ಉಂಟಾಗಿ ಸಾಮರಸ್ಯಕ್ಕೋಸ್ಕರ ಮಾಡಿದ ಪ್ರಯತ್ನಗಳು ವಿಫಲವಾಗಿ ಪತಿಯು ತನ್ನ ಪತ್ನಿಯೊಂದಿಗೆ ಸಂಸರ್ಗ ಮಾಡಲಾರನೆಂದು ಶಪಥ ಮಾಡಿದರೆ ನಾಲ್ಕು ತಿಂಗಳೊಳಗೆ ಪ್ರಶ್ನೆಯನ್ನು ಪರಿಹರಿಸಬೇಕು. ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

*"ತಮ್ಮ ಪತ್ನಿಯರೊಂದಿಗೆ (ಸಂಸರ್ಗ ಮಾಡಲಾರೆನೆಂದು) ಶಪಥ ಮಾಡುವವರಿಗೆ (ಪರಮಾವಧಿ) ನಾಲ್ಕು ತಿಂಗಳ ತನಕ ಕಾಯುವ ಅನುಮತಿ ಇದೆ. ಅವರು (ಈ ಕಾಲಾವಧಿಯಲ್ಲಿ ಸಾಮರಸ್ಯವನ್ನು ಬಯಸಿ) ಮರಳುವವರಾದರೆ ಖಂಡಿತವಾಗಿಯೂ ಅಲ್ಲಾಹನು ಅತ್ಯಂತ ಕ್ಷಮಿಸುವವನೂ ಕಾರುಣ್ಯನಿಧಿಯೂ ಆಗಿದ್ದಾನೆ." (2:227)*

*"ಇನ್ನು ಅವರು ವಿವಾಹ ವಿಚ್ಛೇದನೆ ಮಾಡಲು ತೀರ್ಮಾನಿಸುವುದಾದರೆ, (ಅವರು ತಿಳಿದಿರಲಿ) ನಿಶ್ಚಯವಾಗಿಯೂ ಅಲ್ಲಾಹನು ಎಲ್ಲವನ್ನು ಆಲಿಸುವವನೂ ಚೆನ್ನಾಗಿ ಬಲ್ಲವನೂ ಆಗಿದ್ದಾನೆ." (2:228)*

ವಿವಾಹ ವಿಚ್ಛೇದನೆ ಬಗ್ಗೆ ನಿಬಂಧನೆಗಳನ್ನು ಸವಿಸ್ತಾರವಾಗಿ ಪ್ರಸ್ತಾಪಿಸಲಾಗಿದೆ. ಬೇರೆ ಉದ್ದೇಶಗಳೊಂದಿಗೆ, ಅವುಗಳ ಮುಖ್ಯ ಉದ್ದೇಶ ವಿವಾಹ ವಿಚ್ಛೇದನೆಯನ್ನು ಹಗುರವಾಗಿ ಪರಿಗಣಿಸಬಾರದು, ಭಾವೋದ್ವೇಗ ಅಥವಾ ಕೋಪದಿಂದ ವಿವಾಹ ವಿಚ್ಛೇದನೆ ಮಾಡಬಾರದು ಎಂದಾಗಿದೆ. ಜಾಗರೂಕತೆಯಿಂದ ಚಿಂತಿಸಿ ವಿವಾಹ ವಿಚ್ಛೇದನೆ ಬಗ್ಗೆ ತೀರ್ಮಾನಿಸಬೇಕು. ಅದರ ಪರಿಣಾಮಗಳು ಪತಿ ಪತ್ನಿಯರ ಮೇಲೆ ಮತ್ತು ಮಕ್ಕಳಿದ್ದರೆ ಅವರ ಮೇಲೆ ಹೇಗೆ ಉಂಟಾಗಬಹುದೆಂದು ಚೆನ್ನಾಗಿ ಯೋಚಿಸಬೇಕು. ವಿವಾಹ ವಿಚ್ಛೇದನೆಯು ಪೂರ್ಣವಾಗುವುದನ್ನು ವಿಳಂಬಿಸಲಾಗಿದೆ. ಏಕೆಂದರೆ ಮಧ್ಯಾವಧಿಯಲ್ಲಿ ಸಮಾಧಾನಚಿತ್ತರಾಗಿ ಸಾಮರಸ್ಯದ ಬಗ್ಗೆ ಚಿಂತಿಸಲು ಸಂದರ್ಭವನ್ನು, ರದ್ದುಗೊಳಿಸಲಾಗದ ವಿವಾಹ ವಿಚ್ಛೇದನೆಯು ಕಾರ್ಯಗತವಾಗುವ ಮೊದಲು ವ್ಯವಸ್ಥೆಗೊಳಿಸಲಾಗಿದೆ. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

*"(ರದ್ದುಗೊಳಿಸಲ್ಪಡುವ) ವಿವಾಹ ವಿಚ್ಛೇದನೆ ಎರಡು ಬಾರಿಯಾಗಿದೆ. ಅನಂತರ ನ್ಯಾಯೋಚಿತವಾಗಿ (ಪತ್ನಿಯನ್ನು) ತನ್ನೊಂದಿಗೆ ಇರಿಸಿಕೊಳ್ಳಬೇಕು. ಅಥವಾ ಔದಾರ್ಯದಿಂದ ಬಿಟ್ಟು ಬಿಡಬೇಕು. ನೀವು ಅವರಿಗೆ (ಪತ್ನಿಯರಿಗೆ) ನೀಡಿದ್ದರ ಪೈಕಿ ಏನನ್ನಾದರೂ (ವಾಪಾಸು) ಪಡೆಯುವುದು ಧರ್ಮಸಮ್ಮತವಲ್ಲ*

–ಅಲ್ಲಾಹನ ನಿಯಮದ ಎಲ್ಲೆಗಳನ್ನು ಪಾಲಿಸಲು ಅಸಾಧ್ಯವಾಗ ಬಹುದೆಂದು ಈರ್ವರೂ ಭಯಪಡುವಾಗ ಹೊರತು. ಅಲ್ಲಾಹನ ನಿಯಮಗಳನ್ನು ಪಾಲಿಸಲು ಅವರಿಗೆ ಸಾಧ್ಯವಿಲ್ಲವೆಂದು ನೀವು ಭಯಪಡುವಿರಾದರೆ, ಆಗ ಏನನ್ನಾದರೂ ಕೊಟ್ಟು ಅವಳು ವಿಚ್ಛೇದನ ಪಡೆಯುವುದಾದರೆ, ಅದರಲ್ಲಿ ಅವರಿಬ್ಬರಿಗೂ ಪಾಪವಿಲ್ಲ. ಇವು ಅಲ್ಲಾಹನ ಪರಿಧಿಗಳಾಗಿವೆ. ಆದ್ದರಿಂದ ಇವನ್ನು ಉಲ್ಲಂಘಿಸಬೇಡಿರಿ. ಯಾರು ಅಲ್ಲಾಹನ ನಿಯಮಗಳ ಸೀಮೋಲ್ಲಂಘನ ಮಾಡುತ್ತಾರೋ (ತಿಳಿದುಕೊಳ್ಳಿರಿ) ಅವರೇ ಅಧರ್ಮಿಗಳು" (2:230)

ಅವಸರದಿಂದ ವಿವಾಹ ವಿಚ್ಛೇದನೆ ನೀಡುವುದನ್ನು ತಡೆಯಲು ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

"ಮತ್ತೆ (ಮೂರನೆಯ ಸಲವೂ) ಅವಳಿಗೆ ತಲಾಖ್ ಹೇಳಿದರೆ ಅವಳು ಇನ್ನೊಬ್ಬನನ್ನು ಮದುವೆಯಾಗುವವರೆಗೆ ಅವಳು ಅವನಿಗೆ ಧರ್ಮಬದ್ಧಳಲ್ಲ. ಆತನು (ಎರಡನೆಯ ಪತಿ) ಅವಳ ವಿವಾಹ ವಿಚ್ಛೇದನೆ ಮಾಡಿದರೆ ಅವರು ಪರಸ್ಪರ (ಅವಳು ಮತ್ತು ಮೊದಲ ಪತಿ) ಪುನರ್ವಿವಾಹಕ್ಕೆ ಮರಳುವುದಾದರೆ ಅವರಿಗೆ ಪಾಪವಿಲ್ಲ – ಅಲ್ಲಾಹನ ನಿಯಮದ ಎಲ್ಲೆಗಳನ್ನು ಪಾಲಿಸುವೆವೆಂದು ಅವರಿರ್ವರಿಗೂ ನಂಬಿಕೆ ಇದ್ದರೆ. ಇವು ಅಲ್ಲಾಹನ ನಿಯಮದ ಸೀಮೆಗಳಾಗಿವೆ. ಪ್ರಾಜ್ಞರಿಗೆ ಅವನು ಇದನ್ನೆಲ್ಲ ವಿವರಿಸಿಕೊಡುತ್ತಾನೆ." (2:231)

"ನೀವು ಸ್ತ್ರೀಯರಿಗೆ (ರದ್ದುಗೊಳಿಸಲ್ಪಡುವ) ತಲಾಖ್ ನೀಡಿ ಅವರು ('ಇದಃ'ದ ಅಂತ್ಯಾವಧಿಯವರೆಗೆ ತಲಪಿದರೆ, ಒಂದೋ ನೀವು ಅವರನ್ನು ಮರಳಿ ಪಡೆದು ನ್ಯಾಯೋಚಿತವಾದ ರೀತಿಯಲ್ಲಿ ನಿಮ್ಮೊಂದಿಗೆ ಇರಿಸಿಕೊಳ್ಳಿರಿ ಅಥವಾ ನ್ಯಾಯೋಚಿತವಾಗಿ ಅವರನ್ನು ಬಿಡುಗಡೆಗೊಳಿಸಿರಿ. ಅತಿಕ್ರಮದಿಂದ ವರ್ತಿಸಲಿಕ್ಕಾಗಿ ತಪ್ಪಾದ ರೀತಿಯಲ್ಲಿ ಅವರನ್ನು ನಿಮ್ಮೊಂದಿಗೆ ಇರಿಸಿಕೊಳ್ಳಬೇಡಿರಿ. ಯಾವನಾದರೂ ಹಾಗೆ ಮಾಡಿದರೆ ಅವನು ತನಗೇ ದೋಷವನ್ನುಂಟು ಮಾಡುತ್ತಾನೆ. ನೀವು ಅಲ್ಲಾಹನ ಆಜ್ಞೆಗಳನ್ನು ಅಪಹಾಸ್ಯಕ್ಕೆ ಗುರಿಪಡಿಸಬೇಡಿರಿ. ಅಲ್ಲಾಹನು ನಿಮಗೆ ನೀಡಿದ ಅನುಗ್ರಹವನ್ನೂ, ನಿಮಗೆ ಉಪದೇಶಿಸುತ್ತಾ ಅವನು ನಿಮಗೋಸ್ಕರ ಅವಿತೀರ್ಣಗೊಳಿಸಿದ ಗ್ರಂಥ ಮತ್ತು (ಅದರ) ತತ್ವಜ್ಞಾನವನ್ನೂ ನೀವು ಸ್ಮರಿಸಿರಿ. ಅಲ್ಲಾಹನ ಭಯವಿಟ್ಟುಕೊಳ್ಳಿರಿ. ಅಲ್ಲಾಹನು ಎಲ್ಲವನ್ನೂ ಚೆನ್ನಾಗಿ ಬಲ್ಲವನೆಂದು ತಿಳಿದುಕೊಳ್ಳಿರಿ" (2:232)

"ನೀವು ಸ್ತ್ರೀಯರಿಗೆ ತಲಾಖ್ ಹೇಳಿ ಅವರು ತಮ್ಮ 'ಇದ್ದಃ' ಕಾಲವನ್ನು ಪೂರ್ಣಗೊಳಿಸಿದರೆ, ಅವರು ಸಭ್ಯ ರೀತಿಯಲ್ಲಿ ಪರಸ್ಪರ ಒಪ್ಪಿಕೊಳ್ಳುವ ಪಕ್ಷದಲ್ಲಿ ಅವರ ಗಂಡಂದಿರನ್ನು ವಿವಾಹವಾಗುವುದರಿಂದ ನೀವು ಅವರನ್ನು ತಡೆಯಬಾರದು. ಇದು ನಿಮ್ಮ ಪೈಕಿ ಅಲ್ಲಾಹನಲ್ಲಿ ಮತ್ತು ಅಂತ್ಯ ದಿನದಲ್ಲಿ ನಂಬಿಕೆಯಿರಿಸುವವರಿಗೆ ನೀಡಲಾಗುವ ಉಪದೇಶವಾಗಿದೆ. ಇದು ನಿಮಗೆ ಅತ್ಯಂತ ಅನುಗ್ರಹದಾಯಕವೂ ಪರಿಶುದ್ಧವೂ ಆಗಿದೆ. ಅಲ್ಲಾಹನು ತಿಳಿದವನಾಗಿದ್ದಾನೆ; ನೀವು ತಿಳಿದವರಲ್ಲ." (2:233)

"ವಿವಾಹ ವಿಚ್ಛೇದಿತರಾದ ಸ್ತ್ರೀಯರು ಮೂರು ಬಾರಿ ಮುಟ್ಟಾಗುವವರೆಗೆ ತಮ್ಮನ್ನು ತಡೆದುಕೊಳ್ಳಬೇಕಾಗಿದೆ. ಅವರು ಅಲ್ಲಾಹನಲ್ಲಿ ಮತ್ತು ಅಂತ್ಯದಿನದ ಬಗ್ಗೆ ವಿಶ್ವಾಸವುಳ್ಳವರಾದರೆ, (ಅವರು ತಿಳಿದುಕೊಳ್ಳಲಿ) ಅವರ ಗರ್ಭಾಶಯಗಳಲ್ಲಿ ಅಲ್ಲಾಹು ಸೃಷ್ಟಿಸಿರುವುದನ್ನು ಬಚ್ಚಿಡುವುದು ಅವರಿಗೆ ಧರ್ಮಸಮ್ಮತವಲ್ಲ. ಅವರ ಪತಿಯಂದಿರು ಹೊಂದಾಣಿಕೆಯನ್ನು ಬಯಸುವರಾದರೆ ಆ ಕಾಲಾವಧಿಯಲ್ಲಿ ಅವರನ್ನು ಮರಳಿ ಪಡೆಯುವ ಹೆಚ್ಚಿನ ಹಕ್ಕು ಅವರಿಗಿದೆ." (2:229)

ರದ್ದುಗೊಳಿಸಬಹುದಾದ ತಲಾಖ್ ಘೋಷಣೆ ನಂತರ ಪರಸ್ಪರ ಒಗ್ಗೂಡಲು ಬಯಸುವುದಾದರೆ ತಲಾಖ್ ಹೇಳಿದುದು ಸಂಪೂರ್ಣವಾಗಿ ರದ್ದುಗೊಳಿಸುದುದಾಗಿ ಎಂದು ಪರಿಗಣಿಸ ಲಾಗುವುದು ಎಂದು ಪವಿತ್ರ ಖುರ್‌ಆನ್ ಅಧ್ಯಾಯ 2 ವಚನ 229 ಸೂಚಿಸುತ್ತದೆ.

ವಿಧವೆಯರಿಗೆ ಸಂಬಂಧಿಸಿ ಪವಿತ್ರ ಖುರ್‌ಆನ್ ಹೀಗೆ ವಿಧಿಸುತ್ತದೆ:

"ನಿಮ್ಮ ಪೈಕಿ ಮೃತಪಟ್ಟವರು ಅಗಲಿ ಹೋದ ಪತ್ನಿಯರು, ನಾಲ್ಕು ಮಾಸ ಮತ್ತು ಹತ್ತು ದಿನಗಳ ಕಾಲ ತಮ್ಮನ್ನು ತಡೆದಿಟ್ಟುಕೊಳ್ಳಬೇಕಾಗಿದೆ. ಅವರು ಆ ಕಾಲಾವಧಿಯನ್ನು ಪೂರ್ಣಗೊಳಿಸಿದ ಬಳಿಕ ತಮ್ಮ ಬಗ್ಗೆ ಯಥೋಚಿತವಾದ ರೀತಿಯಲ್ಲಿ ನಡೆದುಕೊಳ್ಳುವುದಾದರೆ, ನಿಮ್ಮ ಮೇಲೆ ಪಾಪವೇನೂ ಇಲ್ಲ. ನೀವು ಮಾಡುವುದನ್ನೆಲ್ಲ ಅಲ್ಲಾಹನು ತಿಳಿಯುತ್ತಾನೆ." (2:235)

"(ಅಂತಹ) ಸ್ತ್ರೀಯರನ್ನು ವಿವಾಹವಾಗುವುದರ ಬಗ್ಗೆ ನೀವು ಸೂಚನೆ ನೀಡಿದ್ದಲ್ಲಿ ಅಥವಾ (ಆ ವಿಚಾರವನ್ನು) ನಿಮ್ಮ ಮನಸ್ಸಿನಲ್ಲಿ ಬಚ್ಚಿಡುವುದರಲ್ಲಿ ನಿಮ್ಮ ಮೇಲೆ ಪಾಪವೇನೂ ಇಲ್ಲ. ನಿಮಗೆ ಅವರ ಬಗ್ಗೆ ನೆನಪಾಗುವುದೆಂದು ಅಲ್ಲಾಹನು ಬಲ್ಲನು. ಆದರೆ ನೀವು ಶಿಷ್ಟತೆಯಿಂದ ಅವರೊಡನೆ ಮಾತಾಡಬೇಕು ಹೊರತು ರಹಸ್ಯ ಒಪ್ಪಂದ ಮಾಡಬಾರದು. ('ಇದ್ದಃ'ದ) ನಿರ್ದಿಷ್ಟಾವಧಿ ಮುಗಿಯುವ ತನಕ ನೀವು ವಿವಾಹ ಸಂಬಂಧವನ್ನು ದೃಢಪಡಿಸಲೂಬಾರದು. ನಿಮ್ಮ ಹೃದಯಗಳಲ್ಲಿರುವುದನ್ನು ಅಲ್ಲಾಹನು ಅರಿಯುತ್ತಾನೆಂದು ತಿಳಿದುಕೊಳ್ಳಿರಿ; ಆದ್ದರಿಂದ ನೀವು ಅವನ ಭಯವಿರಿಸಿಕೊಳ್ಳಿರಿ. ಅಲ್ಲಾಹನು ಅತ್ಯಂತ ಕ್ಷಮಾಶೀಲನೂ ಸಹನಶೀಲನೂ ಆಗಿದ್ದಾನೆಂದು ಸಹ ತಿಳಿದುಕೊಳ್ಳಿರಿ." (2:236)

"ನಿಮ್ಮ ಪೈಕಿ ಮೃತಪಟ್ಟು ಪತ್ನಿಯರಿಂದ ಅಗಲುವವರು, ತಮ್ಮ ಪತ್ನಿಯಂದಿರನ್ನು ಮನೆಯಿಂದ ಹೊರಹಾಕದೆ ಒಂದು ವರ್ಷಕಾಲ ಜೀವನಾಂಶ ಕೊಡಬೇಕಾಗಿ 'ವಸಿಯ್ಯತ್' (ಮರಣಶಾಸನ) ಮಾಡಬೇಕು. ಆದರೆ ಅವರು ತಾವಾಗಿಯೇ ಹೊರಟು ಹೋಗುವುದಾದರೆ, ತಮ್ಮ ಕುರಿತು ಅವರು ನ್ಯಾಯೋಚಿತ ವಾಗಿ ಏನು ಮಾಡಿದರೂ ಅದರಲ್ಲಿ ನಿಮಗೆ ಪಾಪವಿಲ್ಲ. ಅಲ್ಲಾಹನು ಪ್ರತಾಪಶಾಲಿಯೂ ಬುದ್ಧಿವಂತನೂ ಆಗಿದ್ದಾನೆ." (2:241)

ವಿವಾಹ ವಿಚ್ಛೇದನೆಗೆ ಸಂಬಂಧಿಸಿ ಖುರ್‌ಆನಿನ ಇತರ

ಆದೇಶಗಳು ಹೀಗಿವೆ:

*"ವಿವಾಹ ವಿಚ್ಛೇದಿತ ಸ್ತ್ರೀಯರಿಗೂ ನ್ಯಾಯೋಚಿತವಾಗಿ ಏನಾದರೂ ಪರಿಹಾರ ನೀಡಬೇಕಾಗಿದೆ. (ಇದು) ಭಯಭಕ್ತಿ ತೋರಿಸುವವರ ಮೇಲೆ ಹೊಣೆಗಾರಿಕೆಯಾಗಿದೆ." (2:242)*

*"ನೀವು ಸ್ತ್ರೀಯರನ್ನು (ಮದುವೆಯಾಗಿ) ಸ್ಪರ್ಶಿಸದ ಸ್ಥಿತಿಯಲ್ಲಿ ಅಥವಾ ವಿವಾಹಧನ(ಮಹರ್)ವಾಗಿ ಏನನ್ನೂ ನಿಶ್ಚಯಿಸದ ಸ್ಥಿತಿಯಲ್ಲಿ ವಿವಾಹ ವಿಚ್ಛೇದ ಮಾಡುವುದಾದರೆ ನಿಮ್ಮ ಮೇಲೆ ಪಾಪವೇನೂ ಇಲ್ಲ. ಆದರೆ (ಈ ಸ್ಥಿತಿಯಲ್ಲಿ) ನೀವು ಅವರಿಗೆ ಏನಾದರೂ ಪರಿಹಾರ ನೀಡಬೇಕಾಗಿದೆ-ಧನಿಕನು ಅವನ ಶಕ್ತ್ಯಾನುಸಾರ ಮತ್ತು ದರಿದ್ರನು ಅವನ ಶಕ್ತ್ಯಾನುಸಾರ-ಯಥೋಚಿತವಾಗಿ. ಇದು ಸದ್ಧರ್ಮಿಗಳ ಹೊಣೆಯಾಗಿದೆ." (2:237)*

*"ನೀವು ಅವರಿಗೆ ವಿವಾಹಧನ ನಿಶ್ಚಯಿಸಿದ್ದು, ಅವರನ್ನು ಸ್ಪರ್ಶಿಸುವುದಕ್ಕಿಂತ ಮುಂಚೆ ವಿವಾಹ ವಿಚ್ಛೇದ ಮಾಡುವುದಾದರೆ, ನೀವು ನಿಶ್ಚಯಿಸಿದ್ದರ ಅರ್ಧದಷ್ಟನ್ನು ಅವರಿಗೆ ಕೊಡಬೇಕಾಗಿದೆ-ಅವರು ಬಿಟ್ಟು ಬಿಡುವುದಾದರೆ ಅಥವಾ ವಿವಾಹ ಬಂಧದ ಅಧಿಕಾರ ಯಾರ ಕೈಯಲ್ಲಿದೆಯೋ ಆತನು ರಿಯಾಯಿತಿ ಮಾಡುವುದಾದರೆ ಹೊರತು. ನೀವು ರಿಯಾಯಿತಿ ತೋರಿಸುವುದು ದೇವಭಕ್ತಿಗೆ ಅತಿ ಸಮೀಪದ್ದಾಗಿದೆ. ನೀವು ಪರಸ್ಪರ ಔದಾರ್ಯ ತೋರಿಸುವುದನ್ನು ಮರೆಯಬಾರದು. ಖಂಡಿತವಾಗಿಯೂ ನೀವು ಮಾಡುವುದನ್ನೆಲ್ಲ ಅಲ್ಲಾಹನು ಕಾಣುತ್ತಾನೆ." (2:238)*

ಮಗುವಿಗೆ ತಾಯಿ ಹಾಲೂಡಿಸುವ ಬಗ್ಗೆ ಖುರ್‌ಆನ್ ಹೀಗೆ ಹೇಳುತ್ತದೆ:

*"ತಾಯಂದಿರು ತಮ್ಮ ಶಿಶುಗಳಿಗೆ ಪೂರ್ಣವಾಗಿ ಎರಡು ವರ್ಷಗಳ ಕಾಲ ಮೊಲೆಯುಣ್ಣಿಸಬೇಕಾಗಿದೆ. ಇದು (ನಿಶ್ಚಿತ ಕಾಲದವರೆಗೆ) ಸ್ತನ್ಯಪಾನವನ್ನು ಪೂರ್ಣಗೊಳಿಸಲು ಬಯಸುವವರಿಗೆ (ಆದೇಶವಾಗಿದೆ). ನ್ಯಾಯೋಚಿತವಾಗಿ ಅವರಿಗೆ (ಮೊಲೆಯುಣ್ಣಿಸುವ ತಾಯಂದಿರಿಗೆ) ಆಹಾರ ಮತ್ತು ಉಡುಗೆ ತೊಡುಗೆ ನೀಡಬೇಕಾದುದು ಆ ಮಗುವಿನ ತಂದೆಯ ಹೊಣೆಯಾಗಿದೆ. ಯಾವ ಆತ್ಮಕ್ಕೂ ಅದರ ಶಕ್ತಿಗೆ ಮೀರಿ ಹೊಣೆ ಹೊರಿಸಲಾಗುವುದಿಲ್ಲ. ತಾಯಿಯನ್ನು ಅವಳ ಮಗುವಿನ ಕಾರಣದಿಂದ ಪೀಡಿಸಬಾರದು. ತಂದೆಯನ್ನು ಸಹ ಅವನ ಮಗುವಿನ ಕಾರಣದಿಂದ ಪೀಡಿಸಬಾರದು. ವಾರೀಸುದಾರರಿಗೂ ಇದೇ ರೀತಿಯ ಹೊಣೆಗಾರಿಕೆ ಇದೆ. ಇನ್ನು ಈರ್ವರೂ (ತಾಯಿ ಮತ್ತು ತಂದೆ) ಪರಸ್ಪರ ಪರ್ಯಾಲೋಚನೆ ಮಾಡಿ ಒಪ್ಪಿಕೊಂಡು ಮಗುವಿನ ಮೊಲೆ ಹಾಲು ಬಿಡಿಸಲು ಬಯಸುವುದಾದರೆ ಅವರ ಮೇಲೆ ಪಾಪವೇನೂ ಇಲ್ಲ. ನೀವು ನಿಮ್ಮ ಶಿಶುಗಳಿಗೆ (ಬೇರೆ ಸ್ತ್ರೀಯರಿಂದ) ಮೊಲೆಯುಣ್ಣಿಸಲು ಇಚ್ಛಿಸುವುದಾದರೆ, ಅದರಲ್ಲೂ ನಿಮ್ಮ ಮೇಲೆ ಪಾಪವಿಲ್ಲ -ನೀವು (ಪ್ರತಿಫಲವಾಗಿ) ನಿಶ್ಚಯಿಸಿರುವುದನ್ನು ಯಥಾಕ್ರಮ ಕೊಡುವುದಾದರೆ. ಅಲ್ಲಾಹನ ಭಯವಿರಿಸಿಕೊಳ್ಳಿರಿ. ನೀವು ಮಾಡುವುದನ್ನೆಲ್ಲಾ ಅಲ್ಲಾಹನು ಚೆನ್ನಾಗಿ ಕಾಣುತ್ತಾನೆಂದು ತಿಳಿದುಕೊಳ್ಳಿರಿ." (2:234)*

ವಿವಾಹ ವಿಚ್ಛೇದನಕ್ಕೆ ಸಂಬಂಧಿಸಿ ಸಂಕ್ಷೇಪವಾಗಿ ಖುರ್‌ಆನ್‌ನಲ್ಲಿ ಹೀಗೆ ಹೇಳಲಾಗಿದೆ:

*"ಓ ಪ್ರವಾದಿ, ನೀವು ಸ್ತ್ರೀಯರ ವಿವಾಹ ವಿಚ್ಛೇದನೆ ಮಾಡುವಾಗ ಅವರ 'ಇದ್ದತ್' (ನಿಶ್ಚಿತ ಕಾಲಾವಧಿ) ಸಮಯವನ್ನನುಸರಿಸಿ ವಿವಾಹ ವಿಚ್ಛೇದನೆ ಮಾಡಿರಿ ಹಾಗೂ ಇದ್ದತನ್ನು ಲೆಕ್ಕ ಹಾಕಿರಿ. ನಿಮ್ಮ ಪ್ರಭುವಾದ ಅಲ್ಲಾಹನಿಗೆ ಭಯಪಡಿರಿ. ಅವರ ಮನೆಗಳಿಂದ ನೀವು ಅವರನ್ನು ಹೊರಕಟ್ಟಬಾರದು. ಅವರು ಸ್ವಯಂ ಹೊರಟು ಹೋಗಲೂ ಬಾರದು – ಸ್ಪಷ್ಟವಾದ ಕೆಟ್ಟ ಕೆಲಸ ಮಾಡಿದ ಹೊರತು. ಇವೆಲ್ಲ ಅಲ್ಲಾಹನು ನಿಶ್ಚಯಿಸಿದ ಹದ್ದುಬಸ್ತುಗಳಾಗಿವೆ. ಯಾವನು ಅಲ್ಲಾಹನು ನಿಶ್ಚಯಿಸಿದ ಹದ್ದುಬಸ್ತುಗಳನ್ನು ಮೀರುತ್ತಾನೋ ಅವನು ತನ್ನ ಆತ್ಮಕ್ಕೆ ಹಾನಿ ಎಸಗುತ್ತಾನೆ. ನಿನಗೆ ತಿಳಿಯದು, ಅನಂತರ ಅಲ್ಲಾಹನು ಹೊಸತಾದ ಏನಾದರೂ ಸಂಭವಿಸುವಂತೆ ಮಾಡಲೂಬಹುದು." (65:2)*

*"ಹಾಗೆ ಅವರ ಗಡುವು (ನಿಶ್ಚಿತ ಕಾಲಾವಧಿ) ಸಮೀಪಿಸಿದರೆ ಒಳ್ಳೆಯ ರೀತಿಯಲ್ಲಿ ಅವರನ್ನು ತಮ್ಮೊಂದಿಗೆ ಇರಿಸಿಕೊಳ್ಳಿರಿ; ಅಥವಾ ಒಳ್ಳೆಯ ರೀತಿಯಲ್ಲಿ ಅವರಿಂದ ಅಗಲಿರಿ. ಹಾಗೂ ನಿಮ್ಮ ಪೈಕಿಯ ಇಬ್ಬರು ನೀತಿವಂತರನ್ನು ಸಾಕ್ಷಿಗಳನ್ನಾಗಿ ಮಾಡಿರಿ. (ಓ ಸಾಕ್ಷಿಗಳೇ,) ನೀವು ಅಲ್ಲಾಹನಿಗೋಸ್ಕರ ಸಾಕ್ಷ್ಯನೀಡಿರಿ. ಇದು ಅಲ್ಲಾಹನಲ್ಲಿ ಮತ್ತು ಅಂತ್ಯದಿನದ ಬಗ್ಗೆ ನಂಬಿಕೆಯಿಡುವವನಿಗೆ ನೀಡಲಾಗುವ ಉಪದೇಶವಾಗಿದೆ. ಯಾರಾದರೂ ಅಲ್ಲಾಹನ ಭಯಭಕ್ತಿ ಹೊಂದಿದ್ದರೆ ಅವನಿಗೆ ಅಲ್ಲಾಹನು (ಸಂಕಷ್ಟಗಳಿಂದ) ಪಾರಾಗುವ ಮಾರ್ಗವನ್ನು ತೋರಿಸಿಕೊಡುವನು." (65:3)*

*"ನಿಮ್ಮ ಸ್ತ್ರೀಯರಲ್ಲಿ (ಪ್ರಾಯಾಧಿಕ್ಯದ ಕಾರಣ) ಋತುಸ್ರಾವದ ಬಗ್ಗೆ ನಿರೀಕ್ಷೆ ಇಲ್ಲದವರ ಕುರಿತು, ನಿಮಗೆ ಸಂಶಯವಿದ್ದರೆ ಅವರ 'ಇದ್ದತ್' ಮೂರು ಮಾಸವಾಗಿದೆ. ಋತುಸ್ರಾವವಾಗದಿರುವ ಸ್ತ್ರೀಯರಿಗೂ (ಇದು ಅನ್ವಯಿಸುತ್ತದೆ). ಗರ್ಭಿಣಿ ಸ್ತ್ರೀಯರಾದರೆ ಹೆರುವ ತನಕ ಗಡುವು (ಇದ್ದತ್ ಕಾಲ) ಆಗಿದೆ. ಯಾವನಾದರೂ ಅಲ್ಲಾಹನ ಭಯಭಕ್ತಿ ಹೊಂದಿದ್ದರೆ ಅಲ್ಲಾಹನು ಅವನ ಕಾರ್ಯದಲ್ಲಿ ಸೌಲಭ್ಯ ಉಂಟುಮಾಡಿಕೊಡುತ್ತಾನೆ." (65:5)*

*"ಅವರನ್ನು (ವಿವಾಹ ವಿಚ್ಛೇದಿತ ಸ್ತ್ರೀಯರನ್ನು ಅವರ 'ಇದ್ದತ್' ಕಾಲದಲ್ಲಿ) ನಿಮ್ಮ ಶಕ್ತ್ಯಾನುಸಾರವುಳ್ಳ ನಿಮ್ಮ ವಾಸಸ್ಥಳಗಳಲ್ಲಿ ವಾಸಮಾಡಲು ಬಿಡಿರಿ. ಅವರನ್ನು ಕಷ್ಟಕ್ಕೊಳಪಡಿಸುವ ಉದ್ದೇಶದಿಂದ ನೀವು ಅವರನ್ನು ಪೀಡಿಸಬಾರದು. ಅವರು ಗರ್ಭಿಣಿಯಾಗಿದ್ದರೆ, ಹೆರುವ ತನಕ ಅವರಿಗೆ ಖರ್ಚು ಕೊಡಿರಿ. ಅನಂತರ ನಿಮಗೋಸ್ಕರ ಅವರು (ಮಗುವಿಗೆ) ಮೊಲೆಯುಣ್ಣಿಸಿದರೆ, ನೀವು ಅವರಿಗೆ ಅವರ ಪ್ರತಿಫಲ ನೀಡಿರಿ. ಯಥೋಚಿತವಾಗಿ ನೀವು ಪರಸ್ಪರ ಸಮಾಲೋಚನೆ ಮಾಡಿ ತೀರ್ಮಾನಿಸಿರಿ. ಅದರಲ್ಲಿ ನಿಮಗೆ ಪರಸ್ಪರ ತೊಂದರೆಯುಂಟಾದರೆ ಅವನಿಗಾಗಿ (ತಂದೆಗಾಗಿ) ಮಗುವಿಗೆ ಬೇರೊಬ್ಬ ಸ್ತ್ರೀ ಮೊಲೆಯುಣ್ಣಿಸಲಿ."*

*"ಧನಿಕನು ತನ್ನ ಶಕ್ತ್ಯಾನುಸಾರ ವೆಚ್ಚ ಮಾಡಲಿ.*

*ಯಾವನಿಗಾದರೂ ಜೀವನೋಪಾಯ ಅಡಚಣೆಯಿಂದ ಕೂಡಿದ್ದರೆ ಅಲ್ಲಾಹನು ಅವನಿಗೆ ಒದಗಿಸಿಕೊಟ್ಟುದರಿಂದ (ಶಕ್ತ್ಯಾನುಸಾರ) ಅವನು ವೆಚ್ಚ ಮಾಡಲಿ. ಅಲ್ಲಾಹನು ಒದಗಿಸಿದ್ದಕ್ಕೆ ಅನುಸಾರವಾಗಿ ವರ್ತಿಸಬೇಕಲ್ಲದೆ ಯಾರ ಮೇಲೆಯೂ ಹೆಚ್ಚಿನ ಭಾರವನ್ನು ಅವನು ಹೊರಿಸುವುದಿಲ್ಲ. ಸಂಕಷ್ಟದ ಬಳಿಕ ಶೀಘ್ರವಾಗಿಯೇ ಅಲ್ಲಾಹನು ಸುಖವನ್ನು ದಯಪಾಲಿಸುವನು." (65:7, 8)*

## ಬಹುಭಾರ್ಯತ್ವ

ಬಹುಭಾರ್ಯತ್ವವನ್ನು ಯಾವುದೇ ಧರ್ಮದಲ್ಲಿ ದೇವನಿರ್ದೇಶ ಪ್ರಕಾರ ನಿಷಿದ್ಧಗೊಳಿಸಿಲ್ಲವಾದರೂ ಇಸ್ಲಾಮ್ ಹೊರತು ಬೇರೆ ಯಾವುದೇ ಧರ್ಮ ಪತ್ನಿಯರ ಸಂಖ್ಯೆಯನ್ನು ಸೀಮಿತಗೊಳಿಸಿಲ್ಲ. ಇಸ್ಲಾಮ್ ಬಹುಭಾರ್ಯತ್ವವನ್ನು ಅನುಮತಿಸಿ ಪತ್ನಿಯರ ಸಂಖ್ಯೆಯನ್ನು ನಾಲ್ಕಕ್ಕೆ ನಿಯಂತ್ರಿಸಿದೆ. ಈ ಅನುಮತಿಯನ್ನು ಪತ್ನಿಯರ ಜೊತೆ ನ್ಯಾಯಪೂರ್ಣವಾಗಿ ವರ್ತಿಸಬೇಕೆಂಬ ನಿಬಂಧನೆಗೊಳಪಡಿಸಿ ನೀಡಿದೆ. ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

*"ಆದರೆ ನ್ಯಾಯಪಾಲಿಸಲಾರಿರೆಂದು ನಿಮಗೆ ಭಯವಿದ್ದರೆ ಒಬ್ಬಳನ್ನು (ಮಾತ್ರ ವಿವಾಹವಾಗಿರಿ.)" (4:4)*

ಒಬ್ಬಳಿಗಿಂತ ಹೆಚ್ಚು ಪತ್ನಿಯರಿರುವಾಗ ಅವರ ಮಧ್ಯೆ ನ್ಯಾಯಪಾಲಿಸಬೇಕೆಂಬುದರ ಅರ್ಥವೇನೆಂದರೆ, ಅವರಿಗೆ ನೀಡುವ ಖರ್ಚು, ಅವರಿಗೆ ನೀಡುವ ಸಾಮಗ್ರಿಗಳು ಮತ್ತು ಅವರೊಂದಿಗೆ ಸಹವಾಸ ಇವುಗಳು ಸರಿಸಮಾನವಾಗಿರಬೇಕು. ಆದರೆ ಮನುಷ್ಯನ ನಿಯಂತ್ರಣಕ್ಕೊಳಗಾಗದ ವಿಷಯಗಳಲ್ಲಿ ಎಂದರೆ ಭಾವೋದ್ವೇಗಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಸಮಾನತೆಯನ್ನು ಆದೇಶೀಸಿಲ್ಲ.

*"ಅಲ್ಲಾಹನು ಯಾರಿಗೂ ಅವನ ಶಕ್ತಿಗೆ ಮೀರಿದ ಹೊಣೆಗಾರಿಕೆಯನ್ನು ಹೊರಿಸುವುದಿಲ್ಲ." (ಪವಿತ್ರ ಖುರ್‌ಆನ್ 2:287)*

ಆದರೆ ಒಂದು ಸ್ಪಷ್ಟ ವಿವರಣೆ ಸಹ ಇದೆ:

*"ನೀವು ಎಷ್ಟೇ ಬಯಸಿದರೂ ಪತ್ನಿಯರ ಮಧ್ಯೆ ನಿಮಗೆ ಸಮತೋಲನ ಪಾಲಿಸಲು ಸಾಧ್ಯವಿಲ್ಲ. ಅಂತೂ ನೀವು (ಒಬ್ಬಳ ಕಡೆಗೆ) ಸಂಪೂರ್ಣವಾಗಿ ವಾಲಿಕೊಂಡಿರಬಾರದು. (ಅದರ ಪರಿಣಾವಾಗಿ) ಮತ್ತೊಬ್ಬಳನ್ನು ನೀವು ಜೋಲಾಡುವ ಸ್ಥಿತಿಯಲ್ಲಿ ಬಿಟ್ಟಂತಾಗುವುದು. ನೀವು ಪರಸ್ಪರ ಒಪ್ಪಂದ ಮಾಡಿಕೊಂಡು ದೇವಭಯವನ್ನಿರಿಸಿಕೊಂಡರೆ (ನೆನಪಿಟ್ಟುಕೊಳ್ಳಿರಿ) ಖಂಡಿತ ವಾಗಿಯೂ ಅಲ್ಲಾಹನು ಅತ್ಯಂತ ಕ್ಷಮಿಸುವವನೂ ಕಾರುಣ್ಯನಿಧಿಯೂ ಆಗಿದ್ದಾನೆ." (ಪವಿತ್ರ ಖುರ್‌ಆನ್ 4:130)*

ಕೆಲವು ಆಧುನಿಕ ಮುಸ್ಲಿಮ್ ಲೇಖಕರು ಕಳವಳದಿಂದೂ ಪಾಶ್ಚಾತ್ಯರನ್ನು ಮೆಚ್ಚಿಸುವ ಅಭಿಲಾಷೆಯಿಂದಲೂ ಹೀಗೆ ವಾದಿಸಲು ಪ್ರಯತ್ನಿಸುತ್ತಾರೆ: ಪವಿತ್ರ ಖುರ್‌ಆನ್ ಅಧ್ಯಾಯ 4 ವಚನ 4ರಲ್ಲಿ ಬಹುಭಾರ್ಯತ್ವವನ್ನು ಅನುಮತಿಸಿರುವುದು ಪತ್ನಿಯರನ್ನು ಸಮಾನವಾಗಿ ಕಂಡು ಅವರೊಂದಿಗೆ ಆರೀತಿ ವರ್ತಿಸಬೇಕೆಂಬ ನಿಬಂಧನೆಯೊಂದಿಗೆ ಆಗಿದೆ. ಆದರೆ ಪವಿತ್ರ ಖುರ್‌ಆನ್ ಅಧ್ಯಾಯ 4 ವಚನ 130ರ ಪ್ರಕಾರ ಇದು ಅಸಾಧ್ಯವಾಗಿದೆ. ಆದುದರಿಂದ ಈ ವಚನ ಮೂಲಕ ಬಹುಭಾರ್ಯತ್ವದ ಅನುಮತಿಯನ್ನು ರದ್ದುಗೊಳಿಸಲಾಗಿದೆ.

ಈ ರೀತಿಯ ವ್ಯಾಖ್ಯಾನ ತಪ್ಪಾಗಿದ್ದು ಸಂಪೂರ್ಣವಾಗಿ ಅಸ್ವೀಕಾರಾರ್ಹವಾಗಿದೆ. ಪವಿತ್ರ ಖುರ್‌ಆನಿನ ಅಧ್ಯಾಯ 4 ವಚನ 130 ಬಹುಭಾರ್ಯತ್ವದ ಮುಂದುವರಿಕೆಯನ್ನು ಪ್ರಸ್ತಾಪಿಸುತ್ತದೆ. ಇನ್ನೊಂದು ಮುಖ್ಯ ವಿಷಯವೇನೆಂದರೆ, ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಅಥವಾ ಅವರ ಶಿಷ್ಯರು ಈ ವಚನವು ಬಹುಭಾರ್ಯತ್ವದ ಅನುಮತಿ ನೀಡುವ ಅಧ್ಯಾಯ 4 ವಚನ 4ನ್ನು ರದ್ದುಗೊಳಿಸುತ್ತದೆಂದು ವ್ಯಾಖ್ಯಾನಿಸಿರಲಿಲ್ಲ. ಕಳೆದ ಅನೇಕ ಶತಮಾನಗಳಲ್ಲಿ ಯಾವ ಮುಸ್ಲಿಮ್ ನ್ಯಾಯಶಾಸ್ತ್ರ ಪಂಡಿತರೂ ಎಂದೂ ಈ ರೀತಿಯ ವ್ಯಾಖ್ಯಾನ ಮಾಡಿಲ್ಲ.

ವಾಸ್ತವಿಕ ವಿಷಯವೇನೆಂದರೆ, ಇಸ್ಲಾಮ್ ಪ್ರತಿಪಾದಿಸುವ ಮತ್ತು ನಿಯಂತ್ರಣಗೊಳಿಸಿರುವ ಬಹುಭಾರ್ಯತ್ವವು ನೈತಿಕ ಮೌಲ್ಯಗಳನ್ನು ಬೆಳೆಸಲು ಹಾಗೂ ಪುರುಷರ ಮತ್ತು ಮಹಿಳೆಯರ ಚಾರಿತ್ರ್ಯವನ್ನು ಕಾಪಾಡಲು ಉನ್ನತ ವಿವೇಕವು ಸ್ಥಾಪಿಸಿದ ವ್ಯವಸ್ಥೆಯಾಗಿದೆ. ಅದನ್ನು ನೈತಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಕಾಪಾಡುವ ಹಿತಕಾರಿಯಾದ ಒಂದು ರಕ್ಷಾ ಕವಾಟವೆಂದು ಹೇಳಬಹುದು. ಇಂತಹ ರಕ್ಷಕ ಕವಾಟವಿಲ್ಲದ ಸಮಾಜಗಳು ಏಕಭಾರ್ಯತ್ವವನ್ನು ಕಟ್ಟುನಿಟ್ಟಿನಿಂದ ಜಾರಿಗೊಳಿಸಲು ಪ್ರಯತ್ನಿಸುವುದರಿಂದ ಆ ಸಮಾಜಗಳು ಸ್ವಚ್ಛಂದ ಸಂಭೋಗ, ಪುರುಷ ಮತ್ತು ಮಹಿಳೆಯ ಸಲಿಂಗರತಿ, ಮೃಗೀಯ ಲೈಂಗಿಕ ವಿಕೃತಿಗಳಿಂದ ಹರಿದು ಹಂಚಾಗಿವೆ. ನಿಯಂತ್ರಣ ರಹಿತ ಲೈಂಗಿಕ ಲೋಲುಪತೆ ಇಂತಹ ಸಮಾಜದಲ್ಲಿ ಸಾಮಾನ್ಯವಾಗಿದ್ದು ಅವುಗಳ ಬಗ್ಗೆ ನೈತಿಕ ನಿಂದನೆ ಕೂಡ ಇಲ್ಲದಾಗಿದೆ.

ನೈತಿಕತೆಯು ಏಕಪತ್ನೀತ್ವ ಮತ್ತು ಬಹುಭಾರ್ಯತ್ವದ ವಿಭಿನ್ನತೆಯಲ್ಲಿ ಅಡಕವಾಗಿಲ್ಲ. ನಿಯಂತ್ರಣ ಮತ್ತು ಸ್ವೇಚ್ಛಾಚಾರದ ಮಧ್ಯದಲ್ಲಿ ನೈತಿಕತೆ ಇರುತ್ತದೆ. ನೈತಿಕ ನಿಯಂತ್ರಣವಿಲ್ಲದಿದ್ದರೆ ಏಕಪತ್ನೀತ್ವ ಮತ್ತು ಬಹುಭಾರ್ಯತ್ವ ಇವುಗಳೆರಡನ್ನೂ ದುರುಪಯೋಗಿಸಬಹುದು. ಸಂಬಂಧಗಳ ಸ್ವಭಾವವು ಸಂಬಂಧವನ್ನು ಉನ್ನತಿಗೇರಿಸುತ್ತದೆ ಅಥವಾ ಅವನತಿಗಿಳಿಸುತ್ತದೆ. ಇದರ ಮೊದಲು ಹೇಳಿದ ಹಾಗೆ ಇಸ್ಲಾಮ್ ಧರ್ಮದಲ್ಲಿ ವಿವಾಹದ ಅಂತಿಮ ಗುರಿ ಅಲ್ಲಾಹನ ಸಂಪ್ರೀತಿ ಗಳಿಸುವುದಾಗಿದೆ.

ಮನುಷ್ಯನ ಸಹಜ ಗುಣಗಳನ್ನು ವಿವೇಕಭರಿತ ರೀತಿಯಲ್ಲಿ ನಿಯಂತ್ರಿಸಿ ಹಿತಕರವಾಗಿ ಬಳಸಲು ಇಸ್ಲಾಮ್ ಧರ್ಮವು ಪ್ರೋತ್ಸಾಹಿಸುತ್ತದೆ. ಈ ಸಹಜಗುಣಗಳನ್ನು ಅದುಮಿ ಹಾಕುವುದು ಮತ್ತು ಅವುಗಳನ್ನು ನಿಷ್ಫಲಗೊಳಿಸುವುದನ್ನು ಇಸ್ಲಾಮ್ ವಿರೋಧಿಸಿ ನಿಷಿದ್ಧಗೊಳಿಸುತ್ತದೆ.

ಇಸ್ಲಾಮ್ ಧರ್ಮದ ಆರಂಭದ ಕಾಲಘಟ್ಟದಲ್ಲಿ ಅಲ್ಲಾಹನ ಕರೆಗೆ ಉತ್ತರ ನೀಡಿ ಹೆಚ್ಚಾಗಿ ಪುರುಷರು ತಮ್ಮ ಜೀವಗಳನ್ನು

ಅರ್ಪಿಸಿದರು. ಅನೇಕರು ಮಕ್ಕದಲ್ಲಿ ತಮ್ಮ ಜೀವಗಳನ್ನು ಅರ್ಪಿಸಿದರು. ಮದೀನದಲ್ಲೂ ಬೇರೆ ಸ್ಥಳಗಳಲ್ಲಿ ಯುದ್ಧದಲ್ಲೂ ಇನ್ನೂ ಹೆಚ್ಚಿಗೆ ಜನರು ಜೀವಾರ್ಪಣೆ ಮಾಡಿದರು. ಹೀಗೆ ಜೀವಾರ್ಪಣೆ ಮಾಡಿದವರಲ್ಲಿ ಮಹಿಳೆಯರು ಇರಲಿಲ್ಲವೆಂದು ಹೇಳಲಿಕ್ಕೆ ಸಾಧ್ಯವಿಲ್ಲವಾದರೂ ಪುರುಷರೊಂದಿಗೆ ಹೋಲಿಸಿ ನೋಡುವಾಗ ಜೀವಾರ್ಪಣೆ ಮಾಡಿದ ಮಹಿಳೆಯರ ಸಂಖ್ಯೆ ಕಡಿಮೆಯಾಗಿತ್ತು. ಈ ಕಾರಣಗಳಿಂದ ಆ ಕಾಲದ ಮುಸ್ಲಿಮರ ಜನಸಂಖ್ಯೆಯಲ್ಲಿ ಪುರುಷರಿಗಿಂತ ಮಹಿಳೆಯರ ಸಂಖ್ಯೆ ಬಹುಬೇಗನೆ ಹೆಚ್ಚಾಯಿತು. ವಿಧವೆಯರಿಗೂ ಹೆಣ್ಣು ಮತ್ತು ಗಂಡು ಅನಾಥರಿಗೂ ಪಾಲನೆಯ ವ್ಯವಸ್ಥೆ ಮಾಡಲಿಕ್ಕಿತ್ತು. ಇಂತಹ ಸನ್ನಿವೇಶದಲ್ಲಿ ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ಕಾಪಾಡಲು ಬಹುಭಾರ್ಯತ್ವವನ್ನು ಜಾರಿಗೊಳಿಸಿದುದು ಒಂದು ಕರ್ತವ್ಯವಾಗಿಯೂ ತ್ಯಾಗವಾಗಿಯೂ ಹೊರತು ಸುಖಾನುಭೂತಿ ಮಾರ್ಗವಾಗಿ ಖಂಡಿತ ಅಲ್ಲ.

ಆ ಕಾಲಘಟ್ಟದಲ್ಲಿ ಬಹುಭಾರ್ಯತ್ವವನ್ನು ಜಾರಿಗೊಳಿಸಿದುದಕ್ಕೆ ಬೇರೆ ವೈಯಕ್ತಿಕ, ಸಾಮಾಜಿಕ, ರಾಜಕೀಯ, ಧಾರ್ಮಿಕ ಕಾರಣಗಳು ಇದ್ದುವು. ಆಧುನಿಕ ಕಾಲದಲ್ಲಿ ಪರಿಸ್ಥಿತಿಗಳು ಬದಲಾಗಿವೆ ಮತ್ತು ಆಫ್ರಿಕಾ ಖಂಡದಲ್ಲಿ ಹೊರತು ಬೇರೆ ದೇಶಗಳಲ್ಲಿ ಏಕಪತ್ನೀತ್ವವು ಸರ್ವಸಾಧಾರಣವಾಗಿರುತ್ತದೆ. ಆದರೆ ಕೆಲವು ವೈಯಕ್ತಿಕ ಆವಶ್ಯಕತೆ ಮತ್ತು ನೈತಿಕ ಕಾರಣಗಳಿಂದ ಒಂದಕ್ಕಿಂತ ಹೆಚ್ಚು ಪತ್ನಿಯರನ್ನು ಹೊಂದುವ ಆವಶ್ಯಕತೆ ಎಲ್ಲಾ ಕಡೆಗಳಲ್ಲೂ ಉಂಟಾಗುತ್ತದೆ. ಇಂತಹ ಆವಶ್ಯಕತೆಗಳನ್ನು ಈಡೇರಿಸಲು ಇಸ್ಲಾಮ್ ಅನುಮತಿಸುತ್ತದೆ.

ಮುಸ್ಲಿಮರಲ್ಲಿ ಬಹುಭಾರ್ಯತ್ವಕ್ಕೆ ಯಾವುದೇ ಕಳಂಕವು ಆರೋಪಿಸಲ್ಪಡುವುದಿಲ್ಲ. ಏಕಪತ್ನೀತ್ವದ ಹಾಗೆಯೇ ಬಹುಭಾರ್ಯತ್ವವನ್ನು ಗೌರವಿಸಲಾಗುತ್ತಿದೆ. ಪತ್ನಿಯರ ಮತ್ತು ಮಕ್ಕಳ ಮಧ್ಯೆ ಯಾವುದೇ ತಾರತಮತೆ ಇರುವುದಿಲ್ಲ.

## ತಾಯಿ

ಇಸ್ಲಾಮ್ ತಾಯಿಗೆ ಬಹಳ ದೊಡ್ಡ ಗೌರವ ನೀಡುತ್ತದೆ. ತಂದೆ ತಾಯಂದಿರಿಗೆ ಮತ್ತು ವಿಶಿಷ್ಟವಾಗಿ ತಾಯಿಗೆ ತೋರಿಸಬೇಕಾದ ಪ್ರೀತಿ, ವಾತ್ಸಲ್ಯ ಮತ್ತು ಮೃದುವರ್ತನೆ ಬಗ್ಗೆ ಪವಿತ್ರ ಖುರ್‌ಆನ್ ಪದೇ ಪದೇ ಹೀಗೆ ಪ್ರತಿಪಾದಿಸುತ್ತದೆ:

*"ತನ್ನ ತಂದೆತಾಯರೊಂದಿಗೆ ಔದಾರ್ಯದಿಂದ ವರ್ತಿಸಬೇಕೆಂದು ನಾವು ಮನುಷ್ಯನಿಗೆ ಉಪದೇಶಿಸಿದ್ದೇವೆ." (29:9)*

*"(ಓ ಪ್ರವಾದಿ,) ಹೇಳು: "ಬನ್ನಿರಿ, ನಿಮ್ಮ ಪ್ರಭು ನೀವು ಉಲ್ಲಂಘಿಸಬಾರದೆಂದು ವಿಧಿಸಿದುದನ್ನು ನಾನು ನಿಮಗೆ ಹೇಳಿಕೊಡುವೆನು. ಅವನೊಂದಿಗೆ ನೀವು ಏನನ್ನೂ ಸಹಭಾಗಿಯಾಗಿ ಕಲ್ಪಿಸಬಾರದು. ಮಾತಾಪಿತರಿಗೆ ನೀವು ಒಳಿತನ್ನು ಮಾಡಿರಿ." (6:152)*

*"ನೀವು ಅಲ್ಲಾಹನನ್ನು ಆರಾಧಿಸಿರಿ. ಬೇರೇನನ್ನೂ ಅವನ ಸಹಭಾಗಿಯನ್ನಾಗಿ ಮಾತಾಡಬೇಡಿರಿ. ಮಾತಾಪಿತರಿಗೆ ಒಳಿತನ್ನು ಮಾಡಿರಿ." (4:37)*

*"ನಿನ್ನ ಪ್ರಭು ಆಜ್ಞಾಪಿಸುತ್ತಾನೆ: ಅವನ (ಅಲ್ಲಾಹನ) ಹೊರತು ಬೇರೆ ಯಾರನ್ನೂ ಆರಾಧಿಸಬೇಡ. ಮಾತಾಪಿತರೊಡನೆ ಉತ್ತಮವಾಗಿ ವರ್ತಿಸು. ಅವರಲ್ಲಿ ಒಬ್ಬರು ಅಥವಾ ಇಬ್ಬರು ಸಹ ನಿನ್ನ ಬಳಿ ವೃದ್ಧಾಪ್ಯ ಪಡೆದರೆ, ನೀನು ಅವರೊಡನೆ ನಿಂದನೆಯ ಮಾತನ್ನು ಆಡಬಾರದು. ನೀನು ಅವರೊಡನೆ ಗದರಿಸಿ ಮಾತನಾಡಲೂಬಾರದು. ಅವರಿಬ್ಬರೊಡನೆ ನೀನು ಸೌಮ್ಯವಾಗಿಯೂ ಆದರದಿಂದಲೂ ಮಾತನಾಡು."*

*"ಕರುಣೆಯಿಂದ ಕೂಡಿದವನಾಗಿ ನೀನು ಅವರಿಗೆ ವಿನಯದ ಬಾಹು ತಗ್ಗಿಸಿಕೊಡು ಹಾಗೂ 'ನನ್ನ ಪ್ರಭೂ, ಅವರಿರ್ವರಿಗೂ ನನ್ನ ಬಾಲ್ಯಕಾಲದಲ್ಲಿ ನನ್ನನ್ನು ಸಾಕಿ ಸಲಹಿದವನಂತೆ ನೀನು ಸಹ ಅವರಿಗೆ ಕರುಣೆದೋರು' ಎಂದು ಪ್ರಾರ್ಥಿಸು." (17:24,25)*

*"ಮನುಷ್ಯನಿಗೆ ಅವನ ತಂದೆ ತಾಯಂದಿರ ಬಗ್ಗೆ ನಾವು ಆಜ್ಞಾಪಿಸಿದ್ದೇವೆ. ಅವನ ತಾಯಿ ನಿತ್ರಾಣವನ್ನು ಸಹಿಸಿಕೊಂಡು ಅವನನ್ನು ಗರ್ಭ ಹೊರುತ್ತಾಳೆ. ಎರಡು ವರ್ಷಗಳಲ್ಲಿ ಸ್ತನ್ಯಪಾನವನ್ನು ನಿಲ್ಲಿಸುತ್ತಾಳೆ. ನನಗೂ ನಿನ್ನ ಮಾತಾಪಿತರಿಗೂ ನೀನು ಕೃತಜ್ಞನಾಗಿರು. ನನ್ನ ಬಳಿಗೆಯೇ ನಿನ್ನ ಮರಳಿಕೆಯಾಗಿದೆ." (31:15)*

*"ಮನುಷ್ಯನು ತನ್ನ ತಂದೆ ತಾಯಂದಿರಿಗೆ ಒಳಿತು ಮಾಡಬೇಕೆಂದು ನಾವು ಆಜ್ಞಾಪಿಸಿದ್ದೇವೆ. ಅವನ ತಾಯಿ ಕಷ್ಟ ಅನುಭವಿಸಿ ಅವನನ್ನು ಗರ್ಭಹೊತ್ತಳು ಹಾಗೂ ಕಷ್ಟ ಸಹಿಸಿ ಹೆತ್ತಳು. ಅವನ ಗರ್ಭಧಾರಣೆ ಮತ್ತು ಹಾಲೂಡಿಸುವ ಕಾಲಾವಧಿ (ಕನಿಷ್ಠ) ಮೂವತ್ತು ತಿಂಗಳುಗಳಾಗಿವೆ. ಹಾಗೆ ಅವನು ಪ್ರಾಪ್ತ ವಯಸ್ಕನಾಗಿ ನಲ್ವತ್ತು ವರ್ಷಕ್ಕೆ ತಲಪಿದಾಗ ಅವನು, 'ನನ್ನ ಪ್ರಭೂ, ನೀನು ನನಗೆ ಮತ್ತು ನನ್ನ ಮಾತಾಪಿತರಿಗೆ ನೀಡಿದ ಅನುಗ್ರಹಗಳಿಗೆ ಕೃತಜ್ಞತೆ ಸೂಚಿಸಲಿಕ್ಕೂ ನೀನು ಇಷ್ಟಪಡುವ ಸತ್ಕರ್ಮಗಳನ್ನು ಮಾಡಲಿಕ್ಕೂ ನನಗೆ ಶಕ್ತಿಯನ್ನು ದಯಪಾಲಿಸು. ನನಗೋಸ್ಕರ ನನ್ನ ಸಂತತಿಗಳನ್ನು ಧರ್ಮನಿಷ್ಠರನ್ನಾಗಿ ಮಾಡು. ನಾನು ನಿನ್ನ ಕಡೆಗೆ ತಿರುಗುತ್ತೇನೆ. ನಾನು ನಿನಗೆ ಶರಣಾಗುವವರೊಂದಿಗೆ ಸೇರಿದ್ದೇನೆ' ಎಂದು ಪ್ರಾರ್ಥಿಸುತ್ತಾನೆ."(46:16)*

ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಹೀಗೆ ಉಪದೇಶಿಸಿರುವರು:

- ಕುಟುಂಬದ ಸದಸ್ಯರೊಂದಿಗೆ ಯಾರು ಉತ್ತಮವಾಗಿ ವರ್ತಿಸುತ್ತಾರೋ ಅವರು ನಿಮ್ಮ ಪೈಕಿ ಉತ್ತಮರು.
- ಸ್ವರ್ಗ ಮಾತೆಯ ಪಾದದಡಿಯಲ್ಲಿದೆ.
- ಹೆಣ್ಣು ಮಕ್ಕಳನ್ನು ಚೆನ್ನಾಗಿ ಪಾಲನೆ ಪೋಷಣೆ ಮಾಡಿ ಅವರೊಂದಿಗೆ ಮತ್ತು ಗಂಡು ಮಕ್ಕಳೊಂದಿಗೆ ತಾರತಮ್ಯ ಭಾವನೆಯಿಂದ ವರ್ತಿಸದವನು ಸ್ವರ್ಗದಲ್ಲಿ ನನ್ನ ಸಮೀಪ ವಿರುವನು.

## ಮಹಿಳೆಗೆ ಆರ್ಥಿಕ ಭದ್ರತೆ

ಲೋಕದ ಮಹಾನ್ ಧರ್ಮಗಳಲ್ಲಿ ಇಸ್ಲಾಮ್, ಮಹಿಳೆಗೆ

ಆರ್ಥಿಕ ಸ್ವಾತಂತ್ರ್ಯ ನೀಡುವುದರಲ್ಲಿ ಎಲ್ಲಾ ಧರ್ಮಗಳಿಗಿಂತ ಮುಂದೆ ಇದೆ. ಎಲ್ಲರಿಗೂ ತಿಳಿದಿರುವ ವಿಷಯವೇನೆಂದರೆ ಯುನೈಟೆಡ್ ಕಿಂಗ್‌ಡಮ್‌ನಲ್ಲಿ (ಬ್ರಿಟನಿನಲ್ಲಿ) 1882ರಲ್ಲಿ ಮ್ಯಾರಿಡ್ ವಿಮೆನ್ಸ್ ಪ್ರೊಪರ್ಟಿ ಆ್ಯಕ್ಟ್ (ವಿವಾಹಿತ ಮಹಿಳೆಯ ಆಸ್ತಿಯ ನಿಯಮ) ಅಂಗೀಕರಿಸಲ್ಪಡುವ ಮೊದಲು ವಿವಾಹಿತ ಮಹಿಳೆ ಸ್ವಂತ ಆಸ್ತಿ ಹೊಂದಲು ಸಾಧ್ಯವಿರಲಿಲ್ಲ. ಅವಿವಾಹಿತ ಮಹಿಳೆ ಹೊಂದಿದ ಸ್ವಂತ ಆಸ್ತಿಯ ಹಕ್ಕು ವಿವಾಹದ ನಂತರ ತಾನಾಗಿಯೇ ಪತಿಗೆ ವರ್ಗಾಯಿಸಲ್ಪಡುತ್ತಿತ್ತು. ಈ ನಿಯಮ ಜಾರಿಗೊಂಡು ಒಂದು ನೂರು ವರ್ಷಗಳು ದಾಟಿಹೋದ ನಂತರವೂ ಹಿಂದಿನ ಅವಶೇಷಗಳು ಬಾಕಿಯಾಗಿ ಉಳಿದಿದ್ದು ಬ್ರಿಟಿಷ್ ನಿಯಮಗಳ ಪ್ರಕಾರ ವಿವಾಹಿತ ಮಹಿಳೆ ಆಸ್ತಿ ಹೊಂದಲು ಪತಿಯನ್ನು ಆಶ್ರಯಿಸಬೇಕಾಗುತ್ತದೆ.

ಇಸ್ಲಾಮ್ ಧರ್ಮದಲ್ಲಿ ಅದರ ಆರಂಭದ ಕಾಲದಿಂದಲೇ ಮಹಿಳೆಗೆ ಆರ್ಥಿಕ ಸ್ವಾತಂತ್ರ್ಯ ಸ್ಥಾಪಿಸಲಾಗಿದೆ. ವಿವಾಹ ಸಂದರ್ಭದಲ್ಲಿ ಮಹರ್ ಎಂಬ ವಿವಾಹಧನ ನೀಡಬೇಕೆಂದು ಕಡ್ಡಾಯಗೊಳಿಸಲಾಗಿದೆ. ಅದು ವರನ ಆರ್ಥಿಕ ಸಾಮರ್ಥ್ಯಕ್ಕೆ ಅನುಸಾರವಾಗಿರಬೇಕು. ಪತಿಯು ನಿಧನ ಹೊಂದುವಾಗ ಮಹರ್ ಪಾವತಿಯಾಗಿಲ್ಲವಾದರೆ ಮೃತನ ಆಸ್ತಿಯಿಂದ ಈ ಹಣವನ್ನು ಮೊದಲು ಪಾವತಿ ಮಾಡಿ ಇನ್ನಿತರ ಸಾಲಗಳನ್ನು ತೀರಿಸಬೇಕಾಗಿದೆ. ವಿಧವೆಗೆ ತನ್ನ ಮೃತ ಪತಿಯ ಆಸ್ತಿಯಲ್ಲಿ ಪಾಲು ಸಹ ಇದೆ. ಅದನ್ನು ಇಸ್ಲಾಮ್ ನಿಯಮ ಸಂಹಿತೆ ನಿಗದಿಪಡಿಸಿದ ಪ್ರಕಾರ ನೀಡಲಾಗುವುದು.

ಮಹಿಳೆ ತನ್ನ ಸ್ವಂತ ಪರಿಶ್ರಮದಿಂದ ಗಳಿಸುವ ಸ್ವತ್ತು, ಆಕೆ ವಾರೀಸುದಾರಿಕೆಯಿಂದ ಗಳಿಸುವ ಸ್ವತ್ತು, ಆಕೆ ದಾನವಾಗಿ ಅಥವಾ ಪಾರಿತೋಷಿಕವಾಗಿ ಗಳಿಸುವ ಸ್ವತ್ತು ಆಕೆಯು ಸ್ವತಂತ್ರವಾಗಿ ವಿನಿಯೋಗಿಸಬಹುದಾಗಿದ್ದು ಪತಿಗೆ ಹಸ್ತಕ್ಷೇಪ ಮಾಡುವ ಹಕ್ಕು ಇರುವುದಿಲ್ಲ. ಪತ್ನಿ ತನ್ನ ಸ್ವತ್ತಿನ ಮೇಲ್ವಿಚಾರಣೆಯನ್ನು ತನ್ನ ಪತಿಗೆ ವಹಿಸಿಕೊಡಬಹುದು ಅಥವಾ ಆಕೆ ಸ್ವತಃ ಅದರ ಮೇಲ್ವಿಚಾರಣೆ ನಡೆಸಬಹುದು. ಆದರೆ ಪತಿಯು ಪತ್ನಿಯ ಅನುಮತಿ ಪಡೆಯದೆ ಹಸ್ತಕ್ಷೇಪ ಮಾಡಲು ಸಾಧ್ಯವಿಲ್ಲ.

ಒಬ್ಬ ವಿವಾಹಿತೆಗೆ ಸ್ವಂತ ಆಸ್ತಿ ಮತ್ತು ಹಣಕಾಸು ಇದ್ದರೆ ಆಕೆ ತನ್ನ ಸ್ವಂತ ಹಣದ ಒಂದು ಭಾಗ ಅಥವಾ ಪೂರ್ಣಭಾಗ ಮನೆ ಖರ್ಚಿಗೆ ವಿನಿಯೋಗಿಸಬಹುದು. ಆದರೆ ಹಾಗೆ ಮಾಡುವುದು ಆಕೆ ಕಡ್ಡಾಯವಾಗಿಲ್ಲ. ಮನೆಯ ಖರ್ಚು ವೆಚ್ಚಗಳನ್ನು ನೋಡಿಕೊಳ್ಳುವ ಜವಾಬ್ದಾರಿ ಸಂಪೂರ್ಣವಾಗಿ ಪತಿಯದ್ದಾಗಿದೆ. ಪತ್ನಿ ಪತಿಗಿಂತ ಐಶ್ವರ್ಯವಂತಳಾಗಿದ್ದರೂ ಹೀಗೆಯೇ ಮಾಡಬೇಕಾಗಿದೆ.

ಒಂದು ಚಾರಿತ್ರಿಕ ಘಟನೆ ಈ ವಿಷಯವನ್ನು ಚೆನ್ನಾಗಿ ವಿಶದೀಕರಿಸುತ್ತದೆ. ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಒಮ್ಮೆ ಮಹಿಳೆಯರೊಂದಿಗೆ, "ನೀವು ನಿಮ್ಮ ಸ್ವಂತ ಸಂಪತ್ತಿನಿಂದಲೂ ದಾನ ಮಾಡಿರಿ" ಎಂದು ಉಪದೇಶ ನೀಡಿದ್ದರು. ಆಗ ಝೈನಬ ಎಂಬ ಹೆಸರಿನ ಇಬ್ಬರು ಮಹಿಳೆಯರು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಸಮೀಪ ಬಂದರು. ಅವರಲ್ಲಿ ಒಬ್ಬಾಕೆ ಹಝ್ರತ್ ಪೈಗಂಬರರ(ಸ) ಪ್ರಸಿದ್ಧ ಶಿಷ್ಯ ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್‌ರ ಪತ್ನಿಯಾದ ಝೈನಬ ಹಝ್ರತ್ ಪೈಗಂಬರರೊಂದಿಗೆ ಹೇಳಿದರು: ನಮ್ಮಿಬ್ಬರ ಪತಿಯಂದಿರು ಆರ್ಥಿಕವಾಗಿ ದುರ್ಬಲರಾಗಿದ್ದಾರೆ. ಅವರ ಪತ್ನಿಯರಾದ ನಾವು ಅವರಿಗಿಂತ ಉತ್ತಮ ಸ್ಥಿತಿಯಲ್ಲಿದ್ದೇವೆ. ನಾವು ನಮ್ಮ ಪತಿಯಂದಿರಿಗೆ ಸಹಾಯ ನೀಡಿದರೆ ಅದು ಪುಣ್ಯಕಾರ್ಯವಾಗಿ ಪರಿಗಣಿಸಲ್ಪಡುವುದೇ? ಹಝ್ರತ್ ಪೈಗಂಬರರು ಹೇಳಿದರು: ನೀವು ನಿಮ್ಮ ಪತಿಯಂದಿರಿಗೆ ಸಹಾಯ ಮಾಡಿದರೆ ನೀವು ಇಮ್ಮಡಿ ಪುಣ್ಯಗಳಿಸುವಿರಿ. ಅದು ದಾನವಾಗಿ ಮತ್ತು ನಿಕಟ ಬಂಧುವಿಗೆ ಔದಾರ್ಯವಾಗಿ ಅಲ್ಲಾಹನಿಂದ ಪರಿಗಣಿಸಲ್ಪಡುವುದು.

ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

*"ಅಲ್ಲಾಹನು ನಿಮ್ಮ ಪೈಕಿ ಕೆಲವರನ್ನು ಬೇರೆ ಕೆಲವರಿಗಿಂತ ಶ್ರೇಷ್ಠಗೊಳಿಸಿದುದಕ್ಕೆ ನೀವು ಅತ್ಯಾಶೆಪಡಬೇಡಿರಿ. ಪುರುಷರು ಸಂಪಾದಿಸಿದ ಪಾಲು ಅವರಿಗಿದೆ. ಸ್ತ್ರೀಯರು ಸಂಪಾದಿಸಿದ ಪಾಲು ಅವರಿಗೂ ಇದೆ. ನೀವು ಅಲ್ಲಾಹನಿಂದ ಅವನ ಅನುಗ್ರಹಗಳನ್ನು ಬೇಡಿರಿ. ನಿಸ್ಸಂದೇಹವಾಗಿಯೂ ಎಲ್ಲಾ ವಿಚಾರಗಳ ಬಗ್ಗೆ ಅಲ್ಲಾಹನು ಚೆನ್ನಾಗಿ ಬಲ್ಲವನಾಗಿದ್ದಾನೆ." (4:33)*

*"ಪ್ರತಿಯೊಬ್ಬರಿಗೂ ಅವರು ಬಿಟ್ಟು ಹೋಗುವ ಆಸ್ತಿಗೆ ನಾವು ವಾರೀಸುದಾರರನ್ನು ನಿಶ್ಚಯಿಸಿರುತ್ತೇವೆ. ಅವರು – ಮಾತಾಪಿತರು, ನಿಕಟ ಸಂಬಂಧಿಕರು ಮತ್ತು ನಿಮ್ಮೊಂದಿಗೆ ಒಡಂಬಡಿಕೆ ಮಾಡಿಕೊಂಡವರು. (ಪತಿ ಪತ್ನಿಯರು.) ಆದುದರಿಂದ ನೀವು ಅವರಿಗೆ ಅವರ ಪಾಲನ್ನು ಕೊಡಿರಿ. ನಿಸ್ಸಂದೇಹವಾಗಿಯೂ ಅಲ್ಲಾಹನು ಎಲ್ಲಾ ಕಾರ್ಯಗಳನ್ನೂ ನಿರೀಕ್ಷಿಸುತ್ತಿದ್ದಾನೆ." (4:34)*

ಪವಿತ್ರ ಖುರ್‌ಆನಿನ ಅಧ್ಯಾಯ 4 ವಚನ 12ರಿಂದ 13 ಮತ್ತು 177ರಲ್ಲಿ ವಾರೀಸುದಾರರಿಗೆ ಮೃತರ ಸ್ವತ್ತನ್ನು ಹಂಚಿಕೊಡುವುದನ್ನು ವಿವರಿಸಲಾಗಿದೆ. ಮೃತ ವ್ಯಕ್ತಿಯ ತಂದೆ ತಾಯಂದಿರು, ಪತಿ ಅಥವಾ ಪತ್ನಿ, ಪುತ್ರರು, ಪುತ್ರಿಯರು – ಇವರೆಲ್ಲರೂ ಪಾಲು ಪಡೆಯುತ್ತಾರೆ. ಗಂಡಿನ ಪಾಲು ಹೆಣ್ಣಿನ ಪಾಲಿನ ಎರಡರಷ್ಟು ಎಂಬ ಸಾಮಾನ್ಯ ನಿಯಮ ಇದೆ. ಇದರಲ್ಲಿ ಹೆಣ್ಣು ವಾರೀಸುದಾರರಿಗೆ ಯಾವುದೇ ರೀತಿಯ ನ್ಯಾಯರಹಿತ ವಿವೇಚನೆ ಇಲ್ಲ. ಏಕೆಂದರೆ ಪುರುಷನು ಕುಟುಂಬದ ಪೋಷಣೆಯ ಹೊಣೆ ಹೊರಬೇಕಾಗಿದೆ. ಆದರೆ ಮಹಿಳೆಗೆ ಆ ಹೊಣೆಗಾರಿಕೆಯನ್ನು ವಿಧಿಸಲಾಗಿಲ್ಲ. ಪ್ರಾಯೋಗಿಕವಾಗಿ ಇದು ಮಹಿಳೆಯರಾದ ವಾರೀಸುದಾರರಿಗೆ ಪ್ರಯೋಜನಕರವಾಗಿದೆ.

ಒಬ್ಬ ಮುಸ್ಲಿಮನು ತನ್ನ ಸ್ವತ್ತಿನ ಮೂರನೆಯ ಒಂದು ಭಾಗಕ್ಕಿಂತ ಹೆಚ್ಚು ಮರಣಶಾಸನ ರೂಪದಲ್ಲಿ ನೀಡಬಾರದು. ದಾನಧರ್ಮಕ್ಕೋಸ್ಕರ ಮತ್ತು ವಾರೀಸುದಾರರಿಲ್ಲದವರಿಗೆ

ಮರಣಶಾಸನ ಮೂಲಕ ನೀಡುವುದು ಮೂರನೆಯ ಒಂದು ಭಾಗಕ್ಕಿಂತ ಹೆಚ್ಚು ಆಗಬಾರದು. ಒಬ್ಬ ವಾರೀಸುದಾರನ ಹಕ್ಕನ್ನು ಮರಣಶಾಸನದ ಮೂಲಕ ನಿಗದಿತ ಪಾಲಿಗಿಂತ ಹೆಚ್ಚು ಅಥವಾ ಕಡಿಮೆ ಮಾಡಬಾರದು. ಇಸ್ಲಾಮಿನಲ್ಲಿ ಪ್ರಥಮ ಪುತ್ರನಿಗೆ ಮಾತ್ರ ಆಸ್ತಿ ಹಕ್ಕು ಎಂಬ ನಿಯಮವಾಗಲಿ, ಹೆಣ್ಣುಮಕ್ಕಳಿಗೆ ಆಸ್ತಿಯಲ್ಲಿ ಹಕ್ಕಿಲ್ಲ ಎಂಬ ತಾರತಮ್ಯ ಭಾವನೆಯ ನಿಯಮವಾಗಲಿ ಇಲ್ಲ.

ಒಪ್ಪಂದಗಳನ್ನು ಕಾಪಾಡಲು ನೀಡಿದ ಒಂದು ಮಾರ್ಗದರ್ಶನದಲ್ಲಿ ಒಪ್ಪಂದಗಳನ್ನು ಬರೆಯಬೇಕೆಂದೂ ಅದಕ್ಕೆ ಸಾಕ್ಷಿಗಳನ್ನು ಪಡೆಯಬೇಕೆಂದೂ ಹೇಳಿದುದನ್ನು ಮಹಿಳೆಯರೊಂದಿಗೆ ಭೇದಭಾವನೆಗೆ ಸಾಕ್ಷ್ಯ ಎಂದು ತಪ್ಪಾಗಿ ಪ್ರಸ್ತಾಪಿಸಲಾಗುತ್ತಿದೆ.

ಪವಿತ್ರ ಖುರ್‌ಆನಿನ ಮಾರ್ಗದರ್ಶನ ಹೀಗಿದೆ:

*"ನಿಮ್ಮ ಪೈಕಿ ಇಬ್ಬರು ಪುರುಷರನ್ನು (ಅದಕ್ಕೆ) ಸಾಕ್ಷಿ ಮಾಡಿರಿ. ಇಬ್ಬರು ಪುರುಷರಿಲ್ಲವಾದರೆ ನೀವು ಇಷ್ಟಪಡುವ ಒಬ್ಬ ಪುರುಷ ಮತ್ತು ಇಬ್ಬರು ಸ್ತ್ರೀಯರು ಸಾಕ್ಷಿಗಳಾಗಲಿ. ಇದು ಅವರಿರ್ವರಲ್ಲಿ ಒಬ್ಬಳು ಮರೆತರೆ ಇನ್ನೊಬ್ಬಳು ನೆನಪಿಸಿಕೊಡಲಿಕ್ಕಾಗಿದೆ." (2:283)*

ಪವಿತ್ರ ಖುರ್‌ಆನಿನ ಈ ಮಾರ್ಗದರ್ಶನದಲ್ಲಿ ಯಾವುದೇ ಭೇದ ಭಾವನೆ ಇಲ್ಲ. ಮಹಿಳೆಯರು ನ್ಯಾಯಾಲಯದಲ್ಲಿ ಸಾಕ್ಷ್ಯ ನೀಡಲು ಕರೆಯಲ್ಪಡುವ ಸಂದರ್ಭ ಉಂಟಾಗದಂತೆ ಮಾಡಿ ಅವರನ್ನು ರಕ್ಷಿಸಬೇಕೆಂಬುದು ಸಾಮಾನ್ಯ ನಿಯಮವಾಗಿದೆ. ಆದುದರಿಂದ ಸಾಮಾನ್ಯ ಪರಿಸ್ಥಿತಿಗಳಲ್ಲಿ ಒಂದು ಒಪ್ಪಂದ ಪತ್ರಕ್ಕೆ ಸಾಕ್ಷಿಯಾಗಲು ಮಹಿಳೆಯನ್ನು ಕರೆಯಬಾರದು. ಆದರೆ ತುರ್ತುಪರಿಸ್ಥಿತಿಯಲ್ಲಿ ಈ ನಿಯಮವನ್ನು ಸಡಿಲಗೊಳಿಸಬಹುದು. ಆದರೆ ಬೇರೆ ತೊಂದರೆ ಉದ್ಭವಿಸಬಹುದು. ಪುರುಷರಿಗೆ ಸಂಬಂಧಿಸಿ ಹೇಳುವುದಾದರೆ, ಅವರು ಮನೆಯ ಹೊರಗೆ ಕಾರ್ಯನಿರತರಾಗಿರುವಾಗ ಜನರನ್ನು ಕಾಣುವಾಗ ಅಥವಾ ಬೇರೆ ಕಾರಣಗಳಿಂದ ಒಪ್ಪಂದದ ಶರ್ತಗಳನ್ನು ಮತ್ತು ವ್ಯಕ್ತಿಗಳನ್ನು ನೆನಪಿಟ್ಟುಕೊಳ್ಳಲು ಸಾಧ್ಯವಾಗುತ್ತದೆ. ಒಂದು ಒಪ್ಪಂದದ ಪತ್ರಕ್ಕೆ ಒಬ್ಬ ಪುರುಷ ಮತ್ತು ಒಬ್ಬ ಮಹಿಳೆ ಮಾತ್ರ ಸಾಕ್ಷಿಗಳಾದರೆ, ಸಾಕ್ಷಿಯಾದ ಮಹಿಳೆ ಸಾಕ್ಷಿಯಾದ ಪುರುಷನನ್ನು ಭೇಟಿಯಾಗಲು ಮತ್ತು ಮಾತನಾಡಲು ಸಾಧ್ಯವಾಗದೆ ಒಪ್ಪಂದದ ಬಗ್ಗೆ ಮರೆತುಬಿಡಲು ಸಾಧ್ಯತೆಗಳಿರುತ್ತವೆ. ಈ ಸಮಸ್ಯೆಯನ್ನು ಪರಿಹರಿಸಲು ಇಬ್ಬರು ಮಹಿಳೆಯರನ್ನು ಒಬ್ಬ ಪುರುಷನೊಂದಿಗೆ ಸಾಕ್ಷಿಯಾಗಲು ವಿಧಿಸಲಾಗಿದೆ. ಪವಿತ್ರ ಖುರ್‌ಆನಿನ ವಚನ ಹೇಳುವ ಹಾಗೆ ಒಬ್ಬ ಮಹಿಳೆ ಮರೆತರೆ ಇನ್ನೊಬ್ಬಳು ಅದನ್ನು ನೆನಪಿಸಿಕೊಡಲು ಸಹಾಯಕಳಾಗುವಳು.

ಪವಿತ್ರ ಖುರ್‌ಆನಿನ ಮಾರ್ಗದರ್ಶನದ ಉದ್ದೇಶ ಸಾಕ್ಷ್ಯದ ಸಂರಕ್ಷಣೆ ಮಾತ್ರವಾಗಿದೆ. ಪುರುಷ ಮತ್ತು ಮಹಿಳೆಯ ಸಾಕ್ಷ್ಯಗಳ ಬಗ್ಗೆ ಮೌಲ್ಯಮಾಪನವನ್ನು ಈ ವಚನದಲ್ಲಿ ನಡೆಸಿಲ್ಲ. ಒಂದು ಉದಾಹರಣೆ ಈ ವಿಷಯದಲ್ಲಿ ಸಂಶಯವನ್ನು ನಿವಾರಿಸುವುದು.

ಒಂದು ಒಪ್ಪಂದಕ್ಕೆ ಒಬ್ಬ ಪುರುಷ ಮತ್ತು ಇಬ್ಬರು ಮಹಿಳೆಯರು ಸಾಕ್ಷಿಗಳಾಗಿದ್ದಾರೆ ಎಂದು ಭಾವಿಸಿರಿ. ಈ ಒಪ್ಪಂದ ಬಗ್ಗೆ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲಾಗಿದೆ ಎಂದು ಸಹ ಭಾವಿಸಿರಿ. ಇಬ್ಬರು ಮಹಿಳೆಯರಾದ ಸಾಕ್ಷಿಗಳಲ್ಲಿ ಒಬ್ಬಳು ಅಷ್ಟರೊಳಗೆ ಮೃತಳಾಗಿದ್ದಾಳೆಂದು ಆಗ ತಿಳಿಯುತ್ತದೆ. ಪುರುಷ ಸಾಕ್ಷಿ ಮತ್ತು ಮಹಿಳಾ ಸಾಕ್ಷಿಯನ್ನು ನ್ಯಾಯಾಲಯದಲ್ಲಿ ವಿಚಾರಣೆ ನಡೆಸಿದಾಗ ಅವರಿಬ್ಬರ ಸಾಕ್ಷ್ಯ ಸಾಮರಸ್ಯ ಹೊಂದಿಲ್ಲ ಎಂದು ನ್ಯಾಯಾಧೀಶ ಕಂಡು ಅವರಿಬ್ಬರ ಪೈಕಿ ಮಹಿಳೆಯ ಸಾಕ್ಷ್ಯ ಹೆಚ್ಚು ವಿಶ್ವಾಸಾರ್ಹ ಎಂದು ನ್ಯಾಯಾಧೀಶ ಕಾಣುವಾಗ ಸಾಕ್ಷಿಯಾದ ಮಹಿಳೆಯ ಸಾಕ್ಷ್ಯವನ್ನು ನ್ಯಾಯಾಧೀಶರು ಅಂಗೀಕರಿಸಿ ಪುರುಷನ ಸಾಕ್ಷ್ಯವನ್ನು ತಳ್ಳಿಹಾಕಬಹುದಾಗಿದೆ. ಒಬ್ಬ ಮಹಿಳೆಯ ಪರವಾಗಿ ಅಥವಾ ವಿರುದ್ಧವಾಗಿ ಭೇದಭಾವನೆ ಸೂಚಿಸಿದುದಾಗಿ ಆಗ ಗಣಿಸಲಾಗದು.

## ಪುರುಷರ ಮತ್ತು ಮಹಿಳೆಯರ ಸಂರಕ್ಷಣೆ

ಪುರುಷರು ಮತ್ತು ಮಹಿಳೆಯರು ಪರಸ್ಪರ ದೈವಿಕ ವರದಾನಗಳಾಗಿದ್ದಾರೆ. ಆದುದರಿಂದ ಈ ವರದಾನವನ್ನು ಸ್ನೇಹಪೂರ್ವಕವಾಗಿ ರಕ್ಷಿಸಿಕೊಂಡು ದೇವಸಂಪ್ರೀತಿ ಗಳಿಸುವ ಮಾರ್ಗವಾಗಿ ಮಾಡಿಕೊಳ್ಳಬೇಕು. ಪುರುಷರನ್ನೂ ಮಹಿಳೆಯರನ್ನೂ ಸೃಷ್ಟಿಸಿದವನು ಅವರ ಬಲಹೀನತೆಗಳನ್ನೂ ಶಕ್ತಿ ಸಾಮರ್ಥ್ಯಗಳನ್ನೂ ಚೆನ್ನಾಗಿ ಬಲ್ಲನು. ಮನುಷ್ಯರ ಶಕ್ತಿ ಸಾಮರ್ಥ್ಯಗಳನ್ನು ಬೆಳೆಸಲು ಮತ್ತು ಬಲಹೀನತೆಗಳಿಂದ ರಕ್ಷಿಸಿಕೊಳ್ಳಲು ಸೃಷ್ಟಿಕರ್ತನು ಕರುಣೆಯಿಂದ ಸಾಕಷ್ಟು ಮಾರ್ಗದರ್ಶನಗಳನ್ನು ನೀಡಿರುವನು. ಈ ಮಾರ್ಗದರ್ಶನಗಳನ್ನು ಕಡೆಗಣಿಸಿದರೆ ಕೆಡುಕು ಮತ್ತು ನಾಶ ಸಂಭವಿಸುವುದು. ಅವುಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ವರ್ತಿಸಿದರೆ ಜೀವನವನ್ನು ಪ್ರಶಾಂತವನ್ನಾಗಿಯೂ ಸಂತೋಷಭರಿತವನ್ನಾಗಿಯೂ ಮಾಡುವುದು. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆ ಹೇಳಿರುವನು:

*"ದಿಟವಾಗಿಯೂ ನಾವೇ ಮನುಷ್ಯನನ್ನು ಸೃಷ್ಟಿಸಿರುವೆವು. ಅವನ ಮನಸ್ಸು ಅವನಿಗೇನನ್ನು ಪಿಸುಗುಟ್ಟುತ್ತದೆಂಬುದನ್ನು ನಾವು ಬಲ್ಲೆವು." (50:17)*

*"ದಿಟವಾಗಿಯೂ ನಾವು ಮನುಷ್ಯನನ್ನು (ಹಲವು ಶಕ್ತಿಗಳಿಂದ) ಮಿಶ್ರಿತವಾದ ವೀರ್ಯಾಣುವಿನಿಂದ ಸೃಷ್ಟಿಸಿದ್ದೇವೆ – ನಾವು ಅವನನ್ನು ಪರೀಕ್ಷೆಗೊಳಪಡಿಸಲಿಕ್ಕೋಸ್ಕರ. ಹಾಗೆ ನಾವು ಅವನನ್ನು ಕೇಳುವವನಾಗಿಯೂ ಕಾಣುವವನಾಗಿಯೂ ಮಾಡಿದೆವು."*

*"ನಾವು ಅವನಿಗೆ ದಾರಿ ತೋರಿಸಿಕೊಟ್ಟಿದ್ದೇವೆ – ಒಂದೋ ಅವನು ಕೃತಜ್ಞನಾಗುತ್ತಾನೆ ಅಥವಾ ಕೃತಘ್ನನಾಗುತ್ತಾನೆ." (76:3, 4)*

ಆಲಿಸುವ ಮೂಲಕ, ನೋಡುವ ಮೂಲಕ ಮತ್ತು ಇತರ ಇಂದ್ರಿಯಗಳ ಮೂಲಕ ಮನುಷ್ಯನ ಮನಸ್ಸು ಭಾವನೆಗಳನ್ನು ಹೊಂದುತ್ತವೆ ಮತ್ತು ಅವನನ್ನು ಸತ್ಕರ್ಮ ಅಥವಾ ದುಷ್ಕರ್ಮಕ್ಕೆ ಪ್ರೇರೇಪಿಸುತ್ತದೆ. ಆದುದರಿಂದ ಮನುಷ್ಯರನ್ನು ಅಲ್ಲಾಹನು ಹೀಗೆ ಎಚ್ಚರಿಸಿದ್ದಾನೆ:

*"ಯಾವುದರ ಬಗ್ಗೆ ನಿನಗೆ ಸರಿಯಾದ ಜ್ಞಾನವಿಲ್ಲವೋ ಅದನ್ನು*

*ನೀನು ಹಿಂಬಾಲಿಸಬೇಡ. ಖಂಡಿತವಾಗಿಯೂ ಕಿವಿ, ಕಣ್ಣು, ಹೃದಯ ಇವೆಲ್ಲವುಗಳ ವಿಚಾರಣೆ ನಡೆಯುವುದು." (17:37)*

ಮನುಷ್ಯನು ತನ್ನ ಇಂದ್ರಿಯಗಳನ್ನು ನಿಯಂತ್ರಣದಲ್ಲಿ ಇಡಬೇಕೆಂದೂ ಅವುಗಳನ್ನು ಸ್ಥಿರವಾಗಿ ವೀಕ್ಷಿಸುತ್ತಾ ಇರಬೇಕೆಂದೂ ಸಾತ್ವಿಕತೆಯ ಮುಖ್ಯ ಸತ್ವ ಇದೆಂದೂ ಆದೇಶಿಸಲಾಗಿದೆ. ಹಝ್ರತ್ ಮುಹಮ್ಮದ್ ಪೈಗಂಬರರಿಗೆ(ಸ) ಹೀಗೆ ಆದೇಶಿಸಲಾಯಿತು:

*"ಸತ್ಯ ವಿಶ್ವಾಸಿಗಳೊಡನೆ ಹೇಳು: ಅವರು ತಮ್ಮ ಕಣ್ಣುಗಳನ್ನು ಹತೋಟಿಯಲ್ಲಿಡಲಿ ಮತ್ತು ತಮ್ಮ ಗುಪ್ತಾಂಗಗಳನ್ನು ಕಾಪಾಡಿಕೊಳ್ಳಲಿ. ಅದು ಅವರಿಗೆ ಪರಿಶುದ್ಧ ಮಾರ್ಗವಾಗಿದೆ. ಅವರ ಕೃತ್ಯಗಳ ಬಗ್ಗೆ ಅಲ್ಲಾಹನು ಚೆನ್ನಾಗಿ ಬಲ್ಲವನಾಗಿದ್ದಾನೆ."*

*"ಸತ್ಯ ವಿಶ್ವಾಸಿನಿಯರೊಂದಿಗೆ ಹೇಳು: ಅವರು ತಮ್ಮ ಕಣ್ಣುಗಳನ್ನು ಹತೋಟಿಯಲ್ಲಿಡಲಿ ಮತ್ತು ತಮ್ಮ ಗುಪ್ತಾಂಗಗಳನ್ನು ಕಾಪಾಡಲಿ. ಅವರು ತಮ್ಮ ಸೌಂದರ್ಯವನ್ನು ತೋರ್ಪಡಿಸದಿರಲಿ – ತನ್ನಿಂತಾನೆ ಪ್ರಕಟವಾಗುವುದರ ಹೊರತು. ಅವರು ತಮ್ಮ ಶಿರೋವಸ್ತ್ರದಿಂದ ಎದೆಯನ್ನೂ ಮುಚ್ಚಲಿ. ಅವರು ತಮ್ಮ ಪತಿಯರು, ಪಿತರು, ಪತಿಯ ಪಿತರು, ಪುತ್ರರು, ಪತಿಯ ಪುತ್ರರು, ಸಹೋದರರು, ಸಹೋದರರ ಪುತ್ರರು, ಸಹೋದರಿಯರ ಪುತ್ರರು, ತಮ್ಮಂತಹ ಸ್ತ್ರೀಯರು, ತಮ್ಮ ಅಧೀನದಲ್ಲಿರುವವರು (ದಾಸಿಯರು), ಪುರುಷರ ಪೈಕಿ ಲೈಂಗಿಕಾಭಿಲಾಷೆಯಿಲ್ಲದ ಪರಿಚಾರಕರು, ಸ್ತ್ರೀಯರ ಲೈಂಗಿಕ ರಹಸ್ಯಗಳ ಅರಿವಿಲ್ಲದ ಬಾಲಕರು – ಇವರಿಗೆ ಹೊರತು ತಮ್ಮ ಸೌಂದರ್ಯವನ್ನು ತೋರ್ಪಡಿಸಬಾರದು. ತಮ್ಮ ಮುಚ್ಚಿಟ್ಟ ಸೌಂದರ್ಯವನ್ನು ಬಹಿರಂಗಪಡಿಸಲಿಕ್ಕಾಗಿ ಅವರು ತಮ್ಮ ಕಾಲುಗಳನ್ನು ನೆಲಕ್ಕೆ ಅಪ್ಪಳಿಸಬಾರದು. ಓ ಸತ್ಯ ವಿಶ್ವಾಸಿಗಳೇ, ನೀವು ಯಶಸ್ಸುಗಳಿಸಲಿಕ್ಕೋಸ್ಕರ ಎಲ್ಲರೂ ಅಲ್ಲಾಹನ ಕಡೆಗೆ ತಿರುಗಿರಿ." (24:31, 32)*

*"ಓ ಸತ್ಯ ವಿಶ್ವಾಸಿಗಳೇ, ನಿಮ್ಮ ಅಧೀನದಲ್ಲಿರುವವರು ಮತ್ತು ಪ್ರೌಢಾವಸ್ಥೆಯನ್ನು ತಲಪದ ಮಕ್ಕಳು (ನಿಮ್ಮ ಖಾಸಗಿ ಕೊಠಡಿಯನ್ನು ಪ್ರವೇಶಿಸಲು) ಮೂರು ಹೊತ್ತುಗಳಲ್ಲಿ ನಿಮ್ಮ ಅನುಮತಿ ಪಡೆಯಬೇಕಾಗಿದೆ – ಪ್ರಭಾತದ ನಮಾಝಿಗೆ ಮುಂಚೆ, ಮಧ್ಯಾಹ್ನ ನೀವು ನಿಮ್ಮ (ಹೊರ) ಉಡುಪುಗಳನ್ನು ಕಳಚಿರುವಾಗ ಮತ್ತು ರಾತ್ರಿಯ ನಮಾಝಿನ ಬಳಿಕ. ಇವು ಮೂರು ನಿಮ್ಮ ಖಾಸಗಿ ಸಮಯಗಳಾಗಿವೆ. ಇವುಗಳ ಹೊರತು ಬೇರೆ ಸಮಯಗಳಲ್ಲಾದರೆ ನಿಮ್ಮ ಮೇಲಾಗಲಿ ಅವರ ಮೇಲಾಗಲಿ ತಪ್ಪೇನಿಲ್ಲ. ಏಕೆಂದರೆ ಅವರು ನಿಮ್ಮ ಬಳಿಯೇ ಅತ್ತಿತ್ತ ಸುತ್ತಾಡುವವರಾಗಿದ್ದಾರೆ. ಹೀಗೆ ಅಲ್ಲಾಹನು(ತನ್ನ) ಆಜ್ಞೆಗಳನ್ನು ವಿವರಿಸಿಕೊಡುತ್ತಾನೆ. ಅಲ್ಲಾಹನು ಸರ್ವಜ್ಞನೂ ಬುದ್ಧಿಶಾಲಿಯೂ ಆಗಿದ್ದಾನೆ." (24:59)*

*"ನಿಮ್ಮ ಮಕ್ಕಳು ಪ್ರೌಢಾವಸ್ಥೆಯನ್ನು ಪಡೆದರೆ, ಅವರಿಗೆ ಮುಂಚೆ ಇದ್ದವರು ಅನುಮತಿ ಕೇಳಿದಂತೆಯೇ ಅವರು ಸಹ ಅನುಮತಿ ಕೇಳಬೇಕಾಗಿದೆ. ಹೀಗೆ ಅಲ್ಲಾಹನು ತನ್ನ ಆಜ್ಞೆಗಳನ್ನು ನಿಮಗೆ ವಿಶದಪಡಿಸುತ್ತಾನೆ. ಅಲ್ಲಾಹನು ಸರ್ವಜ್ಞನೂ ಬುದ್ಧಿಶಾಲಿಯೂ ಆಗಿದ್ದಾನೆ." (24:60)*

*"ವಿವಾಹವನ್ನು ಬಯಸದ ವೃದ್ಧೆಯರು ಸೌಂದರ್ಯ ತೋರ್ಪಡಿಸದ ರೀತಿಯಲ್ಲಿ ತಮ್ಮ ಘೋಷಾ ವಸ್ತ್ರವನ್ನು ತೆಗೆದಿರಿಸುವುದರಲ್ಲಿ ತಪ್ಪೇನಿಲ್ಲ. ಆದರೆ ಮುಂಜಾಗ್ರತೆ ವಹಿಸುವುದು ಅವರಿಗೆ ಉತ್ತಮ. ಅಲ್ಲಾಹನು ಎಲ್ಲಾ ಆಲಿಸುವವನೂ ಸರ್ವಜ್ಞನೂ ಆಗಿದ್ದಾನೆ." (24:61)*

ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಪತ್ನಿಯರಿಗೆ ಕೆಲವು ವಿಶಿಷ್ಟ ಮಾರ್ಗದರ್ಶನಗಳಿವೆ. ಮಾದರಿ ಸ್ವಭಾವ ಗುಣವನ್ನು ಪಡೆಯಲು ಸಹಕಾರಿಯಾಗಿರುವ ಈ ಮಾರ್ಗದರ್ಶನಗಳು ಸತ್ಯವಿಶ್ವಾಸಿನಿಯರಿಗೆ ಅನುಕರಣೀಯವಾಗಿವೆ.

ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹೀಗೆ ಹೇಳಿದ್ದಾನೆ:

*"ಓ ಪ್ರವಾದಿ, ನಿನ್ನ ಪತ್ನಿಯರೊಂದಿಗೆ ಹೇಳು: ನೀವು ಐಹಿಕ ಜೀವನವನ್ನೂ, ಅದರ ಆಡಂಬರವನ್ನೂ ಬಯಸುವಿರಾದರೆ ಬನ್ನಿರಿ. ನಾನು ನಿಮಗೇನಾದರೂ ಪರಿಹಾರ ಧನ ನೀಡಿ ಯಥೋಚಿತವಾದ ರೀತಿಯಲ್ಲಿ ನಿಮ್ಮನ್ನು ಬಿಟ್ಟು ಬಿಡುವೆನು."*

*"ಆದರೆ ನೀವು ಅಲ್ಲಾಹನನ್ನೂ ಅವನ ಸಂದೇಶ ವಾಹಕನನ್ನೂ ಪರಲೋಕದ ಗೃಹವನ್ನೂ ಬಯಸುವಿರಾದರೆ, ನಿಮ್ಮ ಪೈಕಿ ಸತ್ಕರ್ಮಿಗಳಿಗೆ ಅಲ್ಲಾಹನು ಮಹತ್ವದ ಪ್ರತಿಫಲವನ್ನು ಸಿದ್ಧಪಡಿಸಿಟ್ಟಿದ್ದಾನೆ."*

*"ಪ್ರವಾದಿಯ ಪತ್ನಿಯರೇ, ನಿಮ್ಮಲ್ಲಿ ಯಾರಾದರೂ ಪ್ರತ್ಯಕ್ಷವಾದ ನೀಚಕೃತ್ಯವೇನಾದರೂ ಮಾಡಿದರೆ ಆಕೆಗೆ ಇಮ್ಮಡಿ ಶಿಕ್ಷೆಯಿದೆ. ಅದು ಅಲ್ಲಾಹನಿಗೆ ಸುಲಭ ಕಾರ್ಯವಾಗಿದೆ."*

*"ಆದರೆ ನಿಮ್ಮ ಪೈಕಿ ಯಾರಾದರೂ ಅಲ್ಲಾಹನಿಗೂ ಅವನ ಸಂದೇಶವಾಹಕನಿಗೂ ವಿಧೇಯರಾಗಿದ್ದುಕೊಂಡು ಸತ್ಕರ್ಮ ಮಾಡಿದರೆ, ನಾವು ಆಕೆಗೆ ಇಮ್ಮಡಿ ಪ್ರತಿಫಲ ನೀಡುವೆವು. ಆಕೆಗೆ ಗೌರವಾರ್ಹ ಜೀವನ ಸಾಮಗ್ರಿಯನ್ನು ಸಿದ್ಧಪಡಿಸಿಟ್ಟಿದ್ದೇವೆ." (33:29–32)*

*"ಪ್ರವಾದಿಯ ಪತ್ನಿಯರೇ, ನೀವು ಭಯಭಕ್ತಿವುಳ್ಳವರಾದರೆ (ತಿಳಿದುಕೊಳ್ಳಿರಿ) ನೀವು ಅನ್ಯ ಸ್ತ್ರೀಯರಂತಲ್ಲ. ಆದುದರಿಂದ ನೀವು ಬಹಳ ಮೃದುವಾಗಿ ಮಾತನಾಡಬಾರದು. ಏಕೆಂದರೆ, ಹೃದಯದಲ್ಲಿ ರೋಗವುಳ್ಳವರು ನಿಮ್ಮ ಮೇಲೆ ದುರಾಶೆಹೊಂದುವರು. ನೀವು (ಯಾವಾಗಲೂ ಜನರೊಡನೆ) ಯುಕ್ತವಾದ ಮಾತನ್ನಾಡಿರಿ."*

*"ನೀವು ನಿಮ್ಮ ಮನೆಗಳಲ್ಲಿ (ಘನತೆಯಿಂದ) ಇದ್ದುಕೊಳ್ಳಿರಿ. ಹಳೆಯ ಅಜ್ಞಾನ ಕಾಲದ ಶೃಂಗಾರದ ರೀತಿಯಲ್ಲಿ ನೀವು ಶೃಂಗಾರ ಮಾಡಬೇಡಿರಿ. ನೀವು ನಮಾಝನ್ನು ನಿಷ್ಠೆಯಿಂದ ನಿರ್ವಹಿಸಿರಿ. ಝಕಾತ್ ನೀಡಿರಿ. ಅಲ್ಲಾಹ್ ಮತ್ತು ಅವನ ಸಂದೇಶವಾಹಕನಿಗೆ ವಿಧೇಯರಾಗಿರಿ. ನಿಮ್ಮನ್ನು ಪರಿಶುದ್ಧಗೊಳಿಸಲು ಅಲ್ಲಾಹು ಬಯಸುತ್ತಾನೆ."*


*"ನಿಮ್ಮ ಮನೆಗಳಲ್ಲಿ ವಾಚಿಸಲ್ಪಡುವ ಅಲ್ಲಾಹನ ವಚನಗಳನ್ನೂ ಜ್ಞಾನವನ್ನೂ ಸ್ಮರಿಸಿರಿ. ನಿಸ್ಸಂದೇಹವಾಗಿಯೂ ಅಲ್ಲಾಹನು ಸೂಕ್ಷ್ಮಜ್ಞನೂ ಸರ್ವಜ್ಞನೂ ಆಗಿದ್ದಾನೆ." (33:33–35)*

ಮೇಲೆ ವಿವರಿಸಲಾದ ದೈವಿಕ ಮಾರ್ಗದರ್ಶನಗಳು ಪುರುಷ ಮತ್ತು ಮಹಿಳೆ ಉನ್ನತ ಮಟ್ಟದ ನೈತಿಕ ಗುಣಸ್ವಭಾವಗಳನ್ನು ಹೊಂದಲಿಕ್ಕೋಸ್ಕರ ಹಾಗೂ ಘನತೆಯಿಂದಲೂ ಆತ್ಮನಿಯಂತ್ರಣ ಹೊಂದಿಯೂ ವರ್ತಿಸಲಿಕ್ಕಾಗಿದೆ. ಸಮಚಿತ್ತತೆ, ನಮ್ರತೆ ಮತ್ತು ಪರಿಶುದ್ಧಿ ಇಸ್ಲಾಮೀ ಸಮಾಜದ ಹೆಗ್ಗುರುತಾಗಿರಬೇಕು. ನಿಯಂತ್ರಣ ರಹಿತವಾಗಿ ಹೆಣ್ಣು ಗಂಡುಗಳು ಒಟ್ಟಿಗೆ ಜಮಾಯಿಸುವುದು ನಿಷಿದ್ಧಗೊಳಿಸಲ್ಪಟ್ಟಿದೆ. ಪುರುಷ ಮತ್ತು ಮಹಿಳೆ ಮರ್ಯಾದೆಯಿಂದ ವರ್ತಿಸಬೇಕೆಂದು ಆದೇಶಿಸಲಾಗಿದೆ. ಮಹಿಳೆಯರನ್ನು ಎಲ್ಲಾ ವಿಧಗಳ ಪೀಡನೆಗಳಿಂದ ಸಂರಕ್ಷಿಸಬೇಕಾದುದು ಅವಶ್ಯಕವಾಗಿದೆ. ಪವಿತ್ರ ಖುರ್‌ಆನ್ ಹೀಗೆ ನಿರ್ದೇಶಿಸುತ್ತದೆ:

*"ಓ ಪ್ರವಾದಿ, ನಿನ್ನ ಪತ್ನಿಯರೊಂದಿಗೂ ಪುತ್ರಿಯರೊಂದಿಗೂ ಸತ್ಯವಿಶ್ವಾಸಿಗಳ ಸ್ತ್ರೀಯರೊಂದಿಗೂ (ಅವರು ಹೊರಗೆ ಹೋಗುವಾಗ) ಅವರ ಮೇಲು ಹೊದಿಕೆಗಳನ್ನು ತಮ್ಮ ಶರೀರಗಳ ಮೇಲೆ ಹೊದ್ದುಕೊಳ್ಳಲಿಕ್ಕೆ ಹೇಳು. ಅದು ಅವರು ಗುರುತಿಸಲ್ಪಡದಿರಲು ಮತ್ತು ಪೀಡಿಸಲ್ಪಡದಿರಲು ಉಪಯುಕ್ತವಾಗಿದೆ. ಅಲ್ಲಾಹನು ಅತ್ಯಂತ ಕ್ಷಮಾಶೀಲನೂ ಕಾರುಣ್ಯವಂತನೂ ಆಗಿದ್ದಾನೆ." (33:60)*

ಅನಿಯಂತ್ರಿತವಾಗಿ ಪುರುಷರು ಮತ್ತು ಮಹಿಳೆಯರು ಒಟ್ಟಿಗೆ ಸೇರುವುದು, ಮಹಿಳೆಯರು ಪುರುಷರನ್ನು ಆಕರ್ಷಿಸಲು ಶೃಂಗರಿಸಿ ಹೊರಡುವುದು ಪಾಶ್ಚಾತ್ಯ ಸಮುದಾಯದ ನಾಶಕ್ಕೆ ಕಾರಣವಾಗಿದೆ. ಎಲ್ಲಾ ರೀತಿಯ ನಮ್ರತೆ ಮತ್ತು ಸಭ್ಯತೆಯನ್ನು ತಳ್ಳಿಬಿಡಲಾಗಿದೆ. ಹಿಂದಿನ ಕಾಲದ ಅಮೂಲ್ಯ ಮೌಲ್ಯಗಳು ಅಪಹಾಸ್ಯಕ್ಕೆ ಗುರಿಯಾಗಿವೆ. ಬಹಳ ಆತಂಕಕರವಾದ ವಿಷಯವೇನೆಂದರೆ, ಪಾಶ್ಚಿಮಾತ್ಯರಿಂದ ಪ್ರಭಾವಿತರಾದ ಮುಸ್ಲಿಮರ ಒಂದು ವಿಭಾಗ ಪಶ್ಚಿಮದ ಈ ಆತ್ಮಹತ್ಯಾತ್ಮಕ ಪರಿವರ್ತನೆಯನ್ನು ತಮಗೆ ಬಾಧಿಸದ ಹಾಗೆ ತಡೆಗಟ್ಟಲು ಶಕ್ತರಾಗಿಲ್ಲ. ಪಾಶ್ಚಿಮಾತ್ಯರನ್ನು ಅನುಕರಿಸುವುದರಿಂದ ಉಂಟಾಗಬಹುದಾದ ಅಪಾಯಗಳನ್ನು ಅವರು ಗುರುತಿಸುವರೆಂದೂ ಇಸ್ಲಾಮಿಕ ಮೌಲ್ಯಗಳ ಉಪಯುಕ್ತತೆಯನ್ನು ಮನವರಿಕೆ ಮಾಡಿಕೊಂಡು ಅವುಗಳನ್ನು ಕಟ್ಟುನಿಟ್ಟಾಗಿ ಅವರು ಪಾಲಿಸುವರೆಂದೂ ಧರ್ಮನಿಷ್ಠೆಯಿಂದ ಆಶಿಸಬಹುದು.



## ಹೊಸ ಪುಸ್ತಕಗಳು



### ಅಹ್ಮದಿಯಾ ಮುಸ್ಲಿಮ್ ಜಮಾಅತ್ ಬ್ರಿಟಿಷರು ನೆಟ್ಟ ಗಿಡವೇ?

**ಲೇಖಕ : ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್**

**ಪುಟ : 35** **ಬೆಲೆ ರೂ. 15/-**



### ಮಹಿಳೆ ಇಸ್ಲಾಮ್‌ನಲ್ಲಿ

**ಲೇಖಕ : ಸರ್ ಮುಹಮ್ಮದ್ ಝುಫ್ರುಲ್ಲಾ ಖಾನ್**

**ಪುಟ : 38** **ಬೆಲೆ ರೂ. 20/-**



### ಧರ್ಮದ ಪುನಶ್ಚೇತನ ಸಿದ್ಧಾಂತ

**ಲೇಖಕ : ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್**

**ಪುಟ : 20** **ಬೆಲೆ ರೂ. 15/-**

**ಸಂಪರ್ಕಿಸಿರಿ : Ameer, Ahmadiyya Muslim Jama'ath**
**No. 1, 3rd Cross Road, Wilson Garden, BANGALORE - 560 027**

# ಮುಸ್ಲಿಮ್ ಲೋಕ ಇಮಾಮ್ ಮಹ್‌ದಿಯ ಅನ್ವೇಷಣೆಯಲ್ಲಿ

ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರು ಮುಸ್ಲಿಮರಿಗುಂಟಾಗುವ ಪರಿವರ್ತನೆಗಳ ಬಗ್ಗೆ ನುಡಿದ ಭವಿಷ್ಯ ವಾಣಿಗಳಲ್ಲಿ ಒಂದು ಹೀಗಿತ್ತು: "ಮುಸ್ಲಿಮರ ಹೃದಯಗಳಿಂದ ಸತ್ಯವಿಶ್ವಾಸವು ಹೊರಟು ಹೋಗುವುದು. ತಾವು ಮುಸ್ಲಿಮರೆಂದು ಅವರು ತಮ್ಮನ್ನು ಹೇಳಿಕೊಳ್ಳುವರಾದರೂ ಅವರು ಸತ್ಯವಿಶ್ವಾಸವೆಂಬ ಪ್ರಕಾಶದಿಂದ ವಿರಹಿತರಾಗುವರು." ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರು ಹೀಗೆ ಸಹ ಹೇಳಿದರು: "ಸತ್ಯವಿಶ್ವಾಸವು ಸುರಯ್ಯಾ (ಕೃತ್ತಿಕಾ) ನಕ್ಷತ್ರಕ್ಕೆ ಏರಿಹೋಗುವುದು. ಆಗ ಫಾರಸೀ ವಂಶಜರಾದ ಒಬ್ಬ ಮಹಾನುಭಾವರು ಅದನ್ನು ಭೂಮಿಗೆ ಮರಳಿ ತರುವರು." (ಸಹೀಹ್ ಬುಖಾರಿಯ ಕಿತಾಬುತ್ತಫ್‌ಸೀರ್-ಸೂರತುಲ್ ಜುಮುಅ)

ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರು ಹೀಗೆಯೂ ಹೇಳಿದರು: "ಇಸ್ಲಾಮಿನ ಹೆಸರು ಮತ್ತು ಪವಿತ್ರ ಖುರ್‌ಆನಿನ ಅಕ್ಷರಗಳು ಮಾತ್ರ ಬಾಕಿಯಾಗಿ ಉಳಿಯುವುವು. ಮಸ್‌ಜಿದ್‌ಗಳು ಜನರಿಂದ ತುಂಬಿರುವುದಾಗಿ ಕಂಡುಬಂದರೂ ಮಾರ್ಗದರ್ಶನದ ಪ್ರಕಾಶ ಅವುಗಳಲ್ಲಿರಲಾರದು. ಮುಸ್ಲಿಮರ ಧಾರ್ಮಿಕ ವಿದ್ವಾಂಸರು ಅತ್ಯಂತ ಕೀಳು ಜನರಾಗುವರು." (ಮಿಶ್ಕಾತ್ ಕಿತಾಬುಲ್ ಇಲ್ಮ್)

ಮುಸ್ಲಿಮ್ ಲೋಕದ ನಾಯಕರು ಮತ್ತು ಚಿಂತಕರು, ಈಗಿನ ಕಾಲಘಟ್ಟವು ಸತ್ಯವಿಶ್ವಾಸವು ನಶಿಸಿ ಹೋದ ಕಾಲಘಟ್ಟವಾಗಿದೆ ಎಂದೂ ನೈಜ ಮುಸ್ಲಿಮನನ್ನು ಇಂದು ಲೋಕದಲ್ಲಿ ಕಾಣುವುದಿಲ್ಲ ಎಂದೂ ಅಲ್ಲಾಹನಿಂದ ನಿಯೋಗಿಸಲ್ಪಡುವ ಮಹಾತ್ಮರ ಆವಶ್ಯಕತೆ ಇದೆ ಎಂದೂ ಸಮ್ಮತಿಸುತ್ತಾರೆ.

ಅಲ್ಲಾಹನು ಎಲ್ಲಾ ವಾಗ್ದಾನಗಳನ್ನೂ ಭವಿಷ್ಯವಾಣಿಗಳನ್ನೂ ಈಡೇರಿಸಿಕೊಂಡು ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮರನ್ನು ಮಸೀಹ್ ಮೌಊದ್ ಆಗಿಯೂ ಮಹ್‌ದಿಯಾಗಿಯೂ ಈ ಕಾಲದ ಇಮಾಮಾಗಿಯೂ ನೇಮಿಸಿ ಕಳುಹಿಸಿರುವನು. 1891ರಲ್ಲಿ ಅವರು ಹೀಗೆ ವಾದಿಸಿದರು:

"ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ದಾಸನಾಗಿ, ಅವರನ್ನು ಅನುಸರಿಸುವ ಮಸೀಹ್ ಮೌಊದ್ ಮತ್ತು ಇಮಾಮ್ ಮಹ್‌ದಿಯಾಗಿ ನನ್ನನ್ನು ಅಲ್ಲಾಹನು ಕಳುಹಿಸಿರುವನು. ನನ್ನ ಆಗಮನದ ಉದ್ದೇಶವು ಲೋಕದ ಎಲ್ಲಾ ಜನರನ್ನು ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಮತ್ತು ಪವಿತ್ರ ಖುರ್‌ಆನಿನ ಕಡೆಗೆ ಆಮಂತ್ರಿಸುವುದಾಗಿದೆ." ಅವರು ಹೀಗೆ ಸಹ ಹೇಳಿದರು: "ಭೂಮಿಯಲ್ಲಿ ವಾಸಿಸುವ ಎಲ್ಲಾ ಜನರೇ, ಪೂರ್ವದಲ್ಲೂ ಪಶ್ಚಿಮದಲ್ಲೂ ವಾಸಿಸುವ ಮನುಷ್ಯಾತ್ಮಗಳೇ, ನಾನು ನಿಮ್ಮನ್ನು ಆಗ್ರಹಪೂರ್ವಕವಾಗಿ ಸತ್ಯ ಧರ್ಮವಾದ ಇಸ್ಲಾಮಿನ ಕಡೆಗೆ ಆಮಂತ್ರಿಸುತ್ತೇನೆ. ಪವಿತ್ರ ಖುರ್‌ಆನ್ ವಿವರಣೆ ನೀಡಿರುವ ದೇವನೇ ಸತ್ಯ ದೇವನಾಗಿದ್ದಾನೆ. ಶಾಶ್ವತ ಆಧ್ಯಾತ್ಮಿಕ ಜೀವಿತ ನೀಡುವ, ಪ್ರತಾಪಶಾಲಿ ಮತ್ತು ಪರಿಶುದ್ಧ ಸಿಂಹಾಸನದಲ್ಲಿ ಕುಳಿತುಕೊಂಡಿರುವ ಪ್ರವಾದಿ ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವ ಸಲ್ಲಮರಾಗಿರುವರು."

"ಅಲ್ಲಾಹನು ನನ್ನನ್ನು ಹಿಜರಿ ಹದಿನಾಲ್ಕನೆಯ ಶತಮಾನದ ಪ್ರಾರಂಭಕಾಲದಲ್ಲಿ ಇಸ್ಲಾಮ್ ಧರ್ಮವನ್ನು ಪುನಶ್ಚೇತನಗೊಳಿಸಲು, ಸಹಾಯ ಮಾಡಲು ಕಳುಹಿಸಿರುವನು-ಕಲಹಭರಿತ ಈ ಕಾಲಘಟ್ಟದಲ್ಲಿ ಪವಿತ್ರ ಖುರ್‌ಆನಿನ ಒಳಿತುಗಳನ್ನೂ, ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಭವ್ಯತೆಯನ್ನೂ ಪ್ರಕಟಿಸಿ, ಅಲ್ಲಾಹನಿಂದ ನನಗೆ ದೊರೆತ ಪ್ರಕಾಶ, ಅನುಗ್ರಹ, ಅದ್ಭುತ ದೃಷ್ಟಾಂತಗಳು ಮತ್ತು ಆಧ್ಯಾತ್ಮಿಕ ಜ್ಞಾನಗಳ ಮೂಲಕ, ಇಸ್ಲಾಮನ್ನು ಆಕ್ರಮಿಸುತ್ತಿರುವ ಎಲ್ಲಾ ಶತ್ರುಗಳಿಗೆ ಉತ್ತರ ನೀಡಲಿಕ್ಕೋಸ್ಕರ."

ಓ ಮುಸ್ಲಿಮ್ ಸಹೋದರರೇ,

ಅಲ್ಲಾಹನ ಕಡೆಯಿಂದ ನೇಮಿಸಲ್ಪಟ್ಟ ಮಹಾನುಭಾವರು ಮತ್ತು ಇಮಾಮರು ಬರುವಾಗ ಅವರನ್ನು ನಂಬುವುದು ಆವಶ್ಯಕವಾಗಿರುತ್ತದೆ. ಏಕೆಂದರೆ, ಅಲ್ಲಾಹನ ಎಲ್ಲಾ ಅನುಗ್ರಹಗಳು ಅವರೊಂದಿಗೆ ಸಂಬಂಧ ಜೋಡಿಸುವ ಮೂಲಕ ಲಭಿಸುತ್ತವೆ. ಅವರನ್ನು ಅನುಸರಿಸದಿದ್ದರೆ ಎಲ್ಲಾ ಕಡೆಗಳಲ್ಲೂ ಅಂಧಕಾರ ಮತ್ತು ಅಜ್ಞಾನ ತುಂಬಿರುತ್ತದೆ. ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರು ಹೀಗೆ ಹೇಳಿದರು:

"ಅಲ್ಲಾಹನು ನೇಮಿಸಿದ ಇಮಾಮರನ್ನು ನಂಬದೆ ಮೃತನಾಗುವವನ ಮೃತ್ಯು ಅಜ್ಞಾನ ಕಾಲದಲ್ಲಿ ಮೃತನಾಗುವವನ ಮೃತ್ಯುವಿನ ಹಾಗಿರುವುದು." (ಮುಸ್‌ನದ್ ಅಹ್ಮದ್ ಬಿನ್ ಹಂಬಲ್)

ಇದೇ ರೀತಿ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರು ಹೀಗೆ ತಾಕೀತು ಮಾಡಿ ಹೇಳಿದರು: "ಇಮಾಮ್ ಮಹ್‌ದಿ ಆಗಮಿಸಿದರೆ ಆವಶ್ಯಕವಾಗಿ ಅವರನ್ನು ಕಂಡು ನೀವು ಬೈಅತ್ (ನಿಷ್ಠೆಯ ಪ್ರತಿಜ್ಞೆ ) ಮಾಡಬೇಕು. ನೀವು ಹಿಮಗಡ್ಡೆಗಳ ಮೇಲೆ ಮೊಣಕಾಲೂರಿಕೊಂಡು ಹೋಗಬೇಕಾಗಿ ಬಂದರೂ ನೀವು ಹಾಗೆಯೇ ಮಾಡಿರಿ. ಅಲ್ಲಾಹನ ಖಲೀಫರಾಗಿ ಆಗಮಿಸುವ ಮಹ್‌ದಿಗೆ ನನ್ನ ಸಲಾಮ್ ತಲುಪಿಸಿರಿ. (ಮುಸ್ತದ್‌ರಕ್ ಹಾಕಿಮ್ ಕಿತಾಬುಲ್ ಫಿತನ್ ವಲ್ ಮಲಾಹಿಮ್ - ಬಾಬ್ ಖುರೂಜಿಲ್ ಮಹ್‌ದೀ)

ಮುಸ್ಲಿಮ್ ಸ್ನೇಹಿತರೇ,

ಹಿಜರಿ ಹದಿನಾಲ್ಕನೆಯ ಶತಮಾನದ ಪ್ರಾರಂಭ ಕಾಲದಲ್ಲಿ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮರು, "ನಾನೇ ಇಮಾಮ್ ಮಹ್‌ದೀ ಮತ್ತು ಮಸೀಹ್ ಮೌಊದ್ ಆಗಿರುವೆನು" ಎಂದು ವಾದಿಸಿದ ಅನುಗ್ರಹೀತ ಕಾಲಘಟ್ಟದಲ್ಲಿ ಅಲ್ಲಾಹನು ಅವರ ಸತ್ಯತೆಗೆ ಸಾಕ್ಷಿಯಾಗಿ ಅನೇಕ ದೃಷ್ಟಾಂತಗಳನ್ನು ತೋರಿಸಿದನು ಮತ್ತು ಹಿಂದಿನ ಧಾರ್ಮಿಕ ಗ್ರಂಥಗಳ ಭವಿಷ್ಯವಾಣಿಗಳನ್ನು ಈಡೇರಿಸಿದನು. ಅವರ ವಾದವು ಪ್ರತಿಯೊಬ್ಬ ಮುಸ್ಲಿಮನಿಗೆ ಗಮನಾರ್ಹವಾಗಿದೆ. ಅವರು ವಾಸ್ತವಿಕವಾಗಿ ಇಮಾಮ್ ಮಹ್‌ದಿಯಾಗಿದ್ದರೆ ಮಹ್‌ದಿಯ ಆಗಮನವನ್ನು ಪ್ರತೀಕ್ಷಿಸುತ್ತಿರುವ ಮುಸ್ಲಿಮ್ ಸಮುದಾಯ ಅವರನ್ನು ಅಂಗೀಕರಿಸಿ ನಂಬುವುದು ಆವಶ್ಯಕವಾಗಿದೆ. ಹಾಗೆ ಮಾಡದಿದ್ದರೆ ಅವರು ಅಲ್ಲಾಹನ ಮುಂದೆ ಪ್ರಶ್ನಿಸಲ್ಪಡುವರು.

ನೀವು ಯೋಚಿಸಿರಿ, ಅಲ್ಲಾಹನೊಂದಿಗೆ ಪ್ರಾರ್ಥಿಸಿರಿ. ನಿಮಗೆ ಸತ್ಯವು ಮನವರಿಕೆಯಾದರೆ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಸಲಾಮನ್ನು ಇಮಾಮ್ ಮಹ್‌ದಿ ಅಲೈಹಿಸ್ಸಲಾಮರಿಗೆ ತಲುಪಿಸಿ ಅವರು ಸ್ಥಾಪಿಸಿದ ಅಹ್ಮದಿಯಾ ಜಮಾಅತನ್ನು ಸೇರಿರಿ. ಮುಸ್ಲಿಮ್ ಸಮುದಾಯದ ಐಕ್ಯತೆ ಮತ್ತು ಇಸ್ಲಾಮನ್ನು ಜಯಶಾಲಿಯನ್ನಾಗಿ ಮಾಡುವ ವೈಭವಪೂರ್ಣ ಕೆಲಸ ಆಧ್ಯಾತ್ಮಿಕ ಸಂಘಟನೆಯಾದ ಅಹ್ಮದಿಯಾ ಜಮಾಅತ್ ಮೂಲಕ

ಈಡೇರಲಿದೆ. ಅಲ್ಲಾಹನು ತನ್ನ ವಾಗ್ದಾನಗಳ ಪ್ರಕಾರ ಇಮಾಮ್ ಮಹ್‌ದೀ ಅಲೈಹಿಸ್ಸಲಾಮರ ಮೂಲಕ ಅಹ್ಮದಿಯಾ ಜಮಾಅತ್‌ನಲ್ಲಿ ಖಿಲಾಫತ್ ಅಲಾ ಮಿನ್‌ಹಾಜಿನ್ನುಬುವ್ವತ್ (ನುಬುವ್ವತ್ ಮಾರ್ಗದಲ್ಲಿ ಖಿಲಾಫತ್) ಸ್ಥಾಪಿಸಿರುವನು. ಇತರ ಎಲ್ಲಾ ಮುಸ್ಲಿಮ್ ಪಂಗಡಗಳಲ್ಲಿ ಯಾರೂ ಈ ಅನುಗ್ರಹವನ್ನು ಹೊಂದಿರುವುದಿಲ್ಲ. ಅಲ್ಲಾಹನ ಅನುಗ್ರಹದಿಂದ ಅಹ್ಮದಿಯಾ ಖಿಲಾಫತ್‌ನ ಐದನೆಯ ಖಲೀಫ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹೇಬರ ನೇತೃತ್ವದಲ್ಲಿ ಇಸ್ಲಾಮಿನ ಪ್ರಚಾರದ ಪರಿಪೂರ್ಣತೆಗೋಸ್ಕರ ಬೃಹತ್ ಪ್ರಮಾಣದಲ್ಲಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಇದರ ಪರಿಣಾಮವಾಗಿ ಅಲ್ ಹಮ್‌ದುಲಿಲ್ಲಾಹ್ (ಅಲ್ಲಾಹನಿಗೆ ಎಲ್ಲಾ ಸುತ್ತಿಗಳು ಸಲ್ಲಲಿ) ಇಂದು "ಮುಸ್ಲಿಮ್ ಟೆಲಿವಿಷನ್ ಅಹ್ಮದಿಯಾ" (**MTA**) ಮೂಲಕ ಪ್ರತಿದಿನ ಇಪ್ಪತ್ತನಾಲ್ಕು ಗಂಟೆಗಳಲ್ಲೂ ಇಸ್ಲಾಮೀ ತತ್ವಗಳನ್ನು ಬಿತ್ತರಿಸಲಾಗುತ್ತಿದೆ. ಇದರ ಫಲಸ್ವರೂಪವಾಗಿ ಸಾವಿರಾರು ಸಾತ್ವಿಕ ಜನರು ಅರಬ್ ಮತ್ತು ಅರಬಿಯೇತರ ಸಮೂಹದಿಂದ ಅಹ್ಮದಿಯಾ ಜಮಾಅತಿಗೆ ಸೇರುತ್ತಿದ್ದಾರೆ. ಅಲ್ಲಾಹನ ಅನುಗ್ರಹದಿಂದ ಇನ್ನೂರಕ್ಕೂ ಮಿಕ್ಕಿದ ದೇಶಗಳಲ್ಲಿ ಅಹ್ಮದಿಯಾ ಜಮಾಅತ್ ಸ್ಥಾಪಿತವಾಗಿದೆ. ಪವಿತ್ರ ಖುರ್‌ಆನಿನ ಭಾಷಾಂತರವನ್ನು 72 ಭಾಷೆಗಳಲ್ಲಿ ಪ್ರಕಟಿಸಲಾಗಿದೆ. ಹ್ಯುಮೇನಿಟಿ ಫಸ್ಟ್ (**Humanity First**) ಎಂಬ ಹೆಸರಿನಲ್ಲಿ, ವಿಪತ್ತುಗಳ ಸಂದರ್ಭದಲ್ಲಿ ಪರಿಹಾರ ಮಾರ್ಗಗಳನ್ನು ಕೈಗೊಳ್ಳುವ ಸಂಸ್ಥೆಯನ್ನು ಸ್ಥಾಪಿಸಿ ಜಾಗತಿಕ ಮಟ್ಟದಲ್ಲಿ ಜಾತಿ, ಮತ, ಜನಾಂಗ ವ್ಯತ್ಯಾಸಮಾಡದೆ ಪರಿಹಾರೋಪಾಯಗಳನ್ನು ಕೈಗೊಳ್ಳಲಾಗುತ್ತಿದೆ. ವಿವಿಧ ದೇಶಗಳಲ್ಲಿ ಹಲವಾರು ಶಾಲೆಗಳನ್ನೂ ಆಸ್ಪತ್ರೆಗಳನ್ನೂ ಸ್ಥಾಪಿಸಲಾಗಿದೆ. (ಫಲ್ ಹಮ್ದು ಲಿಲ್ಲಾಹಿ ಅಲಾ ಧ್ಹಾಲಿಕ – ಅಲ್ಲಾಹನಿಗೆ ಅದರ ಬಗ್ಗೆ ಸ್ತುತಿ ಅರ್ಪಿಸುತ್ತೇವೆ.)

ಕೊನೆಯದಾಗಿ ನಾವು ಒಂದು ವಿಷಯದ ಬಗ್ಗೆ ವಿಶದೀಕರಿಸಲು ಬಯಸುತ್ತೇವೆ. ಅಹ್ಮದಿಯಾ ಜಮಾಅತ್ ಮತ್ತು ಅದರ ಸ್ಥಾಪಕರ ಬಗ್ಗೆ ಮುಸ್ಲಿಮರು ಕೆಟ್ಟ ಅಭಿಪ್ರಾಯ ಹೊಂದಲಿ ಎಂಬ ಉದ್ದೇಶದಿಂದ ಮುಸ್ಲಿಮ್ ಧಾರ್ಮಿಕ ಪಂಡಿತರು ಹೀಗೆ ಆಕ್ಷೇಪಿಸುತ್ತಾರೆ: "ಅಹ್ಮದಿಯರು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರನ್ನು ಖಾತಮುನ್ನಬಿಯ್ಯೀನ್ ಎಂದು ನಂಬುವುದಿಲ್ಲ, ಮಿರ್ಝಾ ಗುಲಾಮ್ ಅಹ್ಮದರನ್ನು ಅಂತ್ಯ ಪ್ರವಾದಿ ಎಂದು ನಂಬುತ್ತಾರೆ."(ನಊಧುಬಿಲ್ಲಾಹ್ – ಹೀಗೆ ಹೇಳುವುದರಿಂದ ಅಲ್ಲಾಹನು ನಮ್ಮನ್ನು ರಕ್ಷಿಸಲಿ). ಇದು ಅತ್ಯಂತ ಹೇಯ, ಸುಳ್ಳು ಆರೋಪವಾಗಿದೆ. ಅಹ್ಮದಿಯಾ ಜಮಾಅತಿನ ಸ್ಥಾಪಕರು ಹೀಗೆ ಹೇಳಿರುವರು: "ಖಾತಮುಲ್ ಅಂಬಿಯಾ ಅವರ ನುಬುವ್ವತನ್ನು ನಾನು ನಂಬುತ್ತೇನೆ. ಖತ್‌ಮೆನುಬುವ್ವತ್ (ನುಬುವ್ವತ್ ಸಮಾಪ್ತಿ) ಬಗ್ಗೆ ನಂಬಿಕೆ ಹೊಂದದವನನ್ನು ಧರ್ಮರಹಿತನೆಂದೂ ಇಸ್ಲಾಮಿನಿಂದ ಹೊರಗೆ ಹೋಗಿರುವವನೆಂದೂ ನಾನು ತಿಳಿಯುತ್ತೇನೆ." (ತಖ್‌ರೀರ್ ವಾಜಿಬುಲ್ ಇಅ್‌ಲಾನ್ 23-10-1891). "ನಂಬಿಕೆಗೆ ಸಂಬಂಧಿಸಿ ಅಲ್ಲಾಹನು ನಿಮ್ಮಿಂದ ಹೀಗೆ ಬಯಸುತ್ತಾನೆ: ದೇವನು ಒಬ್ಬನೇ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಅವನ ಪ್ರವಾದಿ ಆಗಿರುವರು. ಅವರು ಖಾತಮುಲ್ ಅಂಬಿಯಾ ಮತ್ತು ಎಲ್ಲಾ ಪ್ರವಾದಿಗಳಿಗಿಂತಲೂ ಶ್ರೇಷ್ಠ ಆಗಿರುವರು." (ಕಿಶ್ತೀ ನೂಹ್ – ಪುಟ 15, 1902 ರಲ್ಲಿ ಮುದ್ರಿತ)

ಮುಸ್ಲಿಮ್ ಸಹೋದರರೇ,

ನೀವು ಚಿಂತಿಸಿರಿ. ಅಹ್ಮದಿಯಾ ಜಮಾಅತನ್ನು ಖತ್‌ಮೆನುವ್ವತನ್ನು (ಪ್ರವಾದಿತ್ವ ಸಮಾಪ್ತಿಯನ್ನು) ನಿರಾಕರಿಸುವವರು ಎಂದು ಆಕ್ಷೇಪಿಸುವ ಅಹ್ಲೆ ಸುನ್ನತ್, ಶಿಯಾ, ದೇವ್‌ಬಂದಿ, ಬರೇಲವಿ, ಅಹ್ಲೆಹದೀಸ್ ಮತ್ತು ಇತರ ಮುಸ್ಲಿಮ್ ಪಂಗಡಗಳು, ತಾವು ಹಝ್ರತ್ ಮುಹಮ್ಮದ್ ರಸೂಲ್ (ಸ)ರನ್ನು ಅಂತಿಮ ಪ್ರವಾದಿ ಎಂದು ನಂಬುವವರೆಂದು ವಾದಿಸಿ "ಲಾ ನಬಿಯ್ಯ ಬಅ್‌ದೀ" (ನನ್ನ ನಂತರ ಪ್ರವಾದಿ ಇಲ್ಲ) ಎಂಬ ಹದೀಸು ಪ್ರಕಾರ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ನಂತರ ಎಲ್ಲಾ ರೀತಿಯ ಪ್ರವಾದಿತ್ವದ ಬಾಗಿಲು ಮುಚ್ಚಲ್ಪಟ್ಟಿದೆ ಎಂದು ಪ್ರತಿಪಾದಿಸುತ್ತಾರಾದರೂ ಅದೇ ಸಮಯ, ಆಖಿರೀ ಝಮಾನದಲ್ಲಿ (ಲೋಕದ ಅಂತಿಮ ಕಾಲಘಟ್ಟದಲ್ಲಿ) ಮುಸ್ಲಿಮ್ ಸಮುದಾಯದ ಸುಧಾರಣೆಗಾಗಿ ಹಝ್ರತ್ ಈಸಾ ಅಲೈಹಿಸ್ಸಲಾಮ್ ಆಕಾಶದಿಂದ ಇಳಿದು ಬರುವರೆಂದು ದೃಢವಾಗಿ ನಂಬಿ ಅದರ ಬಗ್ಗೆ ಸಾಮಾನ್ಯ ಮುಸ್ಲಿಮರಿಗೆ ಸಹ ಒತ್ತಿ ಹೇಳುತ್ತಾರೆ.

ಹಝ್ರತ್ ಈಸಾ ಅಲೈಹಿಸ್ಸಲಾಮ್ ನಬಿ (ಪ್ರವಾದಿ) ಆಗಿರುವರು ಮತ್ತು ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರನ್ನು ಅನುಸರಿಸುವವರೂ ಆಗುವರು ಎಂದು ನಂಬುವವರು ಖತ್‌ಮೆನುಬುವ್ವತ್‌ಗೆ ವಿರುದ್ಧವಾಗಿ ನಂಬಿಕೆ ಹೊಂದಿದವರೆಂದು ಸಾಬೀತು ಆಗುವುದಿಲ್ಲವೇ? ಖಂಡಿತವಾಗಿಯೂ ಆಗುತ್ತದೆ. ವಾಸ್ತವಿಕವಾಗಿ ಹಝ್ರತ್ ಈಸಾ ಅಲೈಹಿಸ್ಸಲಾಮರು ಇನ್ನಿತರ ಎಲ್ಲಾ ಪ್ರವಾದಿಗಳ ಹಾಗೆ ಮೃತರಾಗಿರುವರು. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆ ಹೇಳಿದ್ದಾನೆ: "ವಮಾ ಮುಹಮ್ಮದುನ್ ಇಲ್ಲಾ ರಸೂಲುನ್ ಖದ್ ಖಲತ್ ಮಿನ್ ಖಬ್ಲಿಹಿರ್ರುಸುಲ್" – "ಮುಹಮ್ಮದ್ ಕೇವಲ ಓರ್ವ ಸಂದೇಶವಾಹಕರಾಗಿದ್ದಾರೆ. ಅವರಿಗಿಂತ ಹಿಂದಿನ ಎಲ್ಲಾ ಸಂದೇಶವಾಹಕರು ಗತಿಸಿದ್ದಾರೆ." (ಪವಿತ್ರ ಖುರ್‌ಆನ್ 3:145). ಎಲ್ಲಾ ಪ್ರವಾದಿಗಳ ಹಾಗೆ ಹಝ್ರತ್ ಈಸಾ ಅಲೈಹಿಸ್ಸಲಾಮರು ಸಹ ಮೃತರಾಗಿರುವರು ಎಂದು ಈ ವಚನದಿಂದ ಸ್ಪಷ್ಟವಾಗಿ ತಿಳಿಯುತ್ತದೆ.

ಹದೀಸುಗಳಲ್ಲಿ ಹಝ್ರತ್ ಈಸಾ ಅಲೈಹಿಸ್ಸಲಾಮರ ಆಗಮನವನ್ನು "ನುಝೂಲ್" (ಇಳಿಯುವಿಕೆ) ಎಂಬ ಶಬ್ದವನ್ನು ಬಳಸಿ ಸೂಚಿಸಲಾಗಿದೆ. ಆದುದರಿಂದ ಮೌಲವಿಗಳಿಗೆ ತಪ್ಪು ಗ್ರಹಿಕೆಯಾಗಿ ಆಕಾಶದಿಂದ ಅವರು ಇಳಿಯುವರು ಎಂದು ಭಾವಿಸಿದರು. ಪವಿತ್ರ ಖುರ್‌ಆನ್‌ನಲ್ಲಿ ಈ ಪದವನ್ನು ಹಲವೆಡೆ ಬಳಸಲಾಗಿದೆ. ಈ ಕೆಳಗಿನ ಉದಾಹರಣೆಗಳನ್ನು ನೋಡಿರಿ:

"ಅನ್‌ಝಲ್‌ನಲ್ ಅಲೈಕುಮ್ ಲಿಬಾಸ"– "ನಿಮಗೆ ನಾವು ಉಡುಪನ್ನು ಇಳಿಸಿದ್ದೇವೆ." (ಪವಿತ್ರ ಖುರ್‌ಆನ್ 7:27)

"ಅನ್‌ಝಲ್‌ನಲ್ ಹದೀದ" – "ನಾವು ಕಬ್ಬಿಣವನ್ನು ಇಳಿಸಿದ್ದೇವೆ." (ಪವಿತ್ರ ಖುರ್‌ಆನ್ 57:26)

ಮೇಲಿನ ವಚನಗಳ ಅರ್ಥ ಬಟ್ಟೆಬರೆಗಳನ್ನೂ ಕಬ್ಬಿಣವನ್ನೂ ಆಕಾಶದಿಂದ ಇಳಿಸಲಾಗುತ್ತಿವೆ ಎಂದಲ್ಲ. ಅವುಗಳನ್ನು ಸೃಷ್ಟಿಸಲಾಗಿದೆ, ಅವುಗಳನ್ನು ಒದಗಿಸಿಕೊಡಲಾಗಿದೆ ಎಂದು ಅದರ ಅರ್ಥವಾಗಿದೆ. ಹಝ್ರತ್ ಈಸಾ ಅಲೈಹಿಸ್ಸಲಾಮರು ನುಝೂಲ್ ಆಗುವರು (ಇಳಿದು ಬರುವರು) ಎಂಬುದಕ್ಕೆ ಸಹ ಇದೇ ರೀತಿ ಅರ್ಥ ನೀಡಬೇಕಾಗಿದೆ.

ವಾಸ್ತವಿಕ ವಿಷಯವೇನೆಂದರೆ, ಹಝ್ರತ್ ಈಸಾ ಅಲೈಹಿಸ್ಸಲಾಮ್ ಇನ್ನಿತರ ಪ್ರವಾದಿಗಳ ಹಾಗೆ ಮೃತರಾದರು. ಚಾರಿತ್ರಿಕ ಘಟನೆಗಳ ಮೂಲಕ ಸಾಬೀತಾಗುವುದೇನೆಂದರೆ, ಶಿಲುಬೆಗೇರಿಸಿದ ನಂತರ ಸಜೀವವಾಗಿ ಶಿಲುಬೆಯಿಂದ ಇಳಿದ ಹಝ್ರತ್ ಈಸಾ ಅಲೈಹಿಸ್ಸಲಾಮರು ಪಾಲೆಸ್ತೀನ್‌ನಿಂದ ಕಾಶ್ಮೀರದ ಕಡೆಗೆ ಹೋದರು. ಕಾಶ್ಮೀರದ ಶ್ರೀನಗರದ ಖಾನ್‌ಯಾರ್ ಬಡಾವಣೆಯಲ್ಲಿ ಅವರ ಗೋರಿ ಇದೆ. ಅವರು ಆಕಾಶಕ್ಕೆ ಹೋಗಿಯೇ ಇಲ್ಲ ಎಂದು ಸ್ಪಷ್ಟವಾಗಿರುವಾಗ ಅವರು ಮರಳಿ ಆಕಾಶದಿಂದ ಬರುವುದಾದರೂ ಹೇಗೆ? ಇವುಗಳೆಲ್ಲಾ ತಪ್ಪು ವಿಚಾರಗಳ ಪರಿಣಾಮಗಳಾಗಿವೆ.

ಆಗಮಿಸಬೇಕಾಗಿರುವ ವಾಗ್ದತ್ತ ಮಸೀಹ್ ಮತ್ತು ಮಹ್‌ದೀ ಮುಸ್ಲಿಮ್ ಸಮುದಾಯದಿಂದಲೇ ಬರುವರು. ಹಾಗೆ ಆಗಮಿಸುವ ಮಹಾಪುರುಷರು ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ದಾಸನಾಗಿ ಪರಿಪೂರ್ಣ ವಿಧೇಯತೆಯಿಂದ ವರ್ತಿಸಿದುದರಿಂದಲೂ ಅತ್ಯಂತ ಹೆಚ್ಚು ಅವರನ್ನು ಪ್ರೀತಿಸಿದುದರಿಂದಲೂ ಮಹ್‌ದೀ ಮಸೀಹರಾಗಿ ನೇಮಿಸಲ್ಪಟ್ಟು ಉಮ್ಮತೀ ನಬಿ (ಶಿಷ್ಯ ಪ್ರವಾದಿ) ಎಂಬ ಅಮೂಲ್ಯ ಪದವಿ ಗಳಿಸಿದರು. ಅವರು ಇಸ್ಲಾಮಿನ ಜಯಗಳಿಸುವ ಅಭಿಯಾನದ ಜಯಶಾಲಿ ಸೇನಾಧಿಪತಿಯಾಗಿ ನೇಮಿಸಲ್ಪಟ್ಟರು. ಅವರ ಹೆಸರು ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ (ಅಲೈಹಿಸ್ಸಲಾಮ್) ಎಂದಾಗಿದೆ.

ಖತಮೆನುಬುವ್ವತ್ ಮುದ್ರೆಯನ್ನು ಮುರಿಯದೆ ಅವರಿಗೆ ಉಮ್ಮತೀ ನಬಿ ಎಂಬ ಪದವಿ ಹೇಗೆ ದೊರಕಿತು? ಇದರ ಬಗ್ಗೆ ಅವರು ಹೀಗೆ ಹೇಳುತ್ತಾರೆ: "ನನಗೆ ಈ ಗೌರವ, ನಾನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರನ್ನು ಅನುಸರಿಸಿದುದರಿಂದ ದೊರಕಿತು. ನಾನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಉಮ್ಮತ್‌ಗೆ (ಸಮುದಾಯಕ್ಕೆ) ಸೇರಿದವನಾಗದೆ ಇರುತ್ತಿದ್ದರೆ, ಲೋಕದ ಎಲ್ಲಾ ಪರ್ವತಗಳಷ್ಟು ನನ್ನ ಸತ್ಕರ್ಮಗಳು ಆಗಿದ್ದರೂ ಅಲ್ಲಾಹನಿಂದ ಸಂದೇಶವಾಣಿ ಪಡೆಯುವ ಗೌರವವನ್ನು ಖಂಡಿತವಾಗಿಯೂ ನಾನು ಗಳಿಸುತ್ತಿರಲಿಲ್ಲ. ಈಗ ಮುಹಮ್ಮದೀ ನುಬುವ್ವತ್ ಹೊರತು ಉಳಿದ ಎಲ್ಲಾ ನುಬುವ್ವತ್‌ಗಳು ಕೊನೆಗೊಂಡಿವೆ. ಶರೀಅತ್ ತರುವ ಯಾವ ನಬಿಯೂ ಬರಲು ಸಾಧ್ಯವಿಲ್ಲ. ಆದರೆ ಶರೀಅತ್ ರಹಿತ ನಬಿ ಬರಬಹುದು. ಆದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಉಮ್ಮತೀ (ಎಂದರೆ ಸಮುದಾಯಕ್ಕೆ ಸೇರಿದವನು) ಮಾತ್ರ ಹಾಗೆ ಆಗಬಲ್ಲನು. ಇದೇ ಕಾರಣದಿಂದ ನಾನು ಉಮ್ಮತೀ ಆಗಿರುವೆನು ಮತ್ತು ನಬಿಯೂ ಆಗಿರುವೆನು." (ತಜಲ್ಲಿಯಾತೆ ಇಲಾಹಿಯ್ಯ – ಪುಟ 24)

ಹಝ್ರತ್ ಮಹ್‌ದೀ ಮಸೀಹ್ ಅಲೈಹಿಸ್ಸಲಾಮ್ ಒಂದು ಪದ್ಯದಲ್ಲಿ ಹೀಗೆ ಹೇಳಿರುವರು:

ವಖ್ತ್ ಥಾ ವಖ್‌ತೇ ಮಸೀಹಾ, ನ ಕಿಸೀ ಔರ್ ಕಾ ವಖ್ತ್
ಮೈಂ ನ ಆತಾ ತೋ, ಕೊಯೀ ಔರ್ ಹೀ ಆಯಾ ಹೋತಾ

"ಸಮಯ ಮಸೀಹ್ ಮೌಊದ್ ಬರುವ ಸಮಯವೇ ಆಗಿತ್ತು. ನಾನು ಬರದೆ ಇರುತ್ತಿದ್ದರೆ, ಬೇರೆ ಯಾರಾದರೂ ಮಸೀಹ್ ಮೌಊದ್ ಆಗಿ ಬರುತ್ತಿದ್ದರು."

♦

**ಪ್ರತಿಕ್ರಿಯೆ**

# ಅಹ್ಮದೀ ಮುಸ್ಲಿಮರು ಶಾಂತಿ ಪ್ರಿಯರು

ಆರ್.ಎಸ್.ಎಸ್. ಕಾದಿಯಾನಿ ಸಮುದಾಯವನ್ನು ಇಂಡಿಯನ್ ಮುಜಾಹಿದೀನ್‌ಗೆ ಹಣ ಪೂರೈಸಲು ಬಳಸಿಕೊಳ್ಳುತ್ತಿದೆ ಎಂದು ಗುಜರಾತ್ ವಿಧಾನಸಭಾ ವಿರೋಧ ಪಕ್ಷದ ಮುಖಂಡ ಶಂಕರ್‌ಸಿಂಗ್ ವಘೇಲಾ ಆರೋಪಿಸಿದ್ದಾರೆ ಎಂಬ ವಾರ್ತೆ ಕೆಲವು ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. (ಉದಾ: ಉದಯವಾಣಿ 14–11–2013). ಅಹ್ಮದೀ ಮುಸ್ಲಿಮರನ್ನು ಅವರ ವಿರೋಧಿಗಳು ಕೆಲವೊಮ್ಮೆ ಕಾದಿಯಾನಿಗಳೆಂದು ಸಂಭೋಧಿಸುತ್ತಾರೆ. ಹಾಗಾಗಿ ಈ ವಾರ್ತೆ ಅಹ್ಮದೀ ಮುಸ್ಲಿಮರನ್ನು ಉದ್ದೇಶಿಸಿ ಹೇಳಿರುವುದಾದರೆ ನಾವು ಅದನ್ನು ಕಠಿಣವಾಗಿ ಖಂಡಿಸುತ್ತೇವೆ.

ಅಹ್ಮದಿಯಾ ಮುಸ್ಲಿಮ್ ಜಮಾಅತ್ ಒಂದು ಧಾರ್ಮಿಕ ಸಂಘಟನೆಯಾಗಿದೆ. ಅದಕ್ಕೆ ಯಾವುದೇ ರಾಜಕೀಯ ಪಕ್ಷದೊಂದಿಗೆ ಏನೂ ಸಂಬಂಧವಿಲ್ಲ. ಅಹ್ಮದಿಯಾ ಮುಸ್ಲಿಮ್ ಜಮಾಅತ್ ಶಾಂತಿಪ್ರಿಯ ಸಮುದಾಯವೆಂದು ಇಡೀ ಪ್ರಪಂಚಕ್ಕೇ ವೇದ್ಯವಾಗಿದೆ. ಅದು ಭಯೋತ್ಪಾದಕ ಚಟುವಟಿಕೆಗಳಿಗೆ ಪ್ರಚೋದನೆ ನೀಡುತ್ತದೆಂದು ಇಷ್ಟರವರೆಗೆ ಯಾರೂ ಆರೋಪಿಸಿಲ್ಲ. ಭಯೋತ್ಪಾದನೆ ವಿರೋಧವಾಗಿ ಅಹ್ಮದಿಯಾ ಜಮಾಅತ್ ಪ್ರಪಂಚದಾದ್ಯಂತ ಅಹರ್ನಿಶಿ ಪ್ರಯತ್ನಪಡುತ್ತದೆ. ಪಾಕಿಸ್ತಾನ, ಇಂಡೋನೇಶ್ಯಾ ಮುಂತಾದ ದೇಶಗಳಲ್ಲಿ ಅಹ್ಮದೀ ಮುಸ್ಲಿಮರು ಇತರರ ಭಯೋತ್ಪಾದಕ ಚಟುವಟಿಕೆಗಳಿಂದ ಸ್ವತಃ ಹಾನಿಗೊಳಗಾಗಿದ್ದಾರೆ.

ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಪಂಚಮ ಖಲೀಫ – ಜಾಗತಿಕ ಸರ್ವೋಚ್ಚ ನಾಯಕ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಮಾನವೀಯ ಹಕ್ಕು, ಸಮಾನತೆ, ಪರಸ್ಪರ ಗೌರವ, ಸ್ವಾತಂತ್ರ್ಯದ ಹಕ್ಕು ಸರ್ವರಿಗೂ ನೀಡಿ ಜಗತ್ತಿನಲ್ಲಿ ಶಾಂತಿಯನ್ನು ಕಾಪಾಡಿ, ಮೂರನೇ ಜಾಗತಿಕ ಮಹಾಯುದ್ಧದ ಕರಿನೆರಳಿನಲ್ಲಿರುವ ಲೋಕವನ್ನು ಪಾರುಮಾಡಬೇಕೆಂದು ಪೋಪ್‌ರಿಗೂ ಲೋಕದ ಮಹಾ ಶಕ್ತಿ ರಾಷ್ಟ್ರ ನಾಯಕರಿಗೂ ಪತ್ರ ಬರೆದಿದ್ದಾರೆ. ಅವರು ಬ್ರಿಟಿಷ್ ಪಾರ್ಲಿಮೆಂಟ್, ಜರ್ಮನಿಯ ಮಿಲಿಟರಿ ಹೆಡ್ ಕ್ವಾರ್ಟರ್ಸ್, ಅಮೇರಿಕದ ಕ್ಯಾಪಿಟೋಲ್ ಹಿಲ್, ಬೆಲ್ಜಿಯಮಿನ ಯುರೋಪಿಯನ್ ಪಾರ್ಲಿಮೆಂಟ್ ಇತ್ಯಾದಿ ಕಡೆಗಳಲ್ಲಿ ಜಾಗತಿಕ ಶಾಂತಿ ಸ್ಥಾಪನೆಗೋಸ್ಕರ ಭಾಷಣ ಮಾಡಿದ್ದಾರೆ.

ಶಂಕರ್‌ಸಿಂಗ್ ವಘೇಲ ಅವರು ತಮ್ಮ ಹೇಳಿಕೆಯನ್ನು ಪುಷ್ಟೀಕರಿಸಲು ತಮ್ಮ ಬಳಿಯಿರುವ ಸಾಕ್ಷ್ಯಾಧಾರಗಳನ್ನು ಪ್ರಕಟಿಸಬೇಕೆಂದೂ ಇಲ್ಲದಿದ್ದರೆ ಅವರು ತಮ್ಮ ಈ ಬೇಜವಾಬ್ದಾರಿ ಹೇಳಿಕೆಯನ್ನು ಹಿಂಪಡೆದು ಅಹ್ಮದೀ ಮುಸ್ಲಿಮರ ಕ್ಷಮೆಯಾಚಿಸಬೇಕೆಂದೂ ನಾವು ಆಗ್ರಹಪಡಿಸುತ್ತೇವೆ.

**ಮುಹಮ್ಮದ್ ಯೂಸುಫ್**
ಅಧ್ಯಕ್ಷ, ಅಹ್ಮದಿಯಾ ಮುಸ್ಲಿಮ್ ಜಮಾಅತ್, ಮಂಗಳೂರು.

**LOVE FOR ALL**
**HATRED FOR NONE**
**ಎಲ್ಲರೊಂದಿಗೆ ಪ್ರೀತಿ**
**ಯಾರೊಂದಿಗೂ ದ್ವೇಷವಿಲ್ಲ**

## ಪ್ರತಿಕ್ರಿಯೆ

# ಧರ್ಮವೊಂದೇ ಎಂಬುದು ನಿಜಕ್ಕೂ ಭ್ರಮೆ!

ಡಿಸೆಂಬರ್ 9ರ ವಿಜಯವಾಣಿಯಲ್ಲಿ ಪ್ರಕಟವಾದ ಭೈರಪ್ಪನವರ ಅಭಿಮತ ನಿಜವೇ ಆಗಿದೆ! ಆದರೆ ಅವರು ಅದಕ್ಕೆ ನೀಡಿದ ಉದಾಹರಣೆ ಮಾತ್ರ ಹಾಸ್ಯಾಸ್ಪದವೂ ಕೋಮು ಪ್ರಚೋದಕವೂ ಆಗಿದೆ! ಧರ್ಮಗ್ರಂಥವನ್ನು ಸರಿಯಾಗಿ ಅಭ್ಯಸಿಸದೆ, ಎಲ್ಲಿಂದಲೋ, ಇವರಂಥ ಪೂರ್ವಗ್ರಹ ಪೀಡಿತರು ಬರೆದುದನ್ನು ಎರವಲು ಪಡೆದು. ಒಂದು ಧರ್ಮವನ್ನು ಕಪೋಲಕಲ್ಪಿತವಾಗಿ ಹೀಯಾಳಿಸಿ, ಸ್ವಸಂತೃಪ್ತಿಪಟ್ಟುಕೊಂಡು, ತನ್ಮೂಲಕ ತಮ್ಮ ಧರ್ಮದವರಿಂದಲೂ ಪ್ರಶಂಸೆಗಳಿಸಲು ಗೈದ ಒಂದು ಪೂರ್ವಯೋಜಿತ ಕುತ್ಸಿತಪ್ರಯತ್ನವೆಂದರೆ ತಪ್ಪಲ್ಲ.

ತಮ್ಮ ಎಲ್ಲಾ ಕಾದಂಬರಿಗಳಲ್ಲೂ ಅವರು ತಮ್ಮ ಪರಿಪೂರ್ಣ ಅನುಭವಪಾಂಡಿತ್ಯವನ್ನು ಧಾರೆಯೆರೆದು, ಅದರ ಪಾತ್ರಗಳಲ್ಲೇ ಬೆರೆತು (ನಾಯಿನೆರಳು ಕಾದಂಬರಿ ! ) ರಚಿಸಿ ಜೀವ ತುಂಬಿದ್ದಾರೆ ! ಆದರೆ ಇಲ್ಲಿ, ಪೂರ್ವಗ್ರಹ ಪೀಡಿತರಾಗಿ, ತನಗಾಗದ ಒಂದು ಧರ್ಮವನ್ನು ಅವಹೇಳನ ಗೈಯ್ಯುವ ಏಕಮೇವ ಉದ್ದೇಶಕ್ಕಾಗಿ ಮಾತ್ರ, ಇಂತಹ ಆಧಾರ ರಹಿತ 'ನುಡಿಮುತ್ತು'ಗಳನ್ನು ಉದುರಿಸಿ ಕೃತಕೃತ್ಯರಾಗಿದ್ದಾರೆ! ಆದರೆ ತನ್ನ ಧರ್ಮದ ಹಿರಿಮೆ ಮೆರೆಯಲು ಇಂತಹ ಹಿರಿಯ ಸಾಹಿತಿ ಈ ಮಟ್ಟದಲ್ಲಿ ತಮ್ಮ ಬುದ್ಧಿಮತ್ತೆಯನ್ನು ಈ ರೀತಿ ಕಿರಿದಾಗಿ ಪ್ರದರ್ಶಿಸಿದ್ದು ಅವರ ಬಗ್ಗೆ ಭ್ರಮನಿರಸನಗೊಳ್ಳುವಂತಾಯ್ತು!

ಹೌದು! ಅವರಂದಂತೆ ಎಲ್ಲಾ ಧರ್ಮಗಳೂ ಒಂದೇ ಅಲ್ಲ! ಏಕೆಂದರೆ ಅವರು ನಿಂದಿಸಿದ ಧರ್ಮದಲ್ಲಿ ಬಹುದೇವಾರಾಧನೆಯಿಲ್ಲ ! ದೇವ ಪ್ರಾರ್ಥನೆಯಲ್ಲಿ ತಾರತಮ್ಯ, ಮೇಲುಕೀಳಿಲ್ಲ. ಭಿಕ್ಷುಕ, ಶ್ರೀಮಂತರಿಗೆ ಒಂದೇ ಪಂಕ್ತಿ ; ಮೇಲ್ಜಾತಿ, ಕೀಳ್ಜಾತಿ, ಎಂಬ ಭೇದಭಾವವಿಲ್ಲ! ದಿನಕ್ಕೆ ಐದು ಬಾರಿ ದೇವಪ್ರಾರ್ಥನೆ (ಹೃತ್ಪೂರ್ವಕ) ಕಡ್ಡಾಯ! (ಅನ್ಯೆತಿಕತೆ, ಅನ್ಯಾಯಗಳಿಂದ ಗಳಿಸಿದ ಹಣವನ್ನು ಇತರರ ಕೈಯಲ್ಲಿ, ಯಾವ್ಯಾವುದಕ್ಕೋ ಪೂಜೆಸಲ್ಲಿಸಿ, ದೇವನಿಂದನೆ ಮಾಡುವ ಆಚಾರವಿಲ್ಲ!) ಅಸ್ಪೃಶ್ಯತೆ, ಕುಡಿತ, ವ್ಯಭಿಚಾರ, ದುರಹಂಕಾರ, ವಂಚನೆ, ಪರದೂಷಣೆಗೆ ಆಸ್ಪದವಿಲ್ಲ! ಬಾಲ್ಯವಿವಾಹ, ಸತಿಸಹಗಮನ, ದೇವದಾಸಿ, ಮಡೆಸ್ನಾನ, ಬೆತ್ತಲೆ ಸೇವೆಗಳೆಂಬ ಆಚಾರಗಳಿಲ್ಲ. ಜೂಜು, ಆಮೋದಪ್ರಮೋದ, ಕೊಲೆ ಸುಲಿಗೆ, ಆತ್ಮಹತ್ಯೆ ಇವೆಲ್ಲ ಅಕ್ಷಮ್ಯ! ಲೋಕದ ಸುಖೀಜೀವನವೆಲ್ಲಾ ನಶ್ವರ; ಸಕಲವನ್ನು ಏಕದೇವನಿಗೆ ಸಮರ್ಪಿಸಿ, ದೇವಭಯದಿಂದ ಸದಾ ಸನ್ಮಾರ್ಗದಲ್ಲಿಯೇ ಬದುಕುವುದು ದೇವಸಂತೃಪ್ತಿಗಿರುವ ಪರಮ ಮಾರ್ಗವೆಂದು ಸಾರಿರುವುದೇ ಈ ಧರ್ಮ!

ಹಾಗೆಂದು ಈ ಧರ್ಮದ ಹೆಸರಿಟ್ಟುಕೊಂಡು ಇಂದು ವಿಶ್ವದೆಲ್ಲೆಡೆ ವಿಜೃಂಭಿಸುತ್ತಿರುವ 'ತಾಲಿಬಾನೀ' ಸಂಸ್ಕೃತಿ, ಹಿಂಸಾಚಾರ, ಹೇಯಕೃತ್ಯಗಳು ಖಂಡಿತ ಈ ಧರ್ಮದ ತತ್ವ ಬೋಧನೆಗಳಲ್ಲ! ಈ ಧರ್ಮವನ್ನು ಸರಿಯಾಗಿ ಅನುಸರಿಸುವವರಿಗೆ ಇಂತಹ ದುಷ್ಕೃತ್ಯಗಳ ಗಂಧಗಾಳಿಗೂ ಆಸ್ಪದವಿಲ್ಲ. ಇದು ಪೊಳ್ಳು ಮತಾಂಧರ ಮಾತಿಗೆ ಮರುಳಾಗಿ ತಮ್ಮನ್ನು ಬಲಿಕೊಡುತ್ತಿರುವ ನರಾಧಮರ ಆಟಾಟೋಪಗಳು! ಇಂತಹವರ ವರ್ತನೆಯೇ ಈ ಧರ್ಮವನ್ನು ದ್ವೇಷಿಸಲು ತುದಿಗಾಲಲ್ಲಿ ನಿಂತಿರುವ ಭೈರಪ್ಪನಂತಹವರಿಗೆ ಆಹಾರ ಒದಗಿಸುತ್ತಿರುವುದು! ಪಾಪ! ಭೈರಪ್ಪನವರು ಧರ್ಮವೆಂದು ಆಯ್ದುದು ಇದನ್ನು ಮಾತ್ರ !

ಪರಮತ ಸಹಿಷ್ಣುತೆ, ಶಾಂತಿ, ಸಹೋದರತೆ, ಸ್ತ್ರೀ ಸ್ವಾತಂತ್ರ್ಯವನ್ನು ಸಾರುವ, ಏಕದೇವ ಸಿದ್ಧಾಂತವನ್ನು ಬಿಂಬಿಸುವ ಒಂದು ಪರಿಶುದ್ಧವೂ ಪರಿಪೂರ್ಣವೂ ಆದ ಧರ್ಮ ಇದಾಗಿದೆ. ನಾವೆಲ್ಲ ಒಂದೇ ದೇವರ ಸೃಷ್ಟಿ. ನಮ್ಮೆಲ್ಲರಿಗೂ ಮತ ಸ್ವಾತಂತ್ರ್ಯವಿದೆಯೇ ವಿನಾ ಬಲಾತ್ಕಾರವಿಲ್ಲವೆಂಬುದು ಇದರ ಸಿದ್ಧಾಂತ. ಹೀಗಾಗಿ ಖಂಡಿತವಾಗಿಯೂ ಈ ಧರ್ಮವೂ ಬೇರೆ ಧರ್ಮವೂ ಒಂದೇ ಅಲ್ಲ ಎಂದು ನಾನು ಕೂಡ ಶ್ರೀಯುತ ಭೈರಪ್ಪನವರೊಂದಿಗೆ ಸಹಮತ ವ್ಯಕ್ತಪಡಿಸುತ್ತೇನೆ!

**ಅಬ್ದುಲ್ ಕರೀಮ್**
**ಮಂಗಳೂರು**

**************************

# ಖಂಡನೀಯ ಹೇಳಿಕೆ

ಎಲ್ಲ ಧರ್ಮಗಳು ಒಂದೇ ಅಲ್ಲ; ತಮ್ಮ ಧರ್ಮ ಎಲ್ಲ ಧರ್ಮಗಳಿಗಿಂತಲೂ ಅತ್ಯುತ್ತಮವಾದುದು ಎಂಬಂತೆ ಅರ್ಥ ಬರುವ ಹೇಳಿಕೆಯನ್ನು ಕಾದಂಬರಿಕಾರರಾದ. ಭೈರಪ್ಪನವರು ಹೇಳಿದರೆಂದು ವಿಜಯವಾಣಿ ಡಿಸೆಂಬರ್ 9ರ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಭೈರಪ್ಪನವರ ಹೆಚ್ಚಿನ ಎಲ್ಲಾ ಕಾದಂಬರಿಗಳನ್ನು ಓದಿ ಮೆಚ್ಚಿಕೊಂಡ ನನಗೆ ಅವರ ಈ ಮಾತನ್ನು ಕೇಳಿ ಆಘಾತವಾಯಿತು. ಇದು ಅವರಿಗೆ ಇತರ ಧರ್ಮಗಳ ಬಗ್ಗೆ ಇರುವ ಅಜ್ಞಾನವನ್ನು ಸಾರುತ್ತದೆ. "ಧರ್ಮದಲ್ಲಿ ಬಲಾತ್ಕಾರವಿಲ್ಲ", "ನಿನಗೆ ನಿನ್ನ ಧರ್ಮ, ನನಗೆ ನನ್ನ ಧರ್ಮ"ಎಂದು ಪರಧರ್ಮ ಸಹಿಷ್ಣುತೆಯನ್ನು ಸಾರುವ ಒಂದು ಶಾಂತಿಪ್ರಿಯ ಧರ್ಮವನ್ನು ಒಂದು ಅತಿ ಕ್ರೂರ ಧರ್ಮವೆಂಬ ರೀತಿಯಲ್ಲಿ ಬಿಂಬಿಸಿರುವುದು ನಿಜಕ್ಕೂ ಅಕ್ಷಮ್ಯ.

ಭೈರಪ್ಪನವರು ಆಕ್ಷೇಪಿಸಿದ ಧರ್ಮವು ಅನ್ಯ ಮತೀಯರನ್ನು ಕೊಲ್ಲಬೇಕೆಂದು 23 ಕಡೆ ಹೇಳಿದೆಯೆಂದೂ ಹಾಗೆ ಮಾಡಿದವರಿಗೆ ಸ್ವರ್ಗ ಸಿಗುತ್ತದೆಂದೂ ಅಲ್ಲಿ 72 ಸುಂದರಿಯರ ಸೇವೆ ಲಭಿಸುತ್ತದೆಂದೂ ಭೈರಪ್ಪನವರು ನಿರಾಧಾರವಾದ ಆರೋಪವನ್ನು ಮಾಡಿದ್ದಾರೆ. ಈ ರೀತಿ, ಅವರು ಆರೋಪಿಸಿದ ಧರ್ಮ ಗ್ರಂಥದ ಯಾವ ವಚನಗಳಲ್ಲಿ ಹೇಳಿದೆಯೆಂದು ತೋರಿಸಿಕೊಡಲು ನಾನು ಅವರಿಗೆ ಪಂಥಾಹ್ವಾನವನ್ನೀಯುತ್ತೇನೆ. ಈ ರೀತಿ ಇಲ್ಲದ್ದನ್ನು ಇದೆಯೆಂದು ಹೇಳಿ ವಿವಿಧ ಧರ್ಮೀಯರಲ್ಲಿ ವೈರತ್ವ ಬೆಳೆಸಲು ಪ್ರಚೋದಿಸುತ್ತಿರುವ ಭೈರಪ್ಪನವರ ಮಾತುಗಳು ನಿಜಕ್ಕೂ ಖಂಡನೀಯ.

ಎಲ್ಲ ಧರ್ಮಗಳು ದೇವದತ್ತವಾಗಿ ಬಂದವುಗಳಾಗಿರುವುದರಿಂದ ಪರಸ್ಪರ ಪ್ರೀತಿ – ಸೌಹಾರ್ದವನ್ನು ಪ್ರತಿಪಾದಿಸುತ್ತಿವೆಯೆಂದು ಧರ್ಮ ವಿಶ್ವಾಸಿಗಳು ನಂಬುತ್ತಾರೆ. ಭೈರಪ್ಪನವರು ತಮ್ಮ ಧರ್ಮವನ್ನು ಹೊಗಳುವ ಭರದಲ್ಲಿ ಅನ್ಯ ಧರ್ಮಗಳನ್ನು ವಿನಾಕಾರಣ ಹೀನೈಸುವ ಪ್ರವೃತ್ತಿಯನ್ನು ನಿಲ್ಲಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಕೆ.ಕೆ. ಬದ್ರುದ್ದೀನ್**
**ಕರಂಬಾರು**

ಓದಿದ್ದು

# "ಅವರು ತಮ್ಮ ಪುಸ್ತಕಗಳನ್ನು ಓದಲು ಎಂದೂ ನಮಗೆ ಅನುಮತಿ ನೀಡಲಿಲ್ಲ"

## –ಫಾರೂಖ್ ಅಹ್ಮದ್ ಮೌದೂದಿ (ಅಬುಲ್ ಆಲಾ ಮೌದೂದಿಯ ಪುತ್ರ)

ಶರೀಅತ್ ಅಸ್ತಿಭಾರದ ರಾಷ್ಟ್ರಸ್ಥಾಪನೆಯ ಪ್ರತಿಪಾದಕನೂ ಜಾತ್ಯತೀಯ ಪ್ರಜಾಪ್ರಭುತ್ವದ ವಿರೋಧಿಯೂ ಆಗಿದ್ದ ಸಯ್ಯದ್ ಅಬುಲ್ ಆಲಾ ಮೌದೂದಿಯ ಪುತ್ರ ಸಯ್ಯದ್ ಹೈದರ್ ಫಾರೂಖ್ ಮೌದೂದಿಗೆ ತನ್ನ ಪಿತನ ಮೂಲಭೂತ ಸಿದ್ಧಾಂತಕ್ಕಿಂತ ಮೇಲೇರಲು ಸಾಧ್ಯವಾಯಿತು.

ಬಂಗ್ಲಾದೇಶದ ಜಮಾಅತೆ ಇಸ್ಲಾಮಿಗೆ ಜನ್ಮ ನೀಡಿದ ತನ್ನ ತಂದೆಯ ಜಮಾಅತೆ ಇಸ್ಲಾಮಿ ಎಂಬ ಇಸ್ಲಾಮೀ ನವೀನ ಪಕ್ಷದ ತೀವ್ರ ವಿಮರ್ಶಕನಾದ ಫಾರೂಖ್ ಈಗ ಢಾಕಾದಲ್ಲಿ ಬಂಗ್ಲಾದೇಶದ ವಿಮೋಚನೆಯ ನಂತರ ಪ್ರಥಮ ಭೇಟಿ ನೀಡುತ್ತಿದ್ದಾರೆ. ಅವರು "ಡೈಲಿ ಸ್ಟಾರ್" ಪತ್ರಿಕೆಗೆ ತಮ್ಮ ತಂದೆಯ ಸಿದ್ಧಾಂತ, ಪಕ್ಷ ಮತ್ತು ದಕ್ಷಿಣ ಏಶಿಯಾದ ರಾಜಕೀಯದ ಬಗ್ಗೆ ಹೇಳಿಕೆ ನೀಡಿದರು.



1941ರಲ್ಲಿ ಜಮಾಅತೆ ಇಸ್ಲಾಮಿ ಪಕ್ಷವನ್ನು ತನ್ನ ತಂದೆ ಸ್ಥಾಪಿಸಿದುದರ ಬಗ್ಗೆ ಹೇಳುತ್ತಾ, ತನ್ನ ತಂದೆಯ ರಾಜಕೀಯ ಸಿದ್ಧಾಂತ ಅವರು ಜನಿಸಿದ ಕಾಲಘಟ್ಟದ ಪರಿಣಾಮವಾಗಿದೆ ಎಂದರು. ಆ ಕಾಲಘಟ್ಟದಲ್ಲಿ ಕಮ್ಯುನಿಸಂ ಮತ್ತು ಇಂಪೀರಿಯಲಿಸಂಗಳಿದ್ದುವು. ಆದುದರಿಂದ ಅವರು (ಮೌದೂದಿ) ಇಸ್ಲಾಮನ್ನು ಒಂದು ಇಸಂ ಆಗಿ, ಒಂದು ಜೀವಿತ ರೀತಿಯನ್ನಾಗಿ ಮಾಡಿದರು.

ಧರ್ಮಾವಲಂಬಿತ ರಾಜಕೀಯದ ಬಗ್ಗೆ ಫಾರೂಖ್ ಹೇಳಿದರು: "ಧರ್ಮವು ಜನರಿಗೋಸ್ಕರವಾಗಿದೆ. ಧರ್ಮಕ್ಕೋಸ್ಕರ ಜನರಲ್ಲ. ಧರ್ಮವು ಮನುಷ್ಯನನ್ನು ಉತ್ತಮ ಮನುಷ್ಯನಾಗಿ ಮಾಡುತ್ತದೆ. ಧಾರ್ಮಿಕ ಭಾವನೆ ಈ ಪ್ರದೇಶದಲ್ಲಿ ಗಾಢವಾಗಿ ತಳವೂರಿದೆ. ಯಾರೂ ಸರಿಯಾದುದನ್ನು ಆಲಿಸಲು ಸಿದ್ಧರಾಗುವುದಿಲ್ಲ."

ತನ್ನ ತಂದೆ ತಮ್ಮ ಮಕ್ಕಳು ತಮ್ಮ ಪುಸ್ತಕಗಳನ್ನು ಓದಲು ಎಂದೂ ಅನುಮತಿಸಲಿಲ್ಲ ಮತ್ತು ಜಮಾಅತ್ ಹಾಗೂ ಅದೇ ಮನೋಭಾವದ ರಾಜಕೀಯದಲ್ಲಿ ಭಾಗವಹಿಸಲು ಬಿಡಲಿಲ್ಲವೆಂದು ಫಾರೂಖ್ ಹೇಳಿದರು. "ಅವರು ನಮ್ಮನ್ನು ಯಾವುದಾದರೂ ರಾಜಕೀಯ ಪ್ರತಿಭಟನೆಯಲ್ಲಿ ಭಾಗವಹಿಸಿದುದಾಗಿ ಕಂಡರೆ ಅವರು ಅನಂತರ ನಮ್ಮನ್ನು ಕರೆದು ಹೇಳುತ್ತಿದ್ದರು: 'ನೀವು ಅಲ್ಲಿ ನಿಂತದ್ದು ಏಕೆ?' ಅವರು ನಮ್ಮನ್ನು ಇವುಗಳೆಲ್ಲವುಗಳಿಂದ ದೂರವಿರಿಸಿದ್ದರು."

"ನಮ್ಮ ಧರ್ಮಾಧಾರಿತ ರಾಜಕೀಯದ ದುರಂತವೇನೆಂದರೆ, ನಾವು ಅನ್ಯರ ಮಕ್ಕಳನ್ನು ಅದಕ್ಕೋಸ್ಕರ ಉಪಯೋಗಿಸುತ್ತೇವೆ ಮತ್ತು ನಮ್ಮ ಮಕ್ಕಳನ್ನು ಅದರಿಂದ ದೂರವಿರಿಸುತ್ತೇವೆ. ಏಕೆಂದರೆ ನಮಗೆ ಅದರ ದುಷ್ಪರಿಣಾಮಗಳು ತಿಳಿದಿವೆ" ಎಂದು ಅವರು ಹೇಳಿದರು.

ಅವರ ತಂದೆ ತಮ್ಮ ಮಕ್ಕಳನ್ನು ತಮ್ಮ ರಾಜಕೀಯ ಸಿದ್ಧಾಂತದ ಬಗ್ಗೆ ತಿಳಿಸದೆ ಅಂಧಕಾರದಲ್ಲಿ ಇರಿಸಿದುದೇಕೆ ಎಂದು ಕೇಳಿದಾಗ ಅವರು ಹೇಳಿದರು: "ಮುಖ್ಯ ಸೂತ್ರಧಾರನಿಗೆ ಅದರ ಅಂತರಂಗದ ಬಗ್ಗೆ ಚೆನ್ನಾಗಿ ತಿಳಿದಿರುತ್ತದೆ."

ಹಿಂದೂಸ್ಥಾನದ ಸ್ವಾತಂತ್ರ್ಯ ಸಮರದ ಒಬ್ಬ ನಾಯಕರಾಗಿದ್ದ ಮೌಲಾನ ಅಬುಲ್ ಕಲಾಮ್ ಆಝಾದ್ ಅವರು ಅಬುಲ್ ಆಲಾ ಮೌದೂದಿಗೆ ಧರ್ಮಾಧಾರಿತ ರಾಜಕೀಯ ಪಕ್ಷ ಸ್ಥಾಪನೆ ಬಗ್ಗೆ ಮುನ್ನೆಚ್ಚರಿಕೆ ನೀಡಿದ್ದರು. ಜನರು ಅವರ ಕೆಳಗೆ ಜಮಾಯಿಸುವವರಾದರೂ ಅದರಿಂದ ಯಾವುದೇ ಉತ್ತಮ ಪರಿಣಾಮ ಉಂಟಾಗಲಾರದೆಂದು ಅವರು ಎಚ್ಚರಿಕೆ ನೀಡಿದ್ದರು ಎಂದು ಫಾರೂಖ್ ಹೇಳಿದರು.

"ಹೀಗೆಯೇ ಸಂಭವಿಸಿತು. ನನ್ನ ತಂದೆಯವರು ಪಕ್ಷವನ್ನು ಸ್ಥಾಪಿಸಿದಾಗ ಧಾರ್ಮಿಕ ಮೂಲಭೂತವಾದಿಗಳು ಅವರ ಜೊತೆ ಸೇರಿದರು. ಅವರು (ಅಬುಲ್ ಆಲಾ ಮೌದೂದಿ) ಆ ಜನರು ಎಷ್ಟು ಅಪಾಯಕಾರವಾಗುವವರು ಎಂಬುದನ್ನು ತಿಳಿದುಕೊಂಡಿದ್ದರೂ ಸಹ ಅವರನ್ನು ರಾಜಕೀಯ ಉದ್ದೇಶಗಳಿಗೆ ಬಳಸಿದರು."

ತನ್ನ ತಂದೆ ತಾನು ಸ್ಥಾಪಿಸಿದ ಜಮಾಅತೆ ಇಸ್ಲಾಮಿ ತನ್ನ ಆದರ್ಶದಿಂದ ದೂರ ಸರಿದುದಾಗಿ ಕಂಡಿದ್ದರೂ ತನ್ನ ವೃದ್ಧಾಪ್ಯದ ಕಾರಣದಿಂದ ಅವರ ಬಗ್ಗೆ ಏನನ್ನೂ ಮಾಡಬಾರದೆಂದು ಅವರು ನಿರ್ಧರಿಸಿದ್ದರು ಎಂದು ಫಾರೂಖ್ ಹೇಳಿದರು.

ಪಾಕಿಸ್ತಾನದ ಜಮಾಅತೆ ಇಸ್ಲಾಮಿ ಮತ್ತು ಬಂಗ್ಲಾ ದೇಶದ ಜಮಾಅತೆ ಇಸ್ಲಾಮಿ ಒಂದೇ ರೀತಿಯವು. ಬಂಗ್ಲಾ ದೇಶದ ಉದಯವನ್ನು ವಿರೋಧಿಸಿದ ಬಂಗ್ಲಾ ದೇಶದ ಜಮಾಅತೆ ಇಸ್ಲಾಮಿ ರಾಜಕೀಯದಲ್ಲಿ ಭಾಗವಹಿಸಬಾರದೆಂದು ಅವರು ಹೇಳಿದರು.

ಅಬುಲ್ ಆಲಾ ಮೌದೂದಿ 1947ರಲ್ಲಿ ವಿಭಜನೆಯ ಸಂದರ್ಭದಲ್ಲಿ ಪಾಕಿಸ್ತಾನದ ಸ್ಥಾಪನೆಯನ್ನು ವಿರೋಧಿಸಿದ್ದರು. ಏಕೆಂದರೆ ಪಾಕಿಸ್ತಾನ ಮುಸ್ಲಿಮರ ಒಂದು ದೇಶವೇ ಹೊರತು ಇಸ್ಲಾಮೀ ದೇಶವಲ್ಲ ಎಂದು ಅವರು ಪ್ರತಿಪಾದಿಸಿದ್ದರು.

"ಅವರು (ಅಬುಲ್ ಆಲಾ ಮೌದೂದಿ) ಹೇಳಿದರು: 'ಇದು ಪಾಕಿಸ್ತಾನ (ಪರಿಶುದ್ಧ ದೇಶ) ಅಲ್ಲ.' ಜಿನ್ನ ಮುಸ್ಲಿಮರಿಗೋಸ್ಕರ ಪ್ರತ್ಯೇಕ ದೇಶ ಸ್ಥಾಪಿಸುವುದನ್ನು ಅವರು ಅಂಗೀಕರಿಸಲಿಲ್ಲ. ಆದರೆ ಪಾಕಿಸ್ತಾನ ಸ್ಥಾಪನೆ ಆದಾಗ ಅವರು ಅಲ್ಲಿಗೆ ಹೋಗಿ ತನ್ನ ಪಕ್ಷವನ್ನು ಸ್ಥಾಪಿಸಿದರು. 'ನೀವು ಇಸ್ಲಾಮನ್ನು ಅಸ್ತಿಭಾರ ಮಾಡಿಕೊಂಡು ದೇಶವನ್ನು ಸೃಷ್ಟಿಸಿದಿರಿ. ಅದನ್ನು ಇಸ್ಲಾಮೀ ದೇಶವನ್ನಾಗಿ ಮಾಡುವ ಹಕ್ಕು ನಮಗಿದೆ'

ಎಂದು ಅವರು ವಾದಿಸಿದರು."

ಜಿನ್ನ ಜನರ ಧಾರ್ಮಿಕ ವಿಶ್ವಾಸದ ಬಗ್ಗೆ ತನ್ನ ನಿಲುವನ್ನು ಬದಲಾಯಿಸಿ ಮುಸ್ಲಿಮೇತರರು ತಮ್ಮ ಧರ್ಮವನ್ನು ಅನುಷ್ಠಿಸುವ ಅಧಿಕಾರ ನೀಡಿದರು ಮತ್ತು ಸರಕಾರ ಧಾರ್ಮಿಕ ವಿಶ್ವಾಸದಲ್ಲಿ ಹಸ್ತಕ್ಷೇಪ ಮಾಡದೆಂದು ಹೇಳಿದರೆಂದು ಫಾರೂಖ್ ವಿವರಿಸಿದರು.

ಜಮಾಅತೆ ಇಸ್ಲಾಮಿ ಪಾಕಿಸ್ತಾನದ ಸ್ಥಾಪನೆಯನ್ನು ವಿರೋಧಿಸಿದ್ದರೂ ಅಬುಲ್ ಆಲಾ ಮೌದೂದಿ ಅದೇ ದೇಶಕ್ಕೆ ಹೋಗಿ ರಾಜಕೀಯ ಚಟುವಟಿಕೆ ನಡೆಸಿದುದನ್ನು ಬಂಗ್ಲಾ ದೇಶದ ಜಮಾಅತೆ ಇಸ್ಲಾಮಿಗೆ ಸರಿಹೋಲುತ್ತದೆ ಎಂದು ಹೇಳಿದಾಗ ಫಾರೂಖ್ ಹೇಳಿದರು: "ನನ್ನ ತಂದೆಯವರು ಪಾಕಿಸ್ತಾನ ಸ್ಥಾಪನೆಯನ್ನು ವಿರೋಧಿಸಿದ್ದರೂ ಅಂದಿನ ಪರಿಸ್ಥಿತಿಯಲ್ಲಿ ಅವರು ಅಲ್ಲಿಗೆ ಹೋಗಬೇಕಾಯಿತು."

ಜಿನ್ನ ಮತ್ತು ಮೌದೂದಿ ಇಬ್ಬರೂ ತಮ್ಮ ನಿಲುವುಗಳನ್ನು ಬದಲಾಯಿಸಿದರು. ಜಿನ್ನ ಮುಸ್ಲಿಮ್ ದೇಶ ಸ್ಥಾಪನೆಯ ನಿಲುವಿನಿಂದ ಜಾತ್ಯತೀತ ದೇಶ ಸ್ಥಾಪನೆಯ ನಿಲುವಿಗೆ ಬದಲಾವಣೆಗೊಂಡರು. ಮೌದೂದಿ ಪಾಕಿಸ್ತಾನದ ಸ್ಥಾಪನೆ ವಿರೋಧಿಸಿದರೂ ಧರ್ಮಾಧಾರಿತ ರಾಜಕೀಯ ಚಟುವಟಿಕೆ ನಡೆಸಿದರು. "ಇವುಗಳ ಫಲಸ್ವರೂಪವಾಗಿ ಈಗ ಸಂಪೂರ್ಣ ಅಸ್ತವ್ಯಸ್ತತೆಯಲ್ಲಿ ನಾವಿದ್ದೇವೆ ಎಂದು ನೀವು ನೋಡಬಹುದು" ಎಂದು ಫಾರೂಖ್ ಹೇಳಿದರು.

ಒಂದು ಖಾಸಗಿ ವಿಮಾನಯಾನ ಕಂಪೆನಿಯ ಉದ್ಯೋಗಿಯಾಗಿ ಫಾರೂಖ್ 1971ಕ್ಕಿಂತ ಮೊದಲು ಅನೇಕ ಸಲ ಬಂಗ್ಲಾ ದೇಶವನ್ನು ಸಂದರ್ಶಿಸಿದ್ದರು.


ಕಾಶ್ಮೀರದಲ್ಲಿ "ಜಿಹಾದ್" ನಡೆಸುವ ಬಗ್ಗೆ ಬೆಂಬಲಿಸುವವರನ್ನು ಕಟುವಾಗಿ ವಿಮರ್ಶಿಸುವ ಫಾರೂಖ್ ಉರ್ದು ಪತ್ರಿಕೆಗಳ ಅಂಕಣಗಾರರಾಗಿದ್ದಾರೆ.

**("ಡೈಲಿ ಸ್ಟಾರ್" 6-10-2013)**

## ಓದಿದ್ದು

# ಪಾಸ್ಟರ್ ಟೆರ್ರಿ ಜೋನ್ಸ್ 9/11 ಆಕ್ರಮಣಕ್ಕೆ ಪ್ರತಿಕಾರವಾಗಿ ಪ್ರಮಾದವಶಾತ್ 2000 ಬೈಬಲ್ ಪ್ರತಿಗಳನ್ನು ಸುಟ್ಟರು

ಮಲ್‌ಬೆರ್ರಿ - ಫ್ಲೋರಿಡಾದ ಪಾಸ್ಟರ್ ಟೆರ್ರಿ ಜೋನ್ಸ್, ಖುರ್‌ಆನ್ ಎಂದು ಭಾವಿಸಿ 2000ಕ್ಕೂ ಮಿಕ್ಕಿದ ಬೈಬಲ್ ಪ್ರತಿಗಳನ್ನು, ಅಧಿಕಾರಿಗಳು ಬೆಂಕಿಯನ್ನು ನಂದಿಸಿ ಆತನನ್ನು ಬಂಧಿಸುವುದಕ್ಕೆ ಮುಂಚೆ ಸುಟ್ಟು ಹಾಕಿದನು.



ಪೋಲ್ಕ್ ಕೌಂಟಿ ಶೆರಿಫ್ ಓಫಿಸ್ ಪ್ರಕಾರ, ಪಾಸ್ಟರ್ ಟೆರ್ರಿ ಜೋನ್ಸ್ ಮತ್ತು ಆತನ ಸಹಾಯಕ ಪಾಸ್ಟರ್ ಮರ್ವಿನ್ ಸಾಪ್ಪ್ ಜೂನಿಯರ್, 9/11 ಆಕ್ರಮಣದಲ್ಲಿ ಬಲಿಯಾದ ಪ್ರತಿಯೊಬ್ಬರಿಗೆ ಒಂದರಂತೆ 2998 ಖುರ್‌ಆನ್ ಪ್ರತಿಗಳನ್ನು ಸುಡಲು ಸಜ್ಜುಗೊಳಿಸಿದ್ದರು. ಅಗ್ನಿಶಾಮಕ ದಳ ಬೆಂಕಿಯನ್ನು ನಂದಿಸಿದಾಗ ಕಾರ್ಡ್‌ಬೋರ್ಡ್ ಪೆಟ್ಟಿಗೆಯೊಳಗೆ ಇದ್ದುದು ಬೈಬಲ್ ಪ್ರತಿಗಳಾಗಿದ್ದವೆಂದು ಅಧಿಕಾರಿಗಳು ಬಹಿರಂಗಪಡಿಸಿದರು.

"ನಾವು ಯಾವುದೇ ಧರ್ಮಗ್ರಂಥವನ್ನು ಸುಟ್ಟು ಹಾಕುವುದನ್ನು ಕ್ಷಮಿಸುವುದಿಲ್ಲ. ಆದರೆ ಪಾಸ್ಟರ್ ಜೋನ್ಸ್ ಸಾವಿರಾರು ಬೈಬಲ್ ಪ್ರತಿಗಳನ್ನು ಬೂದಿ ಮಾಡಿದ್ದು ತಿಳಿದು ನಾವು ಬಹಳ ಅಸ್ವಸ್ಥರಾಗಿದ್ದೇವೆ" ಎಂದು ಪೋಲ್ಕ್ ಕೌಂಟಿ ಶೆರಿಫ್ ಗ್ರಾಡಿ ಜುಡ್ಡ್ ಹೇಳಿದರು.

ಡೌವ್ ವರ್ಲ್ಡ್ ಔಟ್‌ರೀಚ್ ಸೆಂಟರ್‌ನ ವಕ್ತಾರೆ ಫ್ರಾನ್ಸ್ ಇಂಗ್ರಾಮ್ ಹೇಳಿದರು: "ಜೋನ್, ಮುಸ್ಲಿಮರ ಪವಿತ್ರ ಗ್ರಂಥದ ರಖಂ ಪ್ರತಿಗಳನ್ನು ಅಮೆಝಾನ್‌ನಿಂದ ತರಿಸಿಕೊಳ್ಳಲು ಆದೇಶಿಸಿದ್ದರು. ಅವು 10ರಂದು ಬರಬೇಕಾಗಿತ್ತು. ಆದರೆ ಒಂದು ದಿನ ತಡವಾಯಿತು. ನಾವು ಅವಸರದಲ್ಲಿದ್ದೆವು; ಪೆಟ್ಟಿಗೆಯ ಒಳಗೆ ಏನಿತ್ತೆಂದು ನೋಡಿರಲಿಲ್ಲ."

**(NEWSLO ಸೆಪ್ಟಂಬರ್ 12-2013)**

## ಓದಿದ್ದು

# ಯುದ್ಧಾಪರಾಧ : ಜಮಾತ್ ಮುಖಂಡನಿಗೆ ಗಲ್ಲು ಶಿಕ್ಷೆ

ಪಿಟಿಐ ವರದಿ: ಢಾಕಾ, ಸೆ.17 : 1971ರಲ್ಲಿನ ಯುದ್ಧಾಪರಾಧಗಳಿಗಾಗಿ ಮೀರ್‌ಪುರದ ಹಂತಕ ಎಂದೇ ಕುಖ್ಯಾತಿ ಗಳಿಸಿದ್ದ ಮೂಲಭೂತವಾದಿ ಜಮಾತೆ ಇಸ್ಲಾಮಿ ಮುಖಂಡ ಅಬ್ದುಲ್ ಖಾದಿರ್ ಮುಲ್ಲಾಗೆ ಬಾಂಗ್ಲಾದೇಶದ ಸುಪ್ರೀಂ ಕೋರ್ಟ್ ಮಂಗಳವಾರ ಗಲ್ಲು ಶಿಕ್ಷೆ ವಿಧಿಸಿ ತೀರ್ಪು ನೀಡಿದೆ.

ವಿಶೇಷ ನ್ಯಾಯ ಮಂಡಳಿಯೊಂದು ಎಂಟು ತಿಂಗಳ ಹಿಂದೆ ಈತನಿಗೆ ಜೀವಾವಧಿ ಕಾರಾಗೃಹ ವಾಸ ಶಿಕ್ಷೆ ವಿಧಿಸಿತ್ತು. 1971ರಲ್ಲಿ ಪಾಕಿಸ್ತಾನದ ವಿರುದ್ಧ ನಡೆದ ವಿಮೋಚನಾ ಯುದ್ಧ ಸಂದರ್ಭದಲ್ಲಿ ಮಾನವೀಯತೆಯ ವಿರುದ್ಧ ಅಪರಾಧಗಳಿಗಾಗಿ ಈ ಮರಣ ದಂಡನೆ ವಿಧಿಸಲಾಗುತ್ತಿದೆ ಎಂದು ಮುಖ್ಯ ನ್ಯಾಯಮೂರ್ತಿ ಮುಜಮ್ಮಿಲ್ ಹುಸೇನ್ ಅವರು ತೀರ್ಪಿನಲ್ಲಿ ತಿಳಿಸಿದ್ದಾರೆ.

ಜಮಾತ್‌ನ ನಾಲ್ಕನೇ ಅತಿ ದೊಡ್ಡ ನಾಯಕರಾಗಿರುವ 65ರ ಹರೆಯದ ಮುಲ್ಲಾನ ಮೇಲಿರುವ ಎಲ್ಲಾ ಆರೋಪಗಳನ್ನು ಖುಲಾಸೆಗೊಳಿಸಬೇಕೆಂಬ ಮನವಿಯನ್ನು ತಿರಸ್ಕರಿಸಿದ ಬಳಿಕ ತಪ್ಪಿತಸ್ಥನೆಂದು ಸುಪ್ರೀಂ ಕೋರ್ಟ್ ಸಾರಿದ ಮೊದಲ ರಾಜಕಾರಣಿಯೂ ಆಗಿದ್ದಾರೆ.

ಅಂತಾರಾಷ್ಟ್ರೀಯ ಅಪರಾಧಗಳ ಮಂಡಳಿಯು ಇದೇ ವರ್ಷದ ಫೆಬ್ರವರಿ ತಿಂಗಳಲ್ಲಿ ಜಮಾತ್‌ನ ಸಹಾಯಕ ಕಾರ್ಯದರ್ಶಿಯಾಗಿರುವ ಮುಲ್ಲಾಗೆ ಜೀವಾವಧಿ ಶಿಕ್ಷೆ ವಿಧಿಸಿ ತೀರ್ಪು ನೀಡಿತ್ತು. ಇದರ ಕುರಿತು ಸಲ್ಲಿಸಲಾಗಿದ್ದ ಮೇಲ್ಮನವಿ ವಿಚಾರಣೆಯ ವೇಳೆ ಪಂಚಸದಸ್ಯರ ನ್ಯಾಯಪೀಠವು 4–1 ಅಂತರದಿಂದ ಮುಲ್ಲಾಗೆ ಮರಣ ದಂಡನೆಯನ್ನು ವಿಧಿಸಿ ತೀರ್ಪು ನೀಡಿದೆ.

ಮುಲ್ಲಾನನ್ನು 2010ರ ಜುಲೈ 13ರಂದು ಬಂಧಿಸಲಾಗಿತ್ತು. ಹಲವಾರು ಕುಟುಂಬಗಳ ಅಕ್ಷರಶಃ ವಧೆ ಮಾಡಿದ ಪ್ರಕರಣಗಳ ನೇತೃತ್ವವನ್ನು ಮುಲ್ಲಾ ವಹಿಸಿದ್ದು, ಢಾಕಾದ ಮೀರ್‌ಪುರ ಪ್ರದೇಶದ ಮನೆಯೊಂದಕ್ಕೆ ದಾಳಿ ನಡೆಸಿದ್ದ ಆತನ ತಂಡವು ಎರಡು ವರ್ಷದ ಮಗುವಿನ ಸಹಿತ ಮನೆಯೊಳಗಿದ್ದವರೆಲ್ಲರನ್ನೂ ಗುಂಡು ಹಾರಿಸಿ ಕೊಂದಿತ್ತು ಎಂಬ ಆರೋಪಗಳಿವೆ. ಮೀರ್‌ಪುರದಲ್ಲಿ ನಡೆಸಲಾಗಿದ್ದ ಇಂಥದ್ದೇ ಹಿಂಸಾಕೃತ್ಯಗಳಿಂದಾಗಿ ಆತನಿಗೆ ಮೀರ್‌ಪುರದ ಹಂತಕ ಎಂಬ ಹೆಸರೇ ತಗುಲಿಕೊಂಡಿತ್ತು. ದೇಶದ ಪರಮೋಚ್ಚ ನ್ಯಾಯಾಲಯವು ವಿಚಾರಣಾ ನ್ಯಾಯಾಲಯ ವಿಧಿಸಿದ ತೀರ್ಪನ್ನು ಹೆಚ್ಚಿಸಿದ ಉದಾಹರಣೆಗಳೇ ಇಲ್ಲ ಎಂಬ ಕಾರಣಕ್ಕೆ ಈ ತೀರ್ಪಿನ ಮರುಪರಿಶೀಲನೆ ಕೋರಿ ಮೇಲ್ಮನವಿ ಸಲ್ಲಿಸುವುದಾಗಿ ಮುಲ್ಲಾ ಪರ ವಕೀಲರು ಹೇಳಿದ್ದಾರೆ.

**(ಹೊಸದಿಗಂತ 18–9–2013)**

# 344 ಜನರ ಕೊಂದಿದ್ದ ಬಾಂಗ್ಲಾ ಮುಲ್ಲಾಗೆ ಗಲ್ಲು

## 71ರ ಬಾಂಗ್ಲಾ ವಿಮೋಚನೆ ಸಮರದ ವೇಳೆ ಪಾಕ್ ಪರ ವಹಿಸಿದ್ದ ಕಟುಕ

ಡಿ. 12: 1971ರ ಬಾಂಗ್ಲಾ ವಿಮೋಚನಾ ಸಮರದ ವೇಳೆ 344 ಜನರನ್ನು ಅಮಾನುಷವಾಗಿ ಹತ್ಯೆಗೈದು 'ಮೀರ್‌ಪುರದ ಕಟುಕ' ಎಂಬ ಕುಖ್ಯಾತಿ ಪಡೆದಿದ್ದ ಜಮಾತೆ ಇಸ್ಲಾಮಿ ಹಿರಿಯ ಕಟ್ಟರ್‌ವಾದಿ ಮುಸ್ಲಿಂ ನಾಯಕ ಅಬ್ದುಲ್ ಖಾದರ್ ಮುಲ್ಲಾನನ್ನು ಗುರುವಾರ ರಾತ್ರಿ ಢಾಕಾ ಕೇಂದ್ರ ಕಾರಾಗೃಹದಲ್ಲಿ ಗಲ್ಲಿಗೇರಿಸಲಾಗಿದೆ.

ಅಂತಾರಾಷ್ಟ್ರೀಯ ಯುದ್ಧಾಪರಾಧ ನ್ಯಾಯಮಂಡಳಿ ವಿಧಿಸಿದ್ದ ಮರಣದಂಡನೆ ಶಿಕ್ಷೆಯನ್ನು ಬಾಂಗ್ಲಾದೇಶದ ಸುಪ್ರೀಂ ಕೋರ್ಟ್ ಗುರುವಾರ ಬೆಳಗ್ಗೆಯಷ್ಟೇ ಎತ್ತಿಹಿಡಿದಿತ್ತು.

1971ರವರೆಗೆ ಬಾಂಗ್ಲಾದೇಶ ಪಾಕಿಸ್ತಾನದ ಅಂಗವಾಗಿತ್ತು. ಆಗ ಭಾರತವು ಬಾಂಗ್ಲಾವನ್ನು ಪಾಕ್ ಹಿಡಿತದಿಂದ ವಿಮೋಚನೆಗೊಳಿಸುವ ವೇಳೆ, ಮುಲ್ಲಾ ಪಾಕಿಸ್ತಾನದ ಪರವಹಿಸಿ ಕಟ್ಟರ್‌ಪಂಥೀಯ ಸಂಘಟನೆಯನ್ನು ಹುಟ್ಟುಹಾಕಿದ್ದ. ಬಳಿಕ 344 ಅಮಾಯಕರ ಸಾವಿಗೆ ಕಾರಣನಾಗಿದ್ದ.

**(ಉದಯವಾಣಿ 13–12–2013)**

# 'ಭಾರತಕ್ಕೆ ಟಿಪ್ಪುಸುಲ್ತಾನ್ ಕೊಡುಗೆ ಅಪಾರ'

ಉಳ್ಳಾಲ, ಡಿ. 18: ಸ್ವತಂತ್ರ ಭಾರತಕ್ಕೆ ಟಿಪ್ಪುಸುಲ್ತಾನ್‌ನ ಕೊಡುಗೆ ಅಪಾರ. ಆದರೆ ಕೆಲವು ಇತಿಹಾಸಕಾರರು ಆತನ ನಿಜವಾದ ಬದುಕನ್ನು ತಿರುಚುವ ಮೂಲಕ ಆತನನ್ನು ಮತಾಂಧ ಎಂದು ಬಿಂಬಿಸಿರುವುದು ಸ್ವತಂತ್ರ ಭಾರತಕ್ಕಾಗಿ ಹೋರಾಡಿದ ಅಪ್ಪಟ ಸ್ವಾತಂತ್ರ್ಯ ಹೋರಾಟಗಾರನಿಗೆ ಅಗೌರವ ತೋರಿಸಿದಂತಾಗಿದೆ ಎಂದು ಕ್ಯಾಲಿಕಟ್ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಡಾ| ಕೆ. ಕೆ. ಎನ್. ಕುರೂಪ್ ಅಭಿಪ್ರಾಯಪಟ್ಟರು.

ಅವರು ದೇರಳಕಟ್ಟೆಯ ಯೇನೆಪೊಯ ವಿ.ವಿ. ಆವರಣದ ಸಭಾಂಗಣದಲ್ಲಿ ಯೇನೆಪೊಯ ವಿಶ್ವವಿದ್ಯಾನಿಲಯದ ರಾಷ್ಟ್ರೀಯ ಸೇವಾ ಯೋಜನೆ ಇದರ ಆಶ್ರಯದಲ್ಲಿ ಏರ್ಪಡಿಸಲಾಗಿದ್ದ 'ಟಿಪ್ಪು ಸುಲ್ತಾನ್' ವಿಚಾರದಲ್ಲಿ ವಿಶೇಷ ಉಪನ್ಯಾಸ ನೀಡಿದರು.

ಟಿಪ್ಪು ಸುಲ್ತಾನ್ ತನ್ನ ಜೀವನದುದ್ದಕ್ಕೂ ಪಾಲಿಸಿಕೊಂಡು ಬಂದಿದ್ದ ತತ್ವ, ಧಾರ್ಮಿಕ ಸಿದ್ಧಾಂತಗಳು ಆತನು ಸರ್ವ ಧರ್ಮ ಸಹಿಷ್ಣು ಎಂಬುದನ್ನು ಸಾರಿ ಹೇಳುತ್ತಿದ್ದರೂ ಕೆಲವು ಇಂತಹಾಸಕಾರರು ಆತನ ಬಗ್ಗೆ ಸಮಗ್ರವಾಗಿ ಅಧ್ಯಯನ ಕೈಗೊಳ್ಳದಿರುವುದು ಖೇದನೀಯ. ಇತಿಹಾಸಕಾರರು ಭಾರತೀಯ ಸ್ವಾತಂತ್ರ್ಯದಲ್ಲಿ ಟಿಪ್ಪುವಿನ ಕೊಡುಗೆ ಏನೆಂಬುದನ್ನು ಪುನರ್ ಪರಿಶೀಲಿಸಬೇಕಾಗಿದೆ ಎಂದರು.

**(ಉದಯವಾಣಿ 19–12–2013)**

## ಓದಿದ್ದು

# ಗರ್ಭದಲ್ಲಿನ ಮಗು ಮಾತು ಆಲಿಸುತ್ತೆ !

**♦ ವಿಜ್ಞಾನಿಗಳ ಸಂಶೋಧನೆ ♦ ಅಭಿಮನ್ಯು ಕತೆಗೆ ಹೋಲಿಕೆ**

ಹೊಸದಿಲ್ಲಿ, ಆ. 29: ಚಕ್ರವ್ಯೂಹ ಭೇದಿಸುವುದು ಹೇಗೆಂಬುದನ್ನು ಅಭಿಮನ್ಯು ತನ್ನ ತಾಯಿಯ ಗರ್ಭದಲ್ಲಿರುವಾಗಲ್ಲೇ ಕಲಿತಿದ್ದ ಎಂಬುದನ್ನು ಮಹಾಭಾರತದಲ್ಲಿ ನೀವೂ ಓದಿರಬಹುದು. ಅದಕ್ಕೆ ಪೂರಕವಾಗುವ ಸಂಶೋಧನೆಯೊಂದು ಫಿನ್‌ಲೆಂಡ್‌ನಲ್ಲಿ ನಡೆದಿದೆ. ಅದೇನೆಂದರೆ, ತಾಯಿಯ ಗರ್ಭದಲ್ಲಿರುವಾಗ ಮಗು ಬಾಹ್ಯ ಪ್ರಪಂಚದಲ್ಲಿ ಕೇಳಿಬರುವ ಶಬ್ದಗಳನ್ನು ಆಲಿಸಿ, ಅಸ್ಪಷ್ಟವಾಗಿ ಅದನ್ನು ನೆನಪಿನಲ್ಲಿ ಇಟ್ಟುಕೊಳ್ಳಬಲ್ಲದು ಎಂಬುದನ್ನು ವಿಜ್ಞಾನಿಗಳು ಕಂಡುಹಿಡಿದಿದ್ದಾರೆ. ನಿರ್ದಿಷ್ಟ ಶಬ್ದಗಳು ಭ್ರೂಣದ ಮೆದುಳಿನ ಅಭಿವೃದ್ಧಿಯ ಮೇಲೆ ಪರಿಣಾಮ ಬೀರಬಹುದು ಎಂಬುದನ್ನು ಈಗಾಗಲೇ ಹಲವು ಸಂಶೋಧನೆಗಳು ನಿರೂಪಿಸಿವೆ. ಆದರೆ ಇದೇ ಮೊದಲ ಬಾರಿಗೆ ಅಂತಹ ಶಬ್ದವನ್ನು ಮಗು ಅಸ್ಪಷ್ಟವಾಗಿ ನೆನಪಿನಲ್ಲಿಟ್ಟುಕೊಳ್ಳುವ ಸಾಧ್ಯತೆಯನ್ನು ಫಿನ್‌ಲೆಂಡ್ ತಜ್ಞರ ಸಂಶೋಧನೆ ಪತ್ತೆ ಹಚ್ಚಿದೆ. ಈ ಕುರಿತು ಅಮೆರಿಕದ ನಿಯತಕಾಲಿಕೆಯಲ್ಲಿ ಲೇಖನ ಪ್ರಕಟಗೊಂಡಿದೆ.

ಹೆಲ್ಸಿಂಕಿ ವಿವಿ ಸಂಶೋಧಕ ಈನೊ ಪಾರ್ಟನೆನ್ ಈ ಸಂಶೋಧನೆ ನಡೆಸಿದ್ದಾರೆ. ಭ್ರೂಣಾವ್ಯಸ್ಥೆಯಲ್ಲಿ ಮಗು ಬಾಹ್ಯ ಪ್ರಪಂಚದ ದನಿಗಳನ್ನು ವಿವರವಾಗಿ ಕಲಿಯುತ್ತದೆ ಅಥವಾ ಸಂಗೀತ ಗುರುತು ಹಿಡಿಯುತ್ತದೆ ಎಂಬುದಕ್ಕೆ ಸಾಕ್ಷ್ಯಾಧಾರ ಸಿಕ್ಕಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

**(ಉದಯವಾಣಿ 30-8-2013)**

# ಯುದ್ಧಪೀಡಿತ ಸಿರಿಯಾದಲ್ಲಿ 'ಸೆಕ್ಸ್ ಜೆಹಾದ್' ಹಾವಳಿ!

**ಉಗ್ರರ ಕಾಮದಾಹ ತಣಿಸಲು ಸಾವಿರಾರು ಟ್ಯುನೀಶಿಯಾ ಮಹಿಳೆಯರ ಗುಳೆ**

ಡಮಾಸ್ಕಸ್, ಸೆ. 21: 'ಲವ್ ಜೆಹಾದ್' ಬಳಿಕ 'ಸೆಕ್ಸ್ ಜೆಹಾದ್' ಎಂಬ ಪದವು ಈಗ ಭಯೋತ್ಪಾದಕ ವಲಯಗಳಲ್ಲಿ ಚಲಾವಣೆಗೊಳ್ಳಲು ಆರಂಭವಾಗಿದೆ. ಸರಕಾರದ ವಿರುದ್ಧ ಸಿರಿಯಾದಲ್ಲಿ ಬಂಡೆದ್ದು ಹೋರಾಡುತ್ತಿರುವ ಉಗ್ರರ ಲೈಂಗಿಕ ಕಾಮನೆಗಳನ್ನು ತಣಿಸಿ, ಅವರಿಗೆ ಯುದ್ಧದಲ್ಲಿ ಪಾಲ್ಗೊಳ್ಳಲು ಸ್ಫೂರ್ತಿ ನೀಡಲು ಪಕ್ಕದ ಟ್ಯುನೀಶಿಯಾ ದೇಶದ ಸಾವಿರಾರು ಮುಸ್ಲಿಂ ಮಹಿಳೆಯರು ಗುಳೆ ಹೋಗುತ್ತಿದ್ದು, ಈಗಾಗಲೇ 100ಕ್ಕೂ ಹೆಚ್ಚು ಮಹಿಳೆಯರು ಗರ್ಭಿಣಿಯಾಗಿರುವ ಸುದ್ದಿಯೂ ಹೊರಬಿದ್ದಿದೆ.

ಟ್ಯುನೀಶಿಯಾ ಸರಕಾರದ ಆಂತರಿಕ ಸಚಿವ ಲೋತ್ಫಿ ಬೆನ್ ಜೆಡ್ಡೌ ಅವರೇ ಗೇಶದ ಸಂಸತ್ತಿಗೆ ಈ ಮಾಹಿತಿ ನೀಡಿದ್ದಾರೆ. 'ಪವಿತ್ರ ಯುದ್ಧ (ಜೆಹಾದ್) ನಡೆಸುತ್ತಿರುವ ಉಗ್ರರೊಂದಿಗೆ ಲೈಂಗಿಕ ಸಂಪರ್ಕ ನಡೆಸಿದರೆ ಅದು ಪವಿತ್ರ ಕೆಲಸ. ಅಂಥ ಉಗ್ರರಿಗೆ ಯುದ್ಧದಲ್ಲಿ ಸ್ಫೂರ್ತಿ ತುಂಬಲು ಅವರ ಜತೆ ಲೈಂಗಿಕ ಕ್ರಿಯೆಯಲ್ಲಿ ತೊಡಗಿಕೊಳ್ಳಿ' ಎಂಬ ಸಂದೇಶಗಳು ಕೆಲ ಮೌಲ್ವಿಗಳ ಹೆಸರಿನಲ್ಲಿ ಟ್ಯುನೀಶಿಯಾದ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಲು ಆರಂಭವಾಗಿವೆ. ಇದರಿಂದ ಸ್ಫೂರ್ತಿ ಪಡೆದಿರುವ ಅನೇಕ ಮುಸ್ಲಿಂ ಯುವತಿಯರು ಗಡಿ ದಾಟಿ ಸಿರಿಯಾಗೆ ತೆರಳುತ್ತಿದ್ದಾರೆ.

ಸಿರಿಯಾದಲ್ಲಿ ಒಬ್ಬೊಬ್ಬ ಯುವತಿಯು 20, 30, 100.. ಹೀಗೆ ಭಾರೀ ಸಂಖ್ಯೆಯ ಉಗ್ರರೊಂದಿಗೆ ಹಾಸಿಗೆ ಹಂಚಿಕೊಳ್ಳುತ್ತಾಳಂತೆ. ಇಂಥ ನೂರಾರು ಯುವತಿಯರು ಈಗ 'ಸೆಕ್ಸ್ ಜೆಹಾದ್'ನಲ್ಲಿ ಪಾಲ್ಗೊಂಡು ಟ್ಯುನೀಶಿಯಾಕ್ಕೆ ವಾಪಸಾಗುತ್ತಿದ್ದು ಅವರಲ್ಲಿ ಬಹುತೇಕರು ಗರ್ಭಿಣಿಯಾಗಿದ್ದಾರೆಂದು ಸಚಿವರೇ ಮಾಹಿತಿ ನೀಡಿದ್ದಾರೆ. ಈ ಸೆಕ್ಸ್ ಜೆಹಾದ್‌ನಲ್ಲಿ ಪಾಲ್ಗೊಂಡ ಯುವತಿಯರು ಈಗ 'ಜೆಹಾದ್‌ಅಲ್ ನಿಖಾ' (ಪವಿತ್ರ ಲೈಂಗಿಕ ಯುದ್ಧ) ಎಂಬ ಪದವನ್ನು ತಮ್ಮ ಹೆಸರಿನ ಜತೆ ಜೋಡಿಸಿಕೊಳ್ಳುತ್ತಿದ್ದಾರೆ.

**(ಉದಯವಾಣಿ 22-9-2013)**

# ಜೆಹಾದ್ ಪುಸ್ತಕ ಪ್ರಕಟ: ಪ್ರಕಾಶಕ ಬಂಧನ

ಕೋಯಿಕ್ಕೋಡ್, ಸೆ. 29: ಕೋಮು ದಂಗೆಗೆ ಪ್ರಚೋದನೆ ನೀಡುವ ಅಂಶಗಳಿದ್ದ ಪುಸ್ತಕ ಪ್ರಕಟಿಸಿದ ಆರೋಪದಲ್ಲಿ ನನ್ಮ ಬುಕ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಅಬ್ದುಲ್ ರೆಹಮಾನ್‌ನನ್ನು ಶನಿವಾರ ಪೊಲೀಸರು ಬಂಧಿಸಿದ್ದಾರೆ. ಸಿಮಿಯ ಕಾರ್ಯಕರ್ತನಾಗಿದ್ದ ರೆಹಮಾನ್ ಪ್ರಸ್ತುತ ನ್ಯಾಯಾಂಗ ಬಂಧನ ವಿಧಿಸಲಾಗಿದೆ.

ಮೌಲಾನಾ ಅಬ್ದುಲ್ ಅಲೀಮ್ ಇಸ್ಲಾಹಿ ಉರ್ದುವಿನಲ್ಲಿ ಬರೆದಿರುವ ಪುಸ್ತಕವನ್ನು ದಾವತುಮ್ ಜೆಹಾದುಮ್ ಎನ್ನುವ ಹೆಸರಿನಲ್ಲಿ ಮಲಯಾಳ ಭಾಷೆಗೆ ತರ್ಜುಮೆ ಮಾಡಲಾಗಿದೆ. ಈ ಪುಸ್ತಕವನ್ನು ನನ್ಮ ಬುಕ್ಸ್ ಪ್ರಕಟಿಸಿದೆ. ಸೆ. 4ರಂದು ಪೊಲೀಸರು ಪುಸ್ತಕದಂಗಡಿಗಳಿಗೆ ದಾಳಿ ಮಾಡಿ ಪುಸ್ತಕದ ಪ್ರತಿಗಳನ್ನು ವಶಪಡಿಸಿಕೊಂಡಿದ್ದಾರೆ. ಪುಸ್ತಕವನ್ನು ಭಾಷಾಂತರಿಸಿರುವ ಉಸ್ಮಾನ್ ಕಡುಂಗಾಡ್ ತಲೆಮರೆಸಿಕೊಂಡಿದ್ದಾನೆ. ಮೂಲಕೃತಿಯಲ್ಲಿರುವ ವಿಷಯಗಳನ್ನು ಮಾತ್ರ ಕಡುಂಗಾಡ್ ಅನುವಾದಿಸಿದ್ದಾನೆಯೋ ಅಥವಾ ಬೇರೆ ವಿಷಯಗಳನ್ನು ಸೇರಿಸಿಕೊಂಡಿದ್ದಾನೆಯೋ ಎಂಬುದನ್ನು ಪೊಲೀಸರು ಪರಿಶೀಲಿಸುತ್ತಿದ್ದಾರೆ.

ಈ ಪುಸ್ತಕದಲ್ಲಿ ಕೋಮು ಸಾಮರಸ್ಯ ಕದಡುವ ಅಂಶಗಳು ಇವೆ ಎಂದು ಪೊಲೀಸರು ತಿಳಿಸಿದ್ದಾರೆ. 86 ವರ್ಷ ಪ್ರಾಯವಾಗಿರುವ ಮೌಲಾನಾ ಅಬ್ದುಲ್ ಅಲೀಮ್ ಇಸ್ಲಾಹಿ ಹಿರಿಯ ಮುಸ್ಲಿಂ ಮತಪಂಡಿತ. ಬಾಬರಿ ಮಸೀದಿ ಪ್ರಕರಣಕ್ಕೆ ಸಂಬಂಧಿಸಿ ತೀವ್ರ ನಿಲುವು ಹೊಂದಿದ್ದ ಅವನನ್ನು 13 ವರ್ಷದ ಹಿಂದೆ ಜಮಾತ್-ಎ-ಇಸ್ಲಾಮಿ ಹಿಂದ್‌ನಿಂದ ಉಚ್ಚಾಟಿಸಲಾಗಿತ್ತು. ಅವನ ಹಿರಿಯ ಪುತ್ರ 2004ರಲ್ಲಿ ಗುಜರಾತ್ ಪೊಲೀಸರ ಎನ್ ಕೌಂಟರ್‌ಗೆ ಬಲಿಯಾಗಿದ್ದಾನೆ.

**(ಉದಯವಾಣಿ 30-9-2013)**

## ಓದಿದ್ದು

# ಮುಸ್ಲಿಂ ಬ್ರದರ್‌ಹುಡ್ ಸಂಸ್ಥೆಗೆ NGO ಸ್ಥಾನಮಾನ ಇಲ್ಲ

ಕೈರೋ, ಪಿ.ಟಿ.ಐ : ಮುಸ್ಲಿಂ ಬ್ರದರ್‌ಹುಡ್‌ಗೆ ಇದ್ದ ನೋಂದಾಯಿತ ಸರಕಾರೇತರ ಸಂಸ್ಥೆ ಎಂಬ ಸ್ಥಾನಮಾನವನ್ನು ಈಜಿಪ್ಟಿನ ಮಂತ್ರಿ ಮಂಡಲ ಮಂಗಳವಾರದಂದು (8–10–2013) ರದ್ದುಗೊಳಿಸಿದೆ. ಇದು ಈಜಿಪ್ಟಿನ ಅತಿ ದೊಡ್ಡ ಇಸ್ಲಾಮಿಸ್ಟ್ ಚಳುವಳಿಗೆ ಇತ್ತೀಚೆಗಿನ ಪ್ರಹಾರವಾಗಿದೆ.

ಕಳೆದ ತಿಂಗಳು ಒಂದು ಕೋರ್ಟು ಮುಸ್ಲಿಂ ಬ್ರದರ್‌ಹುಡ್ ಸಂಸ್ಥೆಯನ್ನು ಬರ್ಖಾಸ್ತುಗೊಳಿಸಬೇಕೆಂದು ಆದೇಶಿಸಿ ಅದರ ಸೊತ್ತುಗಳನ್ನು ಮುಟ್ಟುಗೋಲು ಹಾಕಿ ಅದರ ಚಟುವಟಿಕೆಗಳ ಮೇಲೆ ನಿಷೇಧ ಹೇರಿದ ನಂತರ ಸರಕಾರ ಈ ಕ್ರಮವನ್ನು ಕೈಗೊಂಡಿದೆ. ಅಲ್ ಅಹ್ರಾಮ್‌ನ ಅರೆಬಿಕ್ ನ್ಯೂಸ್ ವೆಬ್‌ಸೈಟ್ ಈ ವಿಚಾರವನ್ನು ವರದಿಮಾಡಿದೆ.

**(ಡೆಕ್ಕಾನ್‌ಹೆರಾಲ್ಡ್ 9–10–2013)**

# ಕ್ರಿಸ್ತ ಹುಟ್ಟಿದ್ದಾದರೂ ಎಂದು?

ಚರಿತ್ರೆಯ ಪುಟಗಳನ್ನು ಅವಲೋಕಿಸಿ ಕ್ರಿಸ್ತ ಹುಟ್ಟಿದ ದಿನಾಂಕವನ್ನು ಗುರುತು ಹಾಕಿಕೊಳ್ಳೋಣವೆಂದರೆ ಆ ಕುರಿತು ನಿಖರವಾಗಿ ಹೇಳುವ ಯಾವುದೇ ಶಾಸನ– ಉಲ್ಲೇಖಗಳು ಲಭ್ಯವಿಲ್ಲ. ಸದ್ಯ ಲಭ್ಯವಿರುವ ರೋಮನರ ಚರಿತ್ರೆಯಲ್ಲಿ 1940ರಲ್ಲಿ 'ವೆಟಿಕನ್ ಪೋಲಿಗ್ಲಾಟ್' ಮುದ್ರಣಾಲಯವು ಹೊರತಂದ ಒಂದು ರೋಮನ್ ಪುಸ್ತಕ ಈ ರೀತಿ ಉಲ್ಲೇಖಿಸುತ್ತದೆ– "ವಿ ನೋ ನೈದರ್ ದ ಡೇ ನಾರ್ ದ ಇಯರ್ ಆಫ್ ಜೀಸಸ್' ಬರ್ತ್ ವಿತ್ ಅಬ್‌ಸೊಲ್ಯೂಟ್ ಸರ್ಟೇನಿಟಿ" ಅಂದರೆ, ಏಸುಕ್ರಿಸ್ತ ಹುಟ್ಟಿದ ದಿನಾಂಕ ಅಥವಾ ಇಸವಿಯ ಕುರಿತು ನಮಗೆ ನಿಖರವಾದ ಮಾಹಿತಿ ಇಲ್ಲ ಎಂದಾಯಿತು.

ರೋಮ್‌ನ ಮೂಲ ಜನಾಂಗಕ್ಕೆ 'ಪಾಗನ್' ಎಂದು ಹೆಸರು. ಡಿಸೆಂಬರ್ 25 ಅವರಿಗೆ ಸೂರ್ಯದೇವನ ಹಬ್ಬವಾಗಿತ್ತು. ಅಂದಿನಿಂದ ಹಗಲು ದೀರ್ಘವಾಗುತ್ತ ಹೋಗುವುದರಿಂದ, ಸೂರ್ಯನ ಸಾನ್ನಿಧ್ಯ ವೃದ್ಧಿಸುವ ದಿನವೆಂದು ಆ ದಿನವನ್ನು ಗುರುತಿಸಿಕೊಂಡಿದ್ದರು. ರೋಮ್ ಸುತ್ತಮುತ್ತಲ ರಾಷ್ಟ್ರಗಳಲ್ಲೂ ಪಾಗನರ ಜನಸಂಖ್ಯೆ ಗರಿಷ್ಠ ಮಟ್ಟದಲ್ಲಿತ್ತು. ವಿಶ್ವದಲ್ಲಿ ಕ್ರೈಸ್ತ ಧರ್ಮ ನೆಲೆ ನಿಲ್ಲುವ ಹಂತದಲ್ಲಿ ಅಂದರೆ, ನಾಲ್ಕನೆಯ ಶತಮಾನದಲ್ಲಿ ರೋಮ್‌ನ ಇಗರ್ಜಿಯು ಈ ದಿನವನ್ನೇ ಕ್ರಿಸ್‌ಮಸ್ ಆಚರಣೆಗಾಗಿ ಆಯ್ದುಕೊಂಡಿತು. ಏಸುವು ದೇವರ ಮಗನಾದುದರಿಂದ, ಈ ಲೋಕಕ್ಕೆ ಜ್ಞಾನದ ಬೆಳಕನ್ನು ನೀಡಿದುದರಿಂದ ಈ ದಿನ ಪ್ರಸ್ತುತ ಎಂದಿತು ಇಗರ್ಜಿ.

ಇಂದು ಪಶ್ಚಿಮ ದೇಶಗಳ ಕೆಲವು ಮಿಶನರಿ ಇಗರ್ಜಿಗಳು ಕ್ರಿಸ್ತನ ಜನನವಾದುದು ಜನವರಿ ಆರು ಎಂದು ಪರಿಗಣಿಸುವುದನ್ನು ಬಿಟ್ಟರೆ, ವಿಶ್ವಾದ್ಯಂತ ಕ್ರಿಸ್‌ಮಸ್ ಡಿಸೆಂಬರ್ 25ರಂದೇ ಆಚರಿಸಲ್ಪಡುತ್ತದೆ.

**(ತರಂಗ 26 – 12 – 2013)**

# ವ್ಯಾಟಿಕನ್ ವಿರುದ್ಧ ವಿಶ್ವಸಂಸ್ಥೆ ಕಿಡಿ

ಜಿನಿವಾ: ಜಾಗತಿಕವಾಗಿ ಪಾದ್ರಿಗಳ ಲೈಂಗಿಕ ಹಗರಣಗಳನ್ನು ವ್ಯಾಟಿಕನ್ ನಿರ್ವಹಿಸುತ್ತಿರುವ ರೀತಿಯನ್ನು ವಿಶ್ವಸಂಸ್ಥೆಯ ಸಮಿತಿಯೊಂದು ತೀವ್ರವಾಗಿ ಖಂಡಿಸಿದೆ. "ಸಣ್ಣ ಮಕ್ಕಳನ್ನು ತಮ್ಮ ಲೈಂಗಿಕ ತೃಷೆಗೆ ಬಳಸಿಕೊಳ್ಳುತ್ತಿರುವ ಪಾದ್ರಿಗಳ ವಿರುದ್ಧ ಕ್ರಮ ಕೈಗೊಳ್ಳುವುದನ್ನು ಬಿಟ್ಟು ಅವರ ರಕ್ಷಣೆಗೇ ವ್ಯಾಟಿಕನ್ ನಿಂತಿದೆ" ಎಂದು ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಸಮಿತಿ ಕಿಡಿಕಾರಿದೆ. ಆದರೆ, "ಪಾದ್ರಿಗಳ ಮೇಲಿನ ಲೈಂಗಿಕ ಹಗರಣಗಳ ಕುರಿತು ಆಯಾಯ ದೇಶಗಳ ಸ್ಥಳೀಯ ಕಾನೂನು ಜಾರಿ ಸಂಸ್ಥೆಗಳು ಕ್ರಮ ತೆಗೆದುಕೊಳ್ಳಬೇಕೇ ಹೊರತು ಈ ವಿಷಯದಲ್ಲಿ ತಾನು ಯಾವ ಕ್ರಮಕ್ಕೂ ಮುಂದಾಗಲು ಸಾಧ್ಯವಿಲ್ಲ" ಎಂದು ವ್ಯಾಟಿಕನ್ ಹೇಳಿ ಕೈ ತೊಳೆದುಕೊಂಡಿದೆ. ಪಾದ್ರಿಗಳು ಮಕ್ಕಳನ್ನು ಲೈಂಗಿಕವಾಗಿ ಬಳಸಿಕೊಂಡಿರುವ ಹಲವು ಪ್ರಕರಣಗಳು ನಾನಾ ದೇಶಗಳಿಂದ ಕೇಳಿಬಂದಿದ್ದವು. ಆದರೆ ಕ್ರೈಸ್ತ ಧರ್ಮದ ಅಧಿನಾಯಕನಂತಿರುವ ವ್ಯಾಟಿಕನ್, ಆರೋಪಿ ಪಾದ್ರಿಗಳ ವಿರುದ್ಧ ಯಾವ ಕ್ರಮಕ್ಕೂ ಮುಂದಾಗಿರಲಿಲ್ಲ.

**(ವಿಜಯ ಕರ್ನಾಟಕ 17–1–2014)**

# 2ನೇ ಸಲವೂ ಶಿಕ್ಷಕರು ಫೇಲ್ : 2,500 ಮಂದಿ ಮನೆಗೆ

ಪಟ್ನಾ, ಜ. 17: 5ನೇ ತರಗತಿಯವರೆಗಿನ ಗಣಿತ, ಇಂಗ್ಲಿಷ್, ಹಿಂದಿ ಪರೀಕ್ಷೆ ಪಾಸಾಗಲು ಬಿಹಾರದ ಸಾವಿರಾರು ಶಿಕ್ಷಕರು ಎರಡನೇ ಬಾರಿಯೂ ವಿಫಲರಾಗಿದ್ದಾರೆ. ಹೀಗಾಗಿ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಅನುತ್ತೀರ್ಣರಾದ 2,500 ಶಿಕ್ಷಕರನ್ನು ಹುದ್ದೆಯಿಂದ ವಜಾಗೊಳಿಸಲು ಬಿಹಾರ ಸರ್ಕಾರ ಶುಕ್ರವಾರ ತೀರ್ಮಾನಿಸಿದೆ. ಶಿಕ್ಷಕರನ್ನು ಕೆಲಸದಿಂದ ವಜಾಗೊಳಿಸುವ ಔಪಚಾರಿಕ ಪ್ರಕ್ರಿಯೆಯನ್ನು ಶಿಕ್ಷಣ ಇಲಾಖೆ ಪೂರ್ಣಗೊಳಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕಳೆದ ವರ್ಷ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ 10,000 ಶಿಕ್ಷಕರು 5ನೇ ತರಗತಿಯ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ನಪಾಸಾಗಿದ್ದರು. ಇವರಿಗೆ ಉತ್ತೀರ್ಣರಾಗಲು ಸರ್ಕಾರ ಇನ್ನೊಂದು ಅವಕಾಶ ಕಲ್ಪಿಸಿತ್ತು. ಆದರೆ ಇದರಲ್ಲೂ ಸಾಕಷ್ಟು ಸಂಖ್ಯೆಯ ಶಿಕ್ಷಕರು ವಿಫಲರಾಗಿದ್ದಾರೆ. 2012ರಲ್ಲಿ 2 ಬಾರಿ ಅನುತೀರ್ಣರಾದ 151 ಶಿಕ್ಷಕರನ್ನು ಕೆಲಸದಿಂದ ವಜಾಗೊಳಿಸಲಾಗಿತ್ತು.

**(ಉದಯವಾಣಿ 18–1–2014)**


## "ಯುಗರಶ್ಮಿ"ಗೆ ಚಂದಾದಾರರಾಗಿರಿ.

## ವಾರ್ಷಿಕ ಚಂದಾದರ

## ಅಂಚೆ ಮೂಲಕ : ರೂ. 70/–

**ವಾರ್ತೆ**

# ಅಹ್ಮದಿಯಾ ಬುಕ್ ಸ್ಟಾಲ್

ಮಂಗಳೂರು: ಮಂಗಳೂರಿನ ಕರಾವಳಿ ಉತ್ಸವ ಮೈದಾನದಲ್ಲಿ ದೇಶೀಯ ಗ್ರಾಹಕರ ಮೇಳ ವಸ್ತು ಪ್ರದರ್ಶನದಲ್ಲಿ ಅಹ್ಮದಿಯಾ ಮುಸ್ಲಿಂ ಜಮಾಅತ್, ಮಂಗಳೂರು ಘಟಕದ ವತಿಯಿಂದ ಸಪ್ಟೆಂಬರ್ 14ರಿಂದ ನವೆಂಬರ್ 10ರ ತನಕ (58 ದಿನಗಳು) ಬುಕ್ ಸ್ಟಾಲನ್ನು ತೆರೆಯಲಾಗಿತ್ತು.

ಸಪ್ಟೆಂಬರ್ 14ರಂದು ಸಂಜೆ ಕರ್ನಾಟಕ ದಕ್ಷಿಣ ವಲಯದ ಪ್ರಧಾನ ಮುಬಲ್ಲಿಗ್ ಮೌಲಾನ ಮುಹಮ್ಮದ್ ಕಲೀಮ್‌ಖಾನ್ ಸಾಹೇಬರು ಪುಸ್ತಕ ಮಳಿಗೆಯನ್ನು ಉದ್ಘಾಟಿಸಿದರು.

ಪುಸ್ತಕ ಮಳಿಗೆಯಲ್ಲಿ 44 ಭಾಷೆಗಳಲ್ಲಿರುವ ಪವಿತ್ರ ಖುರ್‌ಆನಿನ ಭಾಷಾಂತರಗಳನ್ನು ಪ್ರದರ್ಶನಕ್ಕೆ ಇರಿಸಲಾಗಿತ್ತು. ಕನ್ನಡ, ಇಂಗ್ಲಿಷ್, ಹಿಂದಿ, ಉರ್ದು, ಮಲಯಾಳಂ, ತಮಿಳು, ತೆಲುಗು ಪುಸ್ತಕಗಳನ್ನು ಮಾರಾಟಕ್ಕೆ ಇಡಲಾಗಿತ್ತು. ಈ ಭಾಷೆಗಳಲ್ಲಿರುವ ಕಿರುಹೊತ್ತಗೆಗಳನ್ನು ಉಚಿತವಾಗಿ ಹಂಚಲಾಯಿತು.

ಸುಮಾರು 2ಲಕ್ಷ ಮಂದಿ ವಸ್ತು ಪ್ರದರ್ಶನವನ್ನು ಸಂದರ್ಶಿಸಿದ್ದಾರೆಂದು ಅಂದಾಜಿಸಲಾಗಿದೆ. ನಮ್ಮ ಬುಕ್‌ಸ್ಟಾಲನ್ನು ಸಂದರ್ಶಿಸಿದ ಸುಮಾರು 50 ಸಾವಿರ ಮಂದಿಗೆ ಇಸ್ಲಾಂ ಮತ್ತು ಅಹ್ಮದಿಯತ್‌ನ ಸಂದೇಶಗಳನ್ನು ತಲಪಿಸಲಾಯಿತು. ಈ ಮಧ್ಯೆ "ಅಹ್ಮದಿಯಾ ಮುಸ್ಲಿಮ್ ಜಮಾಅತ್ ಬ್ರಿಟಿಷರು ನೆಟ್ಟ ಗಿಡವೇ?" ಎಂಬ ಪುಸ್ತಕವನ್ನು ಸ್ಥಳೀಯ ಅಧ್ಯಕ್ಷರಾದ ಮುಹಮ್ಮದ್ ಯೂಸುಫ್ ಸಾಹೇಬರು ಬಿಡುಗಡೆಗೊಳಿಸಿದರು. ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ದಕ್ಷಿಣ ವಲಯದ ದಾವತೆ ಇಲಲ್ಲಾಹ್ ಕಾರ್ಯದರ್ಶಿ ಶಾಹಿದ್ ಬದ್ರುದ್ದೀನ್ ಸಾಹೇಬ್ ಮತ್ತು ಸ್ಥಳೀಯ ಘಟಕದ ಹುದ್ದೇದಾರರು ಉಪಸ್ಥಿತರಿದ್ದರು.

# ಅಹ್ಮದಿಯಾ ಶಾಂತಿ ಸಮ್ಮೇಳನ

ಬೆಂಗಳೂರು: ಅಹ್ಮದಿಯಾ ಮುಸ್ಲಿಂ ಜಮಾಅತ್, ಬೆಂಗಳೂರು ಘಟಕದ ವತಿಯಿಂದ ಕಳೆದ ಅಕ್ಟೋಬರ್ 26ರಂದು **ATRIA HOTEL** ನಲ್ಲಿ ಶಾಂತಿ ಸಮ್ಮೇಳನವನ್ನು ಏರ್ಪಡಿಸಲಾಗಿತ್ತು, ಸ್ಥಳೀಯ ಘಟಕದ ಅಮೀರ್ ಮುಸದ್ದಿಖ್ ಅಹ್ಮದ್ ಸಾಹೇಬರು ಅಧ್ಯಕ್ಷತೆ ವಹಿಸಿದ್ದರು.

ಕರ್ನಾಟಕದ ಗೃಹ ಸಚಿವರಾದ ಶ್ರೀ ಕೆ.ಜೆ. ಜಾರ್ಜ್ ಮತ್ತು ಸಾರಿಗೆ ಸಚಿವರಾದ ಶ್ರೀ ರಾಮಲಿಂಗ ರೆಡ್ಡಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಅಹ್ಮದಿಯಾ ಮುಸ್ಲಿಂ ಜಮಾಅತಿನ ಪಂಚಮ ಖಲೀಫರಾದ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಸಾಹೇಬರು, ಸಂಭಾವ್ಯ ಮೂರನೇ ಜಾಗತಿಕ ಮಹಾಯುದ್ಧವನ್ನು ತಡೆಯಲಿಕ್ಕೂ ಲೋಕದಲ್ಲಿ ನ್ಯಾಯ–ನೀತಿ, ಶಾಂತಿ–ಸಮಾಧಾನ ಸ್ಥಾಪಿಸಲಿಕ್ಕೂ ಬೇಕಾಗಿ ಜಗತ್ತಿನ ಮಹಾ ಶಕ್ತಿರಾಷ್ಟ್ರಗಳ ನಾಯಕರಿಗೆ ಬರೆದ ಪತ್ರಗಳ ಬಗ್ಗೆ ಮಾಜಿ ಅಮೀರ್ ಮುಹಮ್ಮದ್ ಶಫಿಯುಲ್ಲಾ ಸಾಹೇಬ್ ವಿವರಿಸಿದರು. **WORLD CRISES AND THE PATHWAY TO PEACE** ಎಂಬ ಪುಸ್ತಕವನ್ನು ಬೆಂಗಳೂರು ಪ್ರೆಸ್ ಕ್ಲಬಿನ ಅಧ್ಯಕ್ಷ ಶ್ರೀ ಪಿ. ರಾಮಕೃಷ್ಣ ಉಪಾಧ್ಯಾಯರು ಬಿಡುಗಡೆಗೊಳಿಸಿದರು.

ಸರಕಾರಿ ಉದ್ಯೋಗಸ್ಥರು, ಪೊಲೀಸ್ ಅಧಿಕಾರಿಗಳು, ವಿಶ್ವವಿದ್ಯಾಲಯಗಳ ಉಪಕುಲಪತಿಗಳು, ಕನ್ನಡ ಸಾಹಿತ್ಯ ಅಕಾಡೆಮಿಯ ಸದಸ್ಯರು, ಪುಸ್ತಕ ಪ್ರಕಾಶಕರು, ಡಾಕ್ಟರ್‌ಗಳು, ನ್ಯಾಯವಾದಿಗಳು, ಎಂಜಿನಿಯರುಗಳು, ಸಮಾಜ ಸೇವಕರು, ಸಮಾಜದ ಗಣ್ಯ ವ್ಯಕ್ತಿಗಳು ಮತ್ತು ವಾರ್ತಾ ಮಾಧ್ಯಮಗಳ ಪ್ರತಿನಿಧಿಗಳು ಈ ಸಭೆಯಲ್ಲಿ ಭಾಗವಹಿಸಿದರು.

ಚಿನ್ಮಯ ಮಿಶನಿನ ಪ್ರತಿನಿಧಿ, ಕ್ಯಾಥಲಿಕ್ ಚರ್ಚ್ ಪ್ರತಿನಿಧಿ, ಗುರುದ್ವಾರದ ಪ್ರತಿನಿಧಿ, ಮೌಲ್ವಿ ಕಲೀಂ ಖಾನ್ ಸಾಹೇಬ್, ಕೆ.ಕೆ.ಬದ್ರುದ್ದೀನ್ ಸಾಹೇಬ್ ಮೊದಲಾದವರು ಶಾಂತಿ ಸ್ಥಾಪನೆ ಮತ್ತು ಧರ್ಮ ಸಾಮರಸ್ಯದ ಬಗ್ಗೆ ಭಾಷಣಮಾಡಿದರು. ಎಲ್ಲಾ ಅತಿಥಿಗಳಿಗೆ ಅಹ್ಮದಿಯಾ ಸಾಹಿತ್ಯಗಳನ್ನು ಪಾರಿತೋಷಕವಾಗಿ ನೀಡಲಾಯಿತು.

**ನಿಧನ ವಾರ್ತೆಗಳು**



## ಮೌಲವಿ ಮುಹಮ್ಮದ್ ಅಯ್ಯೂಬ್ ಸಾಹಿಬ್

ಐರಾಪುರಂ: ಮಲಯಾಳಂ ಭಾಷೆಯಲ್ಲಿ ಅಹ್ಮದಿಯಾ ಮುಖವಾಣಿ "ಸತ್ಯದೂತನ್" ಮಾಸ ಪತ್ರಿಕೆಯ ಮಾಜಿ ಪ್ರಧಾನ ಸಂಪಾದಕರೂ ಅಹ್ಮದಿಯಾ ತಮಿಳು ಮುಖವಾಣಿ "ಸಮಾಧಾನವಳಿ" ಮಾಸ ಪತ್ರಿಕೆಯ ಮಾಜಿ ಸಂಪಾದಕರೂ ಆಗಿದ್ದ ಮೌಲವಿ ಮುಹಮ್ಮದ್ ಅಯ್ಯೂಬ್ ಸಾಹಿಬ್ ತನ್ನ 54ನೇ ವರ್ಷ ಪ್ರಾಯದಲ್ಲಿ ಕಳೆದ ನವೆಂಬರ್ 20ರಂದು ನಿಧನರಾದರು. ("ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್")

ಮೌಲವಿ ಅಯ್ಯೂಬ್ ಸಾಹಿಬರು ತಮಿಳುನಾಡಿನ ವಿವಿಧ ಕಡೆಗಳಲ್ಲೂ ಮಾಲಿಯಲ್ಲೂ ಶ್ರೀಲಂಕಾದಲ್ಲೂ ಸೌದಿ ಅರೇಬಿಯಾದಲ್ಲೂ ಮುಬಲ್ಲಿಗರಾಗಿ ಸೇವೆಸಲ್ಲಿಸಿದ್ದಾರೆ. ಅವರು ಮೌಲಾನ ಮುಹಮ್ಮದ್ ಉಮರ್ ಸಾಹಿಬರ ಪ್ರಥಮ ಪುತ್ರಿಯ ಪತಿ. ಅವರು ಪತ್ನಿಯನ್ನೂ ಮಕ್ಕಳನ್ನೂ ಅನೇಕ ಬಂಧು ಬಾಂಧವರನ್ನೂ ಅಗಲಿದ್ದಾರೆ. ಅಲ್ಲಾಹನು ಮತರಿಗೆ ಮಗ್ಫಿರತನ್ನೂ ಜನ್ನತನ್ನೂ ಅನುಗ್ರಹಿಸಲಿ. ಆಮೀನ್.

## ನಿಧನ ವಾರ್ತೆಗಳು

### ಎನ್.ಅಬ್ದುಲ್ ಕರೀಂ ಸಾಹಿಬ್



ಪಂಯುಂಗಾಡಿ: ಜನಾಬ್ ಎನ್. ಅಬ್ದುಲ್ ಕರೀಂ ಸಾಹಿಬ್ ಕಳೆದ ಅಕ್ಟೋಬರ್ 19ರಂದು ತನ್ನ 87ನೇ ವರ್ಷ ಪ್ರಾಯದಲ್ಲಿ ನಿಧನರಾದರು. (ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್")

ಕೇರಳದ ಪ್ರಥಮ ಅಹ್ಮದಿ ಎಡಪ್ಪಕತ್ತ್ ಅಬ್ದುಲ್ಲ ಕುಟ್ಟಿ ಸಾಹೇಬ್ ಅಬ್ದುಲ್ ಕರೀಂ ಸಾಹಿಬರ ತಾಯಿಯ ತಂದೆ. ಸತ್ಯದೂತನ್ ಮಾಸ ಪತ್ರಿಕೆಯ ಮಾಜಿ ಸಂಪಾದಕರಾದ ಎನ್. ಅಬ್ದುರ್ರಹೀಂ ಸಾಹೇಬ್‌ರವರು ಅವರ ಕಿರಿಯ ಸಹೋದರ.

ಮೃತರು ಪತ್ನಿಯನ್ನೂ ಇಬ್ಬರು ಪುತ್ರರನ್ನೂ ಇಬ್ಬರು ಪುತ್ರಿಯರನ್ನೂ ಅನೇಕ ಬಂಧು ಮಿತ್ರಾದಿಗಳನ್ನೂ ಅಗಲಿದ್ದಾರೆ. ಅಲ್ಲಾಹು ಮೃತರಿಗೆ ಮಗ್ಫಿರತನ್ನೂ ಜನ್ನತನ್ನೂ ಅನುಗ್ರಹಿಸಲಿ. ಆಮೀನ್.

### ಯು. ಹಲೀಮಾ ಸಾಹಿಬ

ಮಂಜೇಶ್ವರ: ಮಂಜೇಶ್ವರ ಆದಿಕಾಲದ ಅಹ್ಮದಿಯರ ಪೈಕಿಯಲ್ಲಿ ಸೇರಿದ ಜನಾಬ್ ಅಹ್ಮದ್ ಕುಞ್ಞಿ ಸಾಹಿಬರ ದ್ವಿತೀಯ ಪುತ್ರಿ ಹಾಗೂ ಕೆ. ಪಿ. ಅಬೂಬಕರ್ ಸಾಹಿಬರ ಪತ್ನಿ ಹಲೀಮಾ ಸಾಹಿಬ ತನ್ನ 72ನೇ ವರ್ಷ ಪ್ರಾಯದಲ್ಲಿ ಕಳೆದ ಡಿಸೆಂಬರ್ 5ರಂದು ನಿಧನರಾದರು. ("ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್")

ಹಲೀಮಾರವರು ನಾಲ್ವರು ಪುತ್ರರನ್ನೂ ಇಬ್ಬರು ಪುತ್ರಿಯರನ್ನೂ ಅನೇಕ ಬಂಧುಬಾಂಧವರನ್ನೂ ಅಗಲಿದ್ದಾರೆ.

ಅಲ್ಲಾಹನು ಮೃತರಿಗೆ ಮಗ್ಫಿರತನ್ನೂ ಜನ್ನತನ್ನೂ ಅನುಗ್ರಹಿಸಲಿ. ಆಮೀನ್.

## ಸಂಪಾದಕರಿಗೆ ಪತ್ರ

ಹಿಂದೂಸ್ಥಾನದಲ್ಲಿ ಯೇಸುಕ್ರಿಸ್ತರು: ಜಾಗತಿಕ ಸಾಹಿತ್ಯ ಕೃತಿಗಳ ಬಗ್ಗೆ ವಿಮರ್ಶೆ ಲೇಖನ ಮಾಹಿತಿಯ ಭರಪೂರವನ್ನು ಒದಗಿಸಿತು. ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು ನಮ್ಮ ಜೀವನಕ್ಕೆ ಪೂರಕವಾಗಿವೆ; ಅರ್ಥಗರ್ಭಿತವಾಗಿವೆ. ಇವನ್ನು ಯಾವಾಗಲೂ ಪ್ರಕಟಿಸುತ್ತಲೇ ಇರಿ.

ಮುಸ್ಲಿಂ ಸಮುದಾಯದಲ್ಲಿರುವ ವ್ರತದ ಬಗೆಗಿನ ಲೇಖನ ತುಂಬಾ ಮಾಹಿತಿ ನೀಡಿತು. ಯುಗರಶ್ಮಿ ಪತ್ರಿಕೆ ಧರ್ಮದ ಮೌಢ್ಯವನ್ನು ಕಳೆದು ಅಂಧಕಾರದಲ್ಲಿರುವವರಿಗೆ ಬೆಳಕು ತೋರಿಸಲು ಸಹಕಾರಿ. ಯುಗರಶ್ಮಿಗೆ ಧನ್ಯವಾದ.

**ಧೀರಜ್ ಕೆ. ಜಿ. ಮಣಿಮಜಲು**
ಪತ್ರಿಕೋದ್ಯಮ ವಿದ್ಯಾರ್ಥಿ, ಉಜಿರೆ

**ಅಹ್ಮದಿಯರಿಗೆ ಸುತ್ತೋಲೆ**

## ತಹ್‌ರೀಕ್ ಜದೀದ್

ಹಝ್‌ರತ್ ಖಲೀಫತುಲ್ ಮಸೀಹ್ ಸಾನಿ[ರ] ಅವರಿಂದ ಆರಂಭಿಸಲ್ಪಟ್ಟ "ತಹ್‌ರೀಕ್ ಜದೀದ್" ಯೋಜನೆ 2013 ನವೆಂಬರ್ 1ರಂದು 80ನೇ ವರ್ಷಕ್ಕೆ ಪಾದಾರ್ಪಣೆ ಮಾಡಿರುತ್ತದೆಂದು ಹಝ್‌ರತ್ ಖಲೀಫತುಲ್ ಮಸೀಹ್ ಖಾಮಿಸ್ ನವೆಂಬರ್ 8ರ ಜುಮುಅ ಖುತುಬದಲ್ಲಿ ಘೋಷಿಸಿರುತ್ತಾರೆ.

ಕಳೆದ ವರ್ಷ ಭಾರತದ ಅಹ್ಮದಿಯರು ಈ ನಿಧಿಗೆ ಸುಮಾರು 2 ಕೋಟಿ 19 ಲಕ್ಷ ರೂಪಾಯಿಗಳನ್ನು ಚಂದಾ ನೀಡಿದ್ದಾರೆ. ಅಲ್‌ಹಮ್ದುಲಿಲ್ಲಾಹ್.

ಧನತ್ಯಾಗದ ಕ್ಷೇತ್ರದಲ್ಲಿ ಭಾರತದ ಅಹ್ಮದಿಯರು ಈ ವರ್ಷ ಸಹ 6ನೇ ಸ್ಥಾನವನ್ನು ಪಡೆದಿರುವುದಾಗಿಯೂ ಹಿಂದಿನ ವರ್ಷಕ್ಕಿಂತ 18 ಶತಮಾನ ಹೆಚ್ಚು ಧನತ್ಯಾಗ ಮಾಡುವ ಸೌಭಾಗ್ಯ ಅವರಿಗೆ ಲಭಿಸಿದೆಯೆಂದೂ ಹಝ್‌ರತ್ ಖಲೀಫರು ತಿಳಿಸಿದರು. ಈ ಸಂಧರ್ಭದಲ್ಲಿ ನಾನು ತಹ್‌ರೀಕ್ ಜದೀದ್ ಯೋಜನೆಯಲ್ಲಿ ಕ್ರಿಯಾಶೀಲರಾದ ಎಲ್ಲರನ್ನೂ ಅಭಿನಂದಿಸುತ್ತೇನೆ.

ಹುಝೂರರು 2013–14 ಸಾಲಿಗೋಸ್ಕರ ಭಾರತದ ಜಮಾಅತುಗಳಿಗೆ 15 ಶತಮಾನ ಹೆಚ್ಚಳದೊಂದಿಗೆ ಗುರಿ ನಿಶ್ಚಯಿಸಿದ್ದಾರೆ. ಈ ಗುರಿ ಸಾಧಿಸಲು ಎಲ್ಲ ತಹ್‌ರೀಕ್ ಜದೀದ್ ಕಾರ್ಯಕರ್ತರು ಪ್ರಯತ್ನಶೀಲರಾಗಬೇಕೆಂದೂ ಇಷ್ಟರವರೆಗೆ ಈ ಯೋಜನೆಯಲ್ಲಿ ಸೇರಿರದವರನ್ನು ಸೇರಿಸಲು ಹೆಚ್ಚಿನ ಗಮನ ಹರಿಸಬೇಕೆಂದೂ ಕೇಳಿಕೊಳ್ಳುತ್ತೇನೆ. ಅಲ್ಲಾಹು ನಮಗೆ ಸೌಭಾಗ್ಯವನ್ನು ದಯಪಾಲಿಸಲಿ. ಆಮೀನ್.

**ವಕೀಲುಲ್ ಮಾಲ್,**
**ತಹ್‌ರೀಕ್ ಜದೀದ್, ಖಾದಿಯಾನ್**

**"ದೇಶ ಪ್ರೇಮ (ಧಾರ್ಮಿಕ) ವಿಶ್ವಾಸದ ಅಂಶವಾಗಿದೆ."**

**– ಹಝ್‌ರತ್ ಮುಹಮ್ಮದ್ ಪೈಗಂಬರ್[ಸ]**

# ಲಾಹೋರಿನ ಹುತಾತ್ಮರು*

■ ನಜ್ಮತುನ್ನಿಸಾ ಲೈಝ್

ಓ ಲಾಹೋರ್, ಹುತಾತ್ಮ ಜನರ ನಾಡೇ....
ಈ ಕಾಲ ಘಟ್ಟದ ಅನಂತತೆಯಲ್ಲಿ ನಿನ್ನ ಹೆಸರು ಕೆತ್ತಲಾಗಿದೆ.
ಎಷ್ಟು ಮಹತ್ವವುಳ್ಳ ಬಲಿದಾನ!
ನಾವು ಹೇಗೆ ಮರೆಯುತ್ತೇವೆ ಅಂದಿನ ಕಟು ಸತ್ಯವನ್ನು
ನಿರ್ದಯವಾಗಿ ಗುಂಪು ಕೊಲೆ ನಡೆದಿದ್ದನ್ನು
ಆದರೂ ಕ್ಷಮೆ ನಮ್ಮ ತತ್ವ, ನಮ್ಮ ಪ್ರಭು ನಮಗೆ ಅಜ್ಞಾಪಿಸಿದ್ದು
ಕ್ಷಮೆಯ ಜೊತೆ ಸಹನೆಯೂ

ಓ ಲಾಹೋರ್, ಹುತಾತ್ಮ ಜನರ ನಾಡೇ...
ನಿನಗೆ ಸುರಕ್ಷತೆ ಸಿಗಬಹುದೇ ಇಷ್ಟು ಕ್ರೂರವಾದ ವರ್ತನೆಗೆ ?
ನಿಸ್ಸಂದೇಹವಾಗಿ ಪ್ರಭುವಿನ ಕೋಪ ನಿನ್ನ ಮೇಲೆ ಇದೆ.
ಅದಕ್ಕಾಗಿ ಸಮಾಧಾನದಿಂದ ನಾವು ಕಾದಿರುತ್ತೇವೆ
ನಮ್ಮ ಜೊತೆ ಕಾದಿರು, ಅಲ್ಲಾಹನಿಗೆ ನಮ್ಮ ಜೊತೆ ಇರುವ ಪ್ರೀತಿ
ನಿನ್ನ ವಿರುದ್ಧ ಕೋಪ ಪ್ರಕಟಿಸುವವರೆಗೆ.

ಓ ಲಾಹೋರ್, ಹುತಾತ್ಮ ಜನರ ನಾಡೇ.....
ಲೋಕ ಭಯ ಪಡುತ್ತಿದೆ ಆ ಶಾಪದಿಂದ ಉಂಟಾಗುವ
ಘೋರ ವಿಪತ್ತುಗಳನ್ನು ಕಾಣುವಾಗ .....
"ಇಲ್ಲಿ ಲಾಹೋರ್ ಎಂಬ ನಾಡು ಇತ್ತು"
ಎಂಬ ದೇವವಾಕ್ಯ ಸಾಕಾರಗೊಳ್ಳುವಾಗ...
ನಿಶ್ಚಯವಾಗಿಯೂ ಅಲ್ಲಾಹನ ಮಾತುಗಳು ನಿಜವಾಗಿ ಈಡೇರುತ್ತವೆ.
ನಾವು ಶಿಕ್ಷೆಯನ್ನು ನೆನೆದು ಭಯದಿಂದ ನಡುಗುತ್ತಿದ್ದೇವೆ.

ಓ ಲಾಹೋರ್, ಹುತಾತ್ಮ ಜನರ ನಾಡೇ....
ಯಾಕೆ ನೀನು ಈ ಕ್ರೂರ ವರ್ತನೆ ನಡೆಸಿದ್ದು?
ಈ ವರ್ತನೆಯಿಂದಾಗಿ ನಿನ್ನ ಪ್ರಭುವಿನ ಕಣ್ಣಿಗೆ ಬಿದ್ದೆ
ಯಾರಿಗೂ ಪ್ರಭುವಿನ ಕೋಪದಿಂದ ಪಾರಾಗಲು ಸಾಧ್ಯವಿಲ್ಲ
ನಿನಗಾಗಿ ನಿಶ್ಚಯಿಸಿರುವ ಶಿಕ್ಷೆಯಿಂದ ಕೂಡ

ಓ ಲಾಹೋರ್, ಹುತಾತ್ಮ ಜನರ ನಾಡೇ....
ನೀನು ಅವರ ಮನೆಯನ್ನು ಶೂನ್ಯ ಮಾಡಿದರೂ
ಅವರ ಪತ್ನಿಯರು ತಮ್ಮ ಮಕ್ಕಳನ್ನು
ಜುಮಾ ನಮಾಝಿಗೆ ಕಳುಹಿಸಿದರು.
ಹಾಗೆ .... ಆ ಮಕ್ಕಳು ಸಹ ತಮ್ಮ ಹುತಾತ್ಮ ಪಿತರ
ಅದೇ ನಮಾಝ್ ಸಫ್‌ನಲ್ಲಿ ಹೋಗಿ ನಿಂತಾಗ ....
ಲೋಕ ಆ ಧೈರ್ಯದ ದೃಶ್ಯಗಳನ್ನು ಕಂಡು ಆಶ್ಚರ್ಯಗೊಂಡಿತು.
ಆದರೆ .... ಓ ಲಾಹೋರ್,
ನೀನು ನಾಶ ಹೊಂದುವ ವಿಧಿಗೆ ಸೇರಿದವನಾಗಿದ್ದಿ!

* ಲಾಹೋರಿನಲ್ಲಿರುವ ಎರಡು ಅಹ್ಮದಿಯಾ ಮಸೀದಿಗಳಲ್ಲಿ ನಡೆದ ದಾಳಿಯಲ್ಲಿ ಹುತಾತ್ಮರಾದವರ ಸ್ಮರಣೆಯಲ್ಲಿ.



ಮಂಗಳೂರಿನ ಕರಾವಳಿ ಉತ್ಸವ ಮೈದಾನದಲ್ಲಿ ದೇಶಿಯ ಗ್ರಾಹಕರ ಮೇಳ ವಸ್ತು ಪ್ರದರ್ಶನದಲ್ಲಿ ಅಹ್ಮದಿಯಾ ಪುಸ್ತಕ ಮಳಿಗೆ.




ಕರ್ನಾಟಕ ದಕ್ಷಿಣ ವಲಯದ ಪ್ರಧಾನ ಅಹ್ಮದಿಯಾ ಮುಬಲ್ಲಿಗ್ ಮೌಲಾನ ಮುಹಮ್ಮದ್ ಕಲೀಮ್ ಖಾನ್ ಸಾಹೇಬರು ಪುಸ್ತಕ ಮಳಿಗೆಯನ್ನು ಉದ್ಘಾಟಿಸಿದರು.





ಬೆಂಗಳೂರಿನಲ್ಲಿ ಜರಗಿದ ಅಹ್ಮದಿಯಾ ಶಾಂತಿ ಸಮ್ಮೇಳನ.



ಪೆಲಸ್ತೀನ್ ಅಹ್ಮದಿಯಾ ಮುಸ್ಲಿಂ ಜಮಾಅತ್ ಅಮೀರ್ ಮುಹಮ್ಮದ್ ಶರೀಫ್ ಔದ ಸಾಹಿಬ್ 11-01-2014ರಂದು ಕೋಝಿಕೋಡಿನ ಅಹ್ಮದಿಯಾ ಮಸ್ಜಿದ್ "ಬೈತುಲ್ ಖುದ್ದೂಸ್" ಸಂದರ್ಶಿಸಿದಾಗ ಅವರನ್ನು "ಯುಗರಶ್ಮಿ" ಸಂಪಾದಕ ಮುಹಮ್ಮದ್ ಯೂಸುಫ್ ಭೇಟಿಯಾದರು.

Registered with the Registrar of Newspapers for India No. R.N. 27354/75
Yugarashmi Kannada Quarterly, February - 2014. Price : Rs. 15/-





ಅಹ್ಮದಿಯಾ ಮುಸ್ಲಿಂ ಜಮಾಅತಿನ
ವತಿಯಿಂದ ಪ್ರಕಟಿಸಲ್ಪಟ್ಟ

# ಪವಿತ್ರ ಖುರ್‌ಆನ್

ಕನ್ನಡ ಭಾಷಾಂತರ

ಬೆಲೆ : ರೂ. 200/-



# ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ

ಗ್ರಂಥಕರ್ತ : ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್

ಪುಟಗಳು - 320. ಬೆಲೆ : 100/-

## ದೊರೆಯುವ ವಿಳಾಸ

AHMADIYYA MUSLIM MISSION
No.1, 3rd Cross Road,
Wilson Garden, Bangalore - 560 027
Phone : 080 - 22246133

NAZARAT NASHR-O-ISHAAT
Sadr Anjuman Ahmadiyya
QADIAN - 143516
(PUNJAB)

**National Toll Free Number : 1800 3010 2131**
**National Website : ahmadiyyamuslimjamaat.in**
**International Website : alislam.org**
**Email : info@ahmadiyyamuslimjamaat.in**

Edited and Published by Muhammad Yusuf on behalf of Jamath Ahmadiyya at 10-23-1008/1, Ist Floor, Ansari Road, Mangalore - 575 001.
Printed at 'Karavali Printers', Azizuddin Road, Mangalore on behalf of Jubilee Printing Press, Mangalore.
Typeset at 'We Are Designers', Bharath Building, Hampankatta, Mangalore - 575 001